(ಬೆಂಗಳೂರು ಕೆಂಪೇಗೌಡರ ಮೂಲಪುರುಷ)

ಆವತಿನಾಡ ಪ್ರಭು

ರಣಭೈರೇಗೌಡ

ಲೇಖಕರು

ನಂದಿ ವೆಂಕಟೇಶಮೂರ್ತಿ ಎಂ.ಎ., ಡಿ.ಸಿ.ಟಿ.

ಪರಿಷ್ಕರಣ

ನಂದಿ ವೆಂಕಟಸ್ವಾಮಿ ಎಂ.ಎ., ಬಿ.ಎಡ್.

ಮಾಗಡಿ ಕೆಂಪೇಗೌಡ ಇತಿಹಾಸ ಸಂಗ್ರಹಕರು ಮತ್ತು ಪ್ರಕಾಶಕರು

ಬಿ. ವಿ. ಲಕ್ಷ್ಮಣ್

(ಭದ್ರಾವತಿ ಕಲಾವಿದರು)

ಬಿ. ವಿ. ಲಕ್ಷ್ಮಣ್
ಮಾಗಡಿ ಕೆಂಪೇಗೌಡ ಇತಿಹಾಸ ಸಂಗ್ರಹಕಾರರು ಮತ್ತು ಪ್ರಕಾಶಕರು
ಮನೆ ನಂ. 10, 2ನೇ ಅಡ್ಡರಸ್ತೆ, ಗೋವಿಂದರಾಜನಗರ
ಬೆಂಗಳೂರು-560040

ಬೆಲೆ ರೂ. 6-00

ಮುದ್ರಕರು :
ಇಳಾ ಅಸೋಸಿಯೇಟ್ಸ್
181/183, ಮೂರನೇ ಮುಖ್ಯರಸ್ತೆ
ಚಾಮರಾಜಪೇಟೆ
ಬೆಂಗಳೂರು-560018

ಓಂ

॥ ಶ್ರೀ ಕಾಲಭೈರವೇಶ್ವರರಾಯ ನಮಃ ॥



ಆಶೀರ್ವಚನ

ಭಾರತೀಯ ಸಂಸ್ಕೃತಿ ಪವಿತ್ರವಾದದ್ದು. ಭಾರತೀಯರು ಸದಾ ಕಾವ್ಯ ಶಾಸ್ತ್ರ, ವಿನೋದದಿಂದ ಬಾಳುತ್ತಿದ್ದು, ಆದರ್ಶ ಜೀವನಕ್ಕೆ ಹೆಸರಾಗಿದ್ದು, ದೈವಭಕ್ತ, ದೇಶಭಕ್ತ, ಧರ್ಮಶ್ರದ್ಧೆ ಉಳ್ಳವರಾಗಿ ಮುಂದಿನ ನವ ಹಾಗೂ ಯುವ ಪೀಳಿಗೆಗೆ ಮಾರ್ಗದರ್ಶಕರಾಗಿದ್ದರು. ದೇಶ, ಕಾಲ, ಪರಿಸ್ಥಿತಿಗೆ ಕಟ್ಟು ಬಿದ್ದು ಸದಾಚಾರಕ್ಕೆ ಚರಮಗೀತೆ ಹಾಡಿ, ನವೀನ ನಾಗರೀಕತೆ ಸೋಗಿನಲ್ಲಿ ಜೀವನಮೌಲ್ಯಗಳನ್ನು ಕಳೆದುಕೊಂಡು ಮೋಸ, ವಂಚನೆ, ಅನ್ಯಾಯಗಳ

ಆಸರೆ ಪಡೆದು, ಆಲಸ್ಯ ಮೈಗೂಡಿಸಿಕೊಂಡು "ಅಲ್ಪಶ್ರಮ ಅಧಿಕ ಲಾಭ" ಎಂಬ ಮಂತ್ರೋಪಚ್ಚಾರಣೆಯಿಂದ ಯುವ ಪೀಳಿಗೆ ಅನ್ಯಮಾರ್ಗ ಹಿಡಿಯಲು ಅವಕಾಶ ಮಾಡಿ ಜನಜೀವನ ಅಸ್ತವ್ಯಸ್ತವಾಗಿದೆ, ಇಂಥಹ ಪರಿಸ್ಥಿತಿಯಲ್ಲಿ "ಕಾವ್ಯೇಷುನಾಟಕಂ ರಮ್ಯಂ" ಎಂಬಂತೆ ಇಂದಿನ ಜನ ಸಿನೆಮಾ, ನಾಟಕಗಳಲ್ಲಿ ಹೆಚ್ಚು ಆಸಕ್ತಿ ಇಟ್ಟುಕೊಂಡಿರುತ್ತಾರೆ. ಆದ್ದರಿಂದ ಸಿನೆಮಾ ಮತ್ತು ನಾಟಕಗಳು ಅವರನ್ನು ಸನ್ಮಾರ್ಗಕ್ಕೊಯ್ಯುವ ಸಾಧನಗಳಾಗಬೇಕು.

ಬೆಂಗಳೂರು ನಿರ್ಮಾಪಕರಾದ ಕೆಂಪೇಗೌಡರ ಮೂಲಪುರುಷ ಆವತಿ ನಾಡ ಪ್ರಭು ರಣಭೈರೇಗೌಡರ ಐತಿಹಾಸಿಕ ನಾಟಕವನ್ನು ಪ್ರಕಾಶಕರಾದ ಬಿ. ವಿ. ಲಕ್ಷ್ಮಣ್, ಲೇಖಕ ನಂದಿ ವೆಂಕಟೇಶಮೂರ್ತಿ ಹಾಗೂ ನಂದಿ ವೆಂಕಟಸ್ವಾಮಿಗಳಿಂದ ಪರಿಷ್ಕಾರಗೊಂಡು ದೇಶಭಕ್ತಿ, ದೈವಭಕ್ತಿ, ಧರ್ಮಶ್ರದ್ಧೆಗಳೊಡನೆ ಮೂರ್ತಿವೆತ್ತಿ ಬಂದಿರುವ ಈ ಕೃತಿ ಶ್ಲಾಘನೀಯವಾದದ್ದು.

ಕಲಾಭಿಮಾನಿಗಳು ಇದನ್ನು ಪುರಸ್ಕರಿಸಿ ಸಹಕಾರ ಕೊಟ್ಟು ಶ್ರಮಿಸಿ ಇವರಿಗೆ ಸಂತೋಷವನ್ನುಂಟು ಮಾಡಲೆಂದು ತುಂಬು ಹೃದಯದಿಂದ ಹಾರೈಸುತ್ತೇನೆ.

ಇತಿ ಶ್ರೀ ಮುಖ

ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳು

ಶ್ರೀ ಆದಿಚುಂಚನಗಿರಿ


ಮಹಾಸಂಸ್ಥಾನ

ಅರ್ಪಣೆ

ಈ ನಾಟಕದ ಕೃತಿಯನ್ನು ಪೂಜ್ಯ ತಂದೆಯವರಾದ
ವೆಂಕಟಪ್ಪಗೌಡರ ಪಾದಪದ್ಮಂಗಳಿಗೆ
ಅರ್ಪಿಸುತ್ತಿದ್ದೇನೆ.

ಬಿ. ವಿ. ಲಕ್ಷ್ಮಣ್
ಪ್ರಕಾಶಕರು

ಒಂದು ಮಾತು



ಭದ್ರಾವತಿ ಶ್ರೀ ಬಿ. ವಿ. ಲಕ್ಷ್ಮಣ್ ರವರನ್ನು ಜನರು ನಾಟಕದ ಲಕ್ಷ್ಮಣ ಎಂದು ಕರೆಯುತ್ತಾರೆ. ಒಬ್ಬೊಬ್ಬರಿಗೆ ಒಂದೊಂದು ವಿಧವಾದ ಮಹತ್ಕಾಂಷೆ. ಶ್ರೀ ಬಿ. ವಿ. ಲಕ್ಷ್ಮಣ್‌ರವರಿಗೆ ನಾಟಕಗಳನ್ನು ಬರೆಯಿಸುವ ಮತ್ತು ಅಭಿನಯಿಸುವ ಹುಚ್ಚು. ಈ ಹುಚ್ಚಿನಿಂದ ಆಸ್ತಿಪಾಸ್ತಿಗಳನ್ನು ಕಳೆದುಕೊಂಡರು. ಅವರಿಗೆ ನಾನು ಕಂದಾಯದ ಮಂತ್ರಿಯಾಗಿದ್ದಾಗ ವ್ಯವಸಾಯದ ಭೂಮಿಯನ್ನು ಮಂಜೂರು ಮಾಡಿಸಿದ್ದೆ. ನಾಟಕ ಮಂಡಲಿಯನ್ನು ಕಟ್ಟಿ ಅದನ್ನು ಕಳೆದುಕೊಂಡರು. ಇವರು ಬೆಂಗಳೂರು ನಿರ್ಮಾಪಕ ಮಾಗಡಿ ಕೆಂಪೇಗೌಡ ಮತ್ತು ಅವರ ಪೂರ್ವಿಕರ ಇತಿಹಾಸವನ್ನು ಶಾಶ್ವತಗೊಳಿಸುವ ಸಲುವಾಗಿ ಸುಮಾರು 30 ವರ್ಷಗಳ ಕಾಲದಿಂದ ಶ್ರಮಿಸುತ್ತಾ ಬಂದಿದ್ದಾರೆ. ಈಚೆಗೆ ಮಾಗಡಿ ಕೆಂಪೇಗೌಡರ ಮೂಲಪುರುಷ ವಂಶದ ಅವತಿನಾಡಿನ ರಣಭೈರೇಗೌಡರ ಜೀವನ ಕುರಿತು ನಂದಿ ವೆಂಕಟೇಶಮೂರ್ತಿಯವರಿಂದ ನಾಟಕವನ್ನು ಬರೆಯಿಸಿರುತ್ತಾರೆ. ನಾಟಕಕ್ಕೆ ಬೇಕಾದ ಕಥಾವಸ್ತುವನ್ನು ಸಂಗ್ರಹಿಸಿ ಕೊಟ್ಟವರು ಬಿ ವಿ ಲಕ್ಷ್ಮಣ್‌ರವರು. ಈ ನಾಟಕ ಐತಿಹಾಸಿಕ ಘಟನೆಗಳಿಗೆ ಸಂಬಂಧ ಪಟ್ಟದ್ದಾಗಿದೆ. ಆ ಕಾಲದ ಸನ್ನಿವೇಶ ಅನುಗುಣವಾಗಿ ಪಾತ್ರಗಳನ್ನು ಸೃಷ್ಟಿಸುವಲ್ಲಿ ಶ್ರೀ ನಂದಿ ವೆಂಕಟೇಶಮೂರ್ತಿಯವರು ಯಶಸ್ವಿಯಾಗಿರುತ್ತಾರೆ, ಈ ಕೃತಿ ನಂದಿ ವೆಂಕಟಸ್ವಾಮಿಯವರಿಂದ ಪರಿಷ್ಕರಿಸಲ್ಪಟ್ಟಿರುತ್ತೆ. ಒಟ್ಟಿನಲ್ಲಿ ಹೇಳುವುದಾದರೆ ವೆಂಕಟೇಶಮೂರ್ತಿಯವರು ಉತ್ತಮ ರೀತಿಯಲ್ಲಿ ತಮ್ಮ ಕಾರ್ಯವನ್ನು ನೆರವೇರಿಸಿರುತ್ತಾರೆ.

ಈ ನಾಟಕ ಕನ್ನಡ ನಾಡಿನಲ್ಲಿ ಪ್ರದರ್ಶಿಸಲ್ಪಟ್ಟು ಯಶಸ್ವಿಯಾಗಲೆಂದು ಹಾರೈಸುತ್ತೇನೆ.

ಕಡಿದಾಳ ಮಂಜಪ್ಪ
ಕರ್ನಾಟಕ ಮಾಜಿ ಮುಖ್ಯಮಂತ್ರಿ



ಮುನ್ನುಡಿ

ಶ್ರೀಮಾನ್ ಬಿ. ವಿ. ಲಕ್ಷ್ಮಣ್‌ರವರನ್ನು ಹತ್ತಾರು ವರ್ಷಗಳಿಂದ ಬಲ್ಲೆ. ಅವರು ಇಳಿ ವಯಸ್ಸಿನಲ್ಲೂ ಉತ್ಸಾಹ ಕ್ರಿಯಾಶೀಲರಂತೆ ಕೆಲಸ ಮಾಡುತ್ತಾರೆ. ಹಿಡಿದ ಕೆಲಸವನ್ನು ಯಾವ ಕಠಿಣ ಸಂದರ್ಭದಲ್ಲಿಯೂ ನಿರಾಶರಾಗದೆ ಪೂರೈಸುವ ಛಲ ಅವರದು.

ಕೆಂಪೇಗೌಡರ ವಂಶಕ್ಕೆ ಸಂಬಂಧಿಸಿದ ಇತಿಹಾಸದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ, ಅದಕ್ಕೊಂದು ರೂಪ ಕೊಡುವ ಕೆಲಸದಲ್ಲಿ ಮೂವತ್ತು ವರ್ಷಗಳಿಂದ ನಿರತರಾಗಿದ್ದಾರೆ.

ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶಗಳಲ್ಲಿ ಸುತ್ತಾಡಿ, ಅನೇಕ ಅಮೂಲ್ಯವಾದ ದಾಖಲೆಗಳನ್ನು ಸಂಗ್ರಹಿಸಿದ್ದಾರೆ.

ಸುಪ್ರಸಿದ್ಧ ಸಾಹಿತಿಗಳಾದ ಶ್ರೀ ಎಸ್. ಕೆ. ಕರೀಂಖಾನ್‌ರವರಿಂದ ಮಹಾಪ್ರಭು ಮಾಗಡಿ ಕೆಂಪೇಗೌಡ, ಬೆಂಗಳೂರು ನಿರ್ಮಾಪಕ ಮಾಗಡಿ ಕೆಂಪೇಗೌಡ ನಾಟಕಗಳನ್ನು ಬರೆಯಿಸಿರುತ್ತಾರೆ.

ಶ್ರೀ ನಂದಿ ವೆಂಕಟೇಶಮೂರ್ತಿಯವರಿಂದ "ಅವತಿನಾಡ ಪ್ರಭು ರಣ ಭೈರೇಗೌಡ", "ಮಹಾತ್ಯಾಗಿ ಲಕ್ಷ್ಮೀದೇವಿ", "ಒಕ್ಕಲಿಗರ ಇತಿಹಾಸ ಮತ್ತು ಪರಂಪರೆ" ಎಂಬ ಪುಸ್ತಕಗಳನ್ನು ಬರೆಯಿಸಿ ಶ್ರೀ ನಂದಿ ವೆಂಕಟಸ್ವಾಮಿಗಳಿಂದ ಪರಿಷ್ಕಾರ ಮಾಡಿಸಿ ಮುದ್ರಿಸಿರುತ್ತಾರೆ. ಶ್ರೀ ಮಂಜುಳಾರವರಿಂದ "ಉತ್ತರೀ ದುರ್ಗ"ವೆಂಬ ಪುಸ್ತಕವನ್ನು ಬರೆಯಿಸಿ ಪ್ರಕಟಿಸಿದ್ದಾರೆ.

ಕರ್ನಾಟಕದ ನಾನಾ ಭಾಗಗಳಲ್ಲಿ ಈ ನಾಟಕಗಳನ್ನು ಆಡಿಸುವ ಮೂಲಕ ಇತಿಹಾಸದ ಪ್ರಸಾರವನ್ನು ಸರ್ವೋದ್ಧಾರವಾಗಿ ನೆರವೇರಿಸುತ್ತಾ ಇದ್ದಾರೆ.

ಯಲಹಂಕ, ಬೆಂಗಳೂರು, ಮಾಗಡಿ ಪ್ರಭುಗಳ ಬಗ್ಗೆ ಶ್ರೀ ಬಿ. ವಿ. ಲಕ್ಷ್ಮಣ್ ಅವರಂತೆ ಚಿಂತೆ ಅಂಟಿಸಿಕೊಂಡಿರುವ ವ್ಯಕ್ತಿಗಳು ವಿರಳ. ಅದೊಂದೇ ಅವರ ಏಕಮಾತ್ರ ಜೀವನಧ್ಯೇಯ. ಅದಕ್ಕಾಗಿ ಆವರು ಯಾವ ತ್ಯಾಗಕ್ಕೂ ಸಿದ್ಧ. ಅವರ ಏಕೈಕ ನಿಷ್ಠೆಯನ್ನು ಯಾರಾದರೂ ಮೆಚ್ಚಲೇಬೇಕು. ಶ್ರೀ ಬಿ. ವಿ. ಲಕ್ಷ್ಮಣ್‌ರವರ ಉತ್ಸಾಹವನ್ನು ಉದ್ದೀಪನಗೊಳಿಸಿ ಅವರಿಗೆ ಎಲ್ಲಾ ಪ್ರೋತ್ಸಾಹವನ್ನು ನೀಡುತ್ತಿರುವ ನಂದಿ ಸಹೋದರರಾದ ಶ್ರೀ ಎನ್. ವೆಂಕಟೇಶಮೂರ್ತಿ ಮತ್ತು ಶ್ರೀ ಎನ್. ವೆಂಕಟಸ್ವಾಮಿಗಳು ಅಭಿನಂದನಾರ್ಹರು.

ದೇ. ಜವರೇಗೌಡ
ಮಾಜಿ ಉಪಕುಲಪತಿಗಳು
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಲೇಖಕರ ನುಡಿ

ಕ್ರಿ. ಶ. 1340ರಲ್ಲಿ ರಣಭೈರೇಗೌಡರು ಆವತಿ, ಮಧುಗಿರಿ, ಕೊರಟಗೆರೆ, ಕೋಡಿ ಮಂಚೇನಹಳ್ಳಿ (ಚಿಕ್ಕಬಳ್ಳಾಪುರ), ಹೊಸಕೋಟೆ, ಕೋಲಾರ ಪ್ರಾಂತ್ಯಗಳನ್ನು ಆಳಿ, ಯಲಹಂಕದ ಕಡೆ ರಾಜ್ಯವನ್ನು ವಿಸ್ತರಿಸಿ, ಆವತಿನಾಡ ಪ್ರಭು ಎಂದು ಇತಿಹಾಸ ಪ್ರಸಿದ್ಧರಾಗಿದ್ದಾರೆ. ಅವರು ಇಲ್ಲಿಗೆ 'ಎಲ್ಲಿಂದ ಬಂದರು ? ಏಕೆ ಬಂದರು ? ಹೇಗೆ ಬಂದರು ? ಎಂಬ ವಿಚಾರವೇ ಈ ನಾಟಕದ ಮುಖ್ಯ ಕಥಾ ವಸ್ತು.

ಈ ಕೃತಿ ರಚನೆಗೆ, ಪ್ರಕಾಶಕರಾದ ಬಿ. ವಿ. ಲಕ್ಷ್ಮಣ್‌ರವರು ಲೇಖಕರೊಡನೆ ಓಡಾಡಿ ಎಡಬಿಡದ ಸತತ ಪ್ರಯತ್ನದಿಂದ ಶ್ರಮಿಸಿರುತ್ತಾರೆ. ಆದಿ ಚುಂಚನಗಿರಿಯ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳು ಆಶೀರ್ವಾದ ಮಾಡಿ ಹರಿಸಿರುತ್ತಾರೆ. ಪೂಜ್ಯ ಮಹನೀಯರಾದ ಕುವೆಂಪು, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಕಡಿದಾಳ ಮಂಜಪ್ಪನವರು, ಪ್ರೊ॥ ಡಿ. ಜವರೇಗೌಡರು, ಶ್ರೀ ಎಂ. ಚಿನ್ನಸ್ವಾಮಿಯವರು, ಪ್ರೊ॥ ಜಿ.ಆರ್.ರಂಗಸ್ವಾಮಯ್ಯನವರು, ಶ್ರೀ ಹೆಚ್. ಆರ್. ದಾಸೇಗೌಡರು, ಶ್ರೀ ಬಿ. ಎನ್. ಚಂದ್ರಕಾಂತರವರು, ಕರಡು ಪ್ರತಿಯನ್ನು ಪರಿಶೀಲಿಸಿ, ಮೆಚ್ಚುಗೆಯ ಹರಕೆ ನೀಡಿ, ಪ್ರಕಾಶನಕ್ಕೆ ವಿವಿಧ ರೀತಿಯ ಬೆಂಬಲ ನೀಡಿರುತ್ತಾರೆ. ವೈಮಾನಿಕ ವಿಕಾಶ ಸಂಸ್ಥಾಪನೆಯ ಮಿತ್ರರಾದ ಶ್ರೀ ಜಿ. ನಾರಾಯಣಸ್ವಾಮಿ, ಶ್ರೀ ತಿಮ್ಮೇಗೌಡ, ಶ್ರೀ ಎ. ವಿ. ಸುರೇಶ್, ಶ್ರೀ ರವಿಕುಮಾರ್, ಶ್ರೀ ಚಿಕ್ಕ ಚೆನ್ನಯ್ಯ ಮತ್ತಿತರರು ಸದಾ ಬೆಂಬಲವಾಗಿ ನಿಂತು ಸಾಹಿತ್ಯ ರಚನೆಗೆ ಪ್ರೋತ್ಸಾಹವಿತ್ತ ಇವರೆಲ್ಲರಿಗೂ ನಮ್ಮ ಅನಂತ ವಂದನೆಗಳು.

ಹೊಸಕೋಟೆ ತಾಲ್ಲೂಕಿನ ಮಾನ್ಯ ಶಾಸಕರಾದ ಶ್ರೀ ಬಿ. ಎನ್, ಬಚ್ಚೇಗೌಡರು ತಮ್ಮ ಮಾತಾಪಿತೃಗಳ ನಾಮಾಂಕಿತದಲ್ಲಿ ಈ ಕೃತಿಯನ್ನು

ಅತಿ ಒಲವು ಆದರಗಳಿಂದ ಮುದ್ರಿಸಿ ಕೊಟ್ಟು ಉಪಕೃತರಾಗಿರುತ್ತಾರೆ. ಇವರಿಗೂ ಇವರ ಕುಟುಂಬದವರಿಗೂ ಶ್ರೀ ಭೈರವೇಶ್ವರಸ್ವಾಮಿ ಸಕಲ ಸನ್ಮಂಗಳವನ್ನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇವೆ.

ನಂದಿ ಸಹೋದರರು

ಎನ್. ವೆಂಕಟೇಶಮೂರ್ತಿ, ಎನ್. ವೆಂಕಟಸ್ವಾಮಿ



ಪ್ರಕಾಶಕರ ನುಡಿ

ಭದ್ರಾವತಿಯಲ್ಲಿದ್ದಾಗ ನಾನು ಕೆಂಪೇಗೌಡರ ನಾಟಕಗಳನ್ನು ಬರೆಯಿಸಿ ಆಡಿಸಿದೆ. ಆದರೆ ಕೆಂಪೇಗೌಡರ ಮೂಲಪುರುಷರಾದ ಆವತಿನಾಡ ಪ್ರಭು ರಣಭೈರೇಗೌಡರ ನಾಟಕವನ್ನು ಬರೆಯಿಸಲು ಸಾಧ್ಯವಾಗಲಿಲ್ಲ. ಅಂದಿನಿಂದ 34 ವರ್ಷಗಳ ಸತತ ಪ್ರಯತ್ನದಿಂದ ಅನೇಕ ಸ್ಥಳಗಳಿಗೆ ಭೇಟಿ ಕೊಟ್ಟು, ವಿವಿಧ ಮೂಲಗಳಿಂದ ಕಥಾವಸ್ತುವನ್ನು ಸಂಗ್ರಹಿಸಿದೆನು. ಶ್ರೀ ಕೆ. ಎಸ್. ರಾಮಚಂದ್ರ ರೆಡ್ಡಿಯವರು ಶ್ರೀ ನಂದಿ ವೆಂಕಟೇಶ ಮೂರ್ತಿಯವರನ್ನು ಪರಿಚಯಿಸಿದರು. ಈ ಯುವ ಲೇಖಕರ ಮೂಲಕ ಈ ಕೃತಿಯನ್ನು ಬರೆಯಿಸಲಾಗಿದೆ. ಅವರ ಹಿರಿಯ ಅಣ್ಣಂದಿರಾದ ಶ್ರೀ ಎನ್. ವೆಂಕಟಸ್ವಾಮಿಯವರು ಇದನ್ನು ತಿದ್ದಿ ಪರಿಷ್ಕರಿಸಿ ಕೊಟ್ಟಿರುತ್ತಾರೆ.

ನನ್ನ ಪ್ರಿಯ ಬಾಲ್ಯ ಸ್ನೇಹಿತರೂ ಹಾಗೂ ಸಹ ಪಾತ್ರಧಾರಿಗಳಾಗಿದ್ದ ಶ್ರೀ ಎಂ. ಕೆ. ಪುಟ್ಟಸ್ವಾಮಿಯವರಿಗೂ, ಕೆಂಪೇಗೌಡ ನಾಟಕವನ್ನು ಆಡಲು ಪ್ರೇರೇಪಿಸಿದ ಶ್ರೀ ಎಂ. ಚಿನ್ನಸ್ವಾಮಿಗಳಿಗೂ ನಾನು ಚಿರಋಣಿ. ಈ ನಾಟಕಕ್ಕೆ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥಸ್ವಾಮಿಗಳು ಆಶೀರ್ವಚನ ನೀಡಿ ಇದನ್ನು ಅಚ್ಚು ಹಾಕಿಸಲು ಮಾರ್ಗದರ್ಶನ ನೀಡಿ ಮುನ್ನಡಿಸಿರುತ್ತಾರೆ. ರಾಷ್ಟ್ರಕವಿ ಕುವೆಂಪುರವರು ಈ ಕೃತಿಗೆ ಆಶೀರ್ವಾದ ಮಾಡಿರುತ್ತಾರೆ. ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಕಡಿದಾಳ್ ಮಂಜಪ್ಪನವರು "ಒಂದು ಮಾತು" ಮೂಲಕ ಬೆನ್ನು ತಟ್ಟಿ ಹರಿಸಿರುತ್ತಾರೆ. ಮಾನ್ಯ ಪ್ರೊ. ಡಿ. ಜವರೇಗೌಡರು

ಮುನ್ನುಡಿಯನ್ನು ನೀಡಿ ಪ್ರೋತ್ಸಾಹಿಸಿರುತ್ತಾರೆ. ಕರಡುಪ್ರತಿಯನ್ನು ಶ್ರೀ ಹೆಚ್. ಆರ್. ದಾಸೇಗೌಡರು ಮತ್ತು ಪ್ರೊ. ಜಿ. ಆರ್. ರಂಗಸ್ವಾಮಿಯವರು ಪರಿಶೀಲಿಸಿ ಸೂಕ್ತ ಸಲಹೆಗಳನ್ನು ನೀಡಿರುತ್ತಾರೆ.

ಶ್ರೀಯುತರಗಳಾದ ಮೈಸೂರಿನ ಬಿ.ಪಾಪಣ್ಣ ಮತ್ತು ಸಹೋದರರು. ಎಂ ಎಸ್ ಸಿದ್ದರಾಮಯ್ಯ, ಬಿ ಎನ್ ಚಂದ್ರಕಾಂತೆ, ಲಕ್ಷ್ಮೀ ಕಾಂಪ್ಲೆಕ್ಸ್ ಚೆನ್ನಪ್ಪ, ಡಾ॥ ಪ್ರೇಮಚಂದ್ರ ಸಾಗರ್,. ದೊಡ್ಡ ಕೆಂಪೇಗೌಡ, ಚೈತನ್ಯ ಕುಮಾರ್, ಕಂಟ್ರಾಕ್ಟರ್ ವೆಂಕಟಪ್ಪ, ಜಿ.ಗಂಗಸ್ವಾಮಯ್ಯ, ಎಂ ಶ್ರೀನಿವಾಸ ಮೂರ್ತಿ, ಶ್ರೀಮತಿ ಎಸ್. ಎ. ಮಂಜುಳ, ಎಂ. ಡಿ. ಗಂಗರಂಗಯ್ಯ, ಕೆ.ಜಯರಾಂ, ಇತ್ಯಾದಿ ಮಹನೀಯರುಗಳು ಸದಾ ಸಹಕಾರ ನೀಡುತ್ತಿದ್ದಾರೆ. ಈ ಎಲ್ಲ ಮಹನೀಯರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ಈ ಪುಸ್ತಕವನ್ನು ಮುದ್ರಿಸಲು ಸಹಾಯ ಮಾಡಿದ ಶಾಸಕರಾದ ಶ್ರೀ ಬಿ. ಎನ್. ಬಚ್ಚೇಗೌಡರಿಗೆ ಭೈರವೇಶ್ವರನು ಸನ್ಮಂಗಳವನ್ನುಂಟುಮಾಡಲಿ.

ಬಿ. ವಿ. ಲಕ್ಷ್ಮಣ್

ಭದ್ರಾವತಿ ಕಲಾವಿದರು

ಸಮರ್ಪಣೆ

ಬೆಂಗಳೂರು ಜಿಲ್ಲೆ ಹೊಸಕೋಟೆ ತಾಲ್ಲೂಕು ಸೂಲಿಬೆಲೆ ಹೋಬಳಿ ಬೆಂಡಿಗಾನಹಳ್ಳಿ ಗ್ರಾಮದಲ್ಲಿ ಶ್ರೀಮಂತ ರೈತ ಕುಟುಂಬದಲ್ಲಿ ರಾಮಲಕ್ಷ್ಮಣ ರಂತೆ ಶ್ರೀ ಬಿ. ನಾರಾಯಣಗೌಡರು, ಶ್ರೀ ಬಿ. ಚನ್ನಭೈರೇಗೌಡರು ಜನಿಸಿ ದರು. ಶ್ರೀರಾಮನಂತಿದ್ದ ಶ್ರೀ ಬಿ. ನಾರಾಯಣಗೌಡರು ತಮ್ಮ ಸಹೋದರ ಲಕ್ಷ್ಮಣನಂತಿದ್ದ ಶ್ರೀ ಬಿ. ಚನ್ನಭೈರೇಗೌಡರನ್ನು ನಿಷ್ಠಾವಂತನಾಗಿ ಪ್ರಜಾ ಸೇವೆ ಸಲ್ಲಿಸಲೆಂದು ಆಶೀರ್ವದಿಸಿ 1937 ರಲ್ಲಿ ರಾಜಕೀಯಕ್ಕೆ ತಂದರು. ಶ್ರೀ ಚನ್ನಬೈರೇಗೌಡರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿಯೂ, ಜಿಲ್ಲಾ ಬೋರ್ಡಿನ ಉಪಾಧ್ಯಕ್ಷರಾಗಿಯೂ, ವಿಧಾನ ಪರಿಷತ್ತಿನ ಸದಸ್ಯರಾಗಿಯೂ ವಿಧಾನ ಸಭೆ ಸದಸ್ಯರಾಗಿಯೂ ಹಾಗೂ ಹೊಸಕೋಟೆ ಪುರಸಭೆಯಲ್ಲಿ ಸತತವಾಗಿ 16 ವರ್ಷ ಕಾಲ ಪುರಸಭಾಧ್ಯಕ್ಷರಾಗಿಯೂ, ವಿರೋಧ ಪಕ್ಷದಲ್ಲೇ ಇದ್ದು ಅನೇಕ ಅಭಿವೃದ್ಧಿ ಕಾರ್ಯಗಳು ಮಾಡಿರುತ್ತಾರೆ. ಇವರ ತದನಂತರ ಇವರ ಮನೆತನದ ಹೆಸರನ್ನು ಉಳಿಸಲೆಂದು ಇವರ ಅಣ್ಣ ಶ್ರೀ ಬಿ. ನಾರಾಯಣಗೌಡರ ಮಗ ಕಾನೂನು ಪದವೀಧರ ಶ್ರೀ ಬಿ. ಎನ್. ಬಚ್ಚೇ ಗೌಡರನ್ನು ರಾಜಕೀಯಕ್ಕೆ ತಂದು 1977 ರಲ್ಲಿ ಜನತಾ ಪಕ್ಷದಿಂದ ಹೊಸ ಕೋಟೆ ಕ್ಷೇತ್ರದ ಶಾಸನ ಸಭಾ ಸದಸ್ಯರನ್ನಾಗಿ ಮಾಡಿದರು. ಈಗ ಶಾಸಕ ರಾಗಿರುವ ಶ್ರೀ ಬಿ. ಎನ್. ಬಚ್ಚೇಗೌಡರು ತಮ್ಮ ಚಿಕ್ಕಪ್ಪನವರ ಆಶೀರ್ವಾದ ದಿಂದ ಬೆಂಗಳೂರು ಗ್ರಾಮಾಂತರ ಜಿಲ್ಲಾ ಜನತಾ ಪಕ್ಷದ ಅಧ್ಯಕ್ಷರಾಗಿಯೂ ಹಾಗೂ ಶಾಸಕರಾಗಿಯೂ ನೆಚ್ಚಿನ ಜನ ನಾಯಕರಾಗಿ ಸೇವೆ ಸಲ್ಲಿಸುತ್ತಿರು ತ್ತಾರೆ. ಶ್ರೀ ಚನ್ನಭೈರೇಗೌಡರು ವ್ಯವಸಾಯದಲ್ಲಿ ಬಹಳ ಆಸಕ್ತಿಯುಳ್ಳವ ರಾಗಿದ್ದರಿಂದ ಇವರು ವ್ಯವಸಾಯದಲ್ಲಿ ಹೆಚ್ಚು ಅನುಭವ ಪಡೆಯಲು

1981 ರಲ್ಲಿ ಜಪಾನ್, ಹಾಂಕಾಂಗ್, ಬ್ಯಾಂಕಾಕ್, ಮಲೇಷಿಯ, ಸಿಂಗಪುರ್ ಮುಂತಾದ ವಿದೇಶಗಳಲ್ಲಿ 45 ದಿನಗಳ ಕಾಲ ಪ್ರವಾಸ ಮಾಡಿ ದೇಶಕ್ಕೆ ಹಿಂತಿರುಗಿ 1982ರಲ್ಲಿ ದೈವಾಧೀನರಾದರು.

ಸಿ. ರುದ್ರಾರಾಧ್ಯ
ಮಾಲೀಕರು
ಬಸವೇಶ್ವರ ಪ್ರೆಸ್, ಹೊಸಕೋಟೆ



ಬಿ. ಎನ್. ಬಚ್ಚೇಗೌಡರು
ಶಾಸಕರು

ಆವತಿನಾಡ ಪ್ರಭು ರಣಭೈರೇಗೌಡ

(ಐತಿಹಾಸಿಕ ನಾಟಕ)

ಪ್ರಥಮ ಪ್ರದರ್ಶನ ಎ. ಡಿ. ಇ. ಕಲಾವಿದರಿಂದ

ಪಾತ್ರವರ್ಗ

1	ರಣಭೈರೇಗೌಡ	—	ನಂದಿ ವೆಂಕಟೇಶಮೂರ್ತಿ
2	ಭದ್ರೇಗೌಡ	—	ಸಮುದ್ರನ್
3	ವೀರಣ್ಣಗೌಡ	—	ವಿ. ಎಂ. ಮುನಿವೆಂಕಟಸ್ವಾಮಿ
4	ಶೆಲ್ವನಾಯಕ	—	ಚೆನ್ನಪ್ಪ
5	ಪೆರಿಮಲ್ಲ	—	ಎಂ. ಎನ್. ಕುಂಜಪ್ಪ
6	ತಿರುಮಲ್ಲ	—	ಎನ್. ಎಂ. ಸುರೇಶ್
7	ಮಂತ್ರಿ	—	ಹೆಚ್. ಎಲ್. ನಾಗರಾಜ
8	ಪೂಜಾರಿಗಳು	—	ಸಾಯಿಕುಮಾರ್
9	ಮಾರನಾಯಕ	—	ಚಿಕ್ಕ ಚೆನ್ನಯ್ಯ
10	ಹೊಯ್ಸಳರಾಯಭಾರಿ	—	ಗುರುರಾಜರಾವ್ (ವಿಜ್ಞಾನಿ)
11	ಕರುಣಿಕರು	—	ಬಸವರಾಜ್
12	ಚೆನ್ನ	—	ಶಂಕರ್
13	ಒಂದನೇ ರೈತ	—	ಶಂಕರಮೂರ್ತಿ
14	ಎರಡನೇ ರೈತ	—	ಪ್ರಕಾಶ್
15	೧ನೇ ಸೈನಿಕ	—	ವಿ. ಸಿ. ರಾಮಚಂದ್ರ
16	೨ನೇ ಸೈನಿಕ	—	ಗುರುಮೂರ್ತಿ

ಸ್ತ್ರೀ ಪಾತ್ರವರ್ಗ

1	ದೊಡ್ಡಾಂಬೆ	—	ಶ್ರೀಮತಿ ಪಾರ್ವತಿ (ಎ.ಡಿ.ಇ.)
2	ಲಕ್ಷ್ಮಮ್ಮ	—	ದೀಪಾ (ಸಿನಿಮಾ ನಟಿ)
3	ಚೆನ್ನಿ	—	ಅನಂತಲಕ್ಷ್ಮಿ (ಸಿನಿಮಾ ನಟಿ)
4	ಪುಟ್ಟೂಶಾಸ್ತ್ರಿ	—	ಮಾ. ನಾಗರಾಜ್

ರಂಗದ ಹಿನ್ನೆಲೆಯಲ್ಲಿ

ಶ್ರೀಯುತರುಗಳಾದ—ಎಂ. ಕೆ. ಪುಟ್ಟಸ್ವಾಮಿ, ಸಿ. ಲಕ್ಷ್ಮಣ, ಜಿ, ರಾಜಣ್ಣ ಸಿ. ರಾಮಚಂದ್ರ. ಸಂಗಮೇಶ್ವರ, ವೆಂಕಟೇಶಕುಮಾರ್, ಕೆ. ಎಂ. ರತ್ನಕುಮಾರ್, ಎಸ್. ಜಿ. ಜಿ. ಪ್ರಸಾದ್, ಸುರೇಶ್ (ಶಿವಮೊಗ್ಗ) ಜಿ. ಅಪ್ಪಣ್ಣಯ್ಯ

ಸಂಭಾಷಣೆ ಮತ್ತು ದಿಗ್ದರ್ಶನ—ನಂದಿ ವೆಂಕಟೇಶಮೂರ್ತಿ

ಕತೆ, ಸಂಗೀತ—ಬಿ. ವಿ. ಲಕ್ಷ್ಮಣ್

ಪರಿಷ್ಕರಣ—ನಂದಿ ವೆಂಕಟಸ್ವಾಮಿ

ಪೋಷಕ ವರ್ಗ—ಶ್ರೀಯುತರುಗಳಾದ

1 ಬಚ್ಚೇಗೌಡರು (ಶಾಸಕರು)
2 ವಿ. ಪಾಪಣ್ಣ
3 ಹೇಮಚಂದ್ರಸಾಗರ್
4 ಟಿ. ದೊಡ್ಡ ಕೆಂಪೇಗೌಡರು
5 ಎಂ. ಎಸ್. ಸಿದ್ಧರಾಮಯ್ಯ
6 ಜಿ. ನಾರಾಯಣಸ್ವಾಮಿ
7 ಡಿ. ಆರ್. ತಿಮ್ಮೇಗೌಡ
8 ಎ. ವಿ. ಸುರೇಶ್
9 ಚಿಕ್ಕಚೆನ್ನಯ್ಯ
10 ರವಿಕುಮಾರ್
11 ವೆಂಕಟಪ್ಪ
12 ಫೀಸ್. ರಾಮನ್ ಮತ್ತು ಆರ್. ಎಸ್. ಶರ್ಮಾ

ವಾದ್ಯಗೋಷ್ಠಿ—ಟಿ. ಆರ್. ಪರಮಶಿವಯ್ಯ ಮತ್ತು ವೃಂದ

ಆವತಿನಾಡ ಪ್ರಭು ರಣಭೈರೇಗೌಡ

ದೃಶ್ಯ—೧

[ರಣಭೈರೇಗೌಡರ ಮನೆ]

ರಣಭೈರೇಗೌಡ—[ಶತಪಥ ತಿರುಗುತ್ತಾ]

ಚೆನ್ನಾ, ಚೆನ್ನಾ !

ಚೆನ್ನ—ಕರೆದರಾ ಬುದ್ಧಿ ?

ರಣಭೈರೇಗೌಡರು— ದೇವಸ್ಥಾನಕ್ಕೆ ಹೋದ ನಮ್ಮ ದೊಡ್ಡಾಂಬೆ ಇಷ್ಟು ಹೊತ್ತಾದರೂ ಏಕೆ ಬರಲಿಲ್ಲ ? ಹೋಗಿ ನೋಡಿಕೊಂಡು ಬಾ.

ಚೆನ್ನ—ನಮ್ಮ ದೊಡ್ಡಮ್ಮಾವ್ರು ಬಾಳ ದೇವರ ಭಕ್ತರು. ಆ ನಮ್ಮ ತಾಯಿ ದೇಶಾನ ಆಳೋ ದೊರೇ ಕೈ ಹಿಡೀತಾರೆ ಬುದ್ಧಿ !

ರಣಭೈರೇಗೌಡರು—ಹೋಗಿ ಕರೆದುಕೊಂಡು ಬಾರೋ ಅಂದರೆ, ಆಕೆ ಜಾತಕ ಹೇಳೋಕೆ ಷುರು ಮಾಡಿದೆಯಲ್ಲಾ !

ಚೆನ್ನ—ಈಗ್ಲೇ ಹೊಂಟೆ ಬುದ್ಧಿ.[ಆಚೆ ಹೋಗಿ ಮತ್ತೆ ಹಿಂತಿರುಗುವನು]

ಚೆನ್ನ—ಅಕ್ಕಾ ಅವ್ರು ಬಂದೇ ಬಿಟ್ರು ಬುದ್ಧಿ. ಅವರು ದೇವಸ್ಥಾನಕ್ಕೆ ಹೋಗಿ ಬಂದ್ರೆ, ಲಕ್ಷ್ಮೀ ಕಳೆ ತುಂಬಿರುತ್ತೆ ಬುದ್ಧಿ.

ರಣಭೈರೇಗೌಡರು—ನೀನು ಒಳಗೆ ಹೋಗು. ಕೆಲಸ ನೋಡಿಕೊ.

[ಚೆನ್ನ ನಿರ್ಗಮಿಸುವನು, ದೊಡ್ಡಾಂಬೆ ದೇವರ ಪ್ರಸಾದಗಳಿಂದ ಕೂಡಿದ ತಟ್ಟೆಯನ್ನು ಕೈಯಲ್ಲಿ ಹಿಡಿದು, ಹಣೆಯಲ್ಲಿ ವಿಭೂತಿ–ಕುಂಕುಮಗಳನ್ನು ಧರಿಸಿ, ದೇವಿ ಸಮಾನಳಂತೆ ಕಾಣುತ್ತ ಮನೆಯನ್ನು ಪ್ರವೇಶಿಸಿದಳು]

ರಣಭೈರೇಗೌಡರು—ಬಂದೆಯಾ ತಾಯಿ, ಬಾ. ದೇವಾಲಯದಿಂದ ಹಿಂದಿರುಗಲು ಏಕೆ ಇಷ್ಟು ತಡವಾಯಿತು ?

ದೊಡ್ಡಾಂಬೆ—ಈ ದಿನ ಶುಕ್ರವಾರವಲ್ಲವೆ, ಅಪ್ಪಾಜಿ ! ಗುಡಿಯಲ್ಲಿ ವಿಶೇಷ ಪೂಜೆ ಇತ್ತು, ತಗೊಳ್ಳಿ ತೀರ್ಥಪ್ರಸಾದ.

[ಗೌಡರು ತೀರ್ಥ ಪ್ರಸಾದಗಳನ್ನು ಸ್ವೀಕರಿಸುವರು]

ರಣಭೈರೇಗೌಡರು—ಆದಿಶಕ್ತಿಯಾದ ನಮ್ಮ ಕುಲದೇವತೆ ಕೆಂಪಾಂಬ, ಆರಾಧ್ಯದೇವನಾದ ಭೈರವೇಶ್ವರ ನಿನ್ನನ್ನು ಸದಾ ಕಾಪಾಡಲಿ, ತಾಯಿ.

ದೊಡ್ಡಾಂಬೆ—[ಗೌಡರನ್ನು ವೀಕ್ಷಿಸುತ್ತಾ]

ಅಪ್ಪಾಜಿ, ನಿಮ್ಮನ್ನು ಒಂದು ಮಾತು ಕೇಳಲೆ ?

ರಣಭೈರೇಗೌಡರು—ಅದಕ್ಕೇನು, ಕೇಳು ಮಗಳೇ ! ನಿನಗಿಲ್ಲದ ಅಧಿಕಾರ ಮತ್ಯಾರಿಗಿದೆ ?

ದೊಡ್ಡಾಂಬೆ—ಕೆಲವು ದಿನಗಳಿಂದ ನೀವು ಏನನ್ನೋ ಯೋಚಿಸುತ್ತಿರುವಂತಿದೆ ಅದಕ್ಕೆ ಕಾರಣವನ್ನು ಕೇಳಲೆ ?

ರಣಭೈರೇಗೌಡರು—ನಿನಗೆ ತಿಳಿಯದ ವಿಚಾರವೇನಿದೆ ತಾಯಿ. ಪ್ರಸಿದ್ಧ ಗಂಗರಾಜರ ವಂಶಕ್ಕೆ ಸೇರಿದವರೂ, ಅಚ್ಚ ಕನ್ನಡಿಗರೂ ಆದ ನಾವು ಇಲ್ಲಿ ಬಂದು ಸೇರಿಕೊಂಡವರು. ಮತ್ತೆ ತಾಯ್ನಾಡಿಗೆ ಹಿಂದಿರುಗುವ ಕಾಲ ಸಮೀಪಿಸುತ್ತಿದೆಯಲ್ಲಾ ಎಂದು ಯೋಚಿಸುತ್ತಿದ್ದೇನೆ.

ದೊಡ್ಡಾಂಬೆ—ಅಪ್ಪಾಜಿ, ಅಂಥಹ ಪರಿಸ್ಥಿತಿ ಈಗ ಉಂಟಾಗಲು ಕಾರಣ ?

ರಣಭೈರೇಗೌಡರು—ಪವಿತ್ರ ಭಾರತಾಂಬೆ ಪರಕೀಯರ ದಾಳಿಗೆ ಸಿಲುಕಿ ತತ್ತರಿಸುತ್ತಿದ್ದಾಳೆ. ಮಹಾ ಮಹಾ ಸಾಮ್ರಾಜ್ಯಗಳು ಪತನವಾದುವು. ಸ್ವಧರ್ಮಾಭಿಮಾನ, ರಾಷ್ಟ್ರಪ್ರೇಮ, ರಾಷ್ಟ್ರಪ್ರಕೃತಿಯ ಮನೋಭಾವಗಳಿಲ್ಲದೆ ಭಾರತೀಯರು ದ್ವೇಷ, ಅಸೂಯೆಗಳಿಂದ ಕೂಡಿ ರಾಷ್ಟ್ರದ ಅವನತಿಗೆ ಕಾರಣರಾಗುತ್ತಾರೆ. ಪುಂಡರು, ದುಷ್ಟರು, ಅಹಂಕಾರಿಗಳಲ್ಲಿ ಕೆಲವರು ನಾಯಕ ಪಟ್ಟವನ್ನೇರಿ ಪ್ರಜಾಪೀಡಕರಾಗಿದ್ದಾರೆ. ಈ ಆತಂಕ ಪರಿಸ್ಥಿತಿ ನಮ್ಮ ಪ್ರಾಂತ್ಯಕ್ಕೂ, ಹಬ್ಬಿದೆ.

ದೊಡ್ಡಾಂಬೆ—ಅಪ್ಪಾಜಿ, ನೀವು ಹೇಳುತ್ತಿರುವ ವಿಷಯ ಅತ್ಯಂತ ಶೋಚನೀಯವಾದುದು. ಈ ಬೆಳಗಿನ ಜಾವ ನಡೆದ ಒಂದು ಘಟನೆ ದುಷ್ಟರ ಕಾಟವನ್ನು ನೆನಪಿಗೆ ತರುತ್ತಿದೆ.

ರಣಭೈರೇಗೌಡ—ಅಂತಹ ಘಟನೆ ಏನು ನಡೆಯಿತು ಮಗಳೇ ?

ದೊಡ್ಡಾಂಬೆ—ಅದು ಯಾರೋ ಶಲ್ವನಾಯಕನ ಕಡೆಯವರಂತೆ. ನೋಡಲು ಮಲ್ಲರಂತೆ ಕಾಣುತ್ತಿದ್ದರು.

ರಣಭೈರೇಗೌಡ—ಹ್ಞಂ ! ಅವರೇನಾದರೂ ನಿನಗೆ ತೊಂದರೆ ಕೊಟ್ಟರೆ ?

ದೊಡ್ಡಾಂಬೆ—ಅವರು ದೇವಸ್ಥಾನಕ್ಕೆ ಬಂದು ಹೋಗುವ ಹೆಣ್ಣು ಮಕ್ಕಳನ್ನೆಲ್ಲಾ ದುರದುರನೆ ನೋಡುತ್ತಾ ನಿಂತಿದ್ದರು. "ನೀವ್ಯಾರು ? ನೀವೇಕೆ ಇಲ್ಲಿ ಬಂದಿರಿ ?" ಎಂದು ಅರ್ಚಕರು ಕೇಳಿದರು. ಆಗ ಅವರು "ನಾವು ಶಲ್ವನಾಯಕನ ಬಲಗೈ ಭಂಟರು, ಹುಷಾರ್." ಎಂದು ಹೆದರಿಸಿದರು. ಇದನ್ನು ಕಂಡ ಹೆಣ್ಣು ಮಕ್ಕಳು ಭಯದಿಂದ ಅಲ್ಲಿಂದ ಹೊರಟರು. ನಾನು ಅಮ್ಮನವರ ಗುಡಿಗೆ ಹೋಗಿ ಪೂಜೆ ಮಾಡಿಕೊಂಡು ಬಂದೆ, ಅಪ್ಪಾಜಿ.

ರಣಭೈರೇಗೌಡ—ನಮ್ಮ ಕುಲದೇವತೆಯ ವರಪ್ರಸಾದದಿಂದ ಹುಟ್ಟಿದ ಮಗು ನೀನು ತಾಯಿ. ನಿನಗೆ ಯಾವ ತೊಂದರೆಯೂ ಉಂಟಾಗದು, ತಪ್ಪದೇ ದೇವರ ಪೂಜೆಯನ್ನು ಮಾಡುತ್ತಿರು, ಮಗಳೆ. [ಚೆನ್ನನನ್ನು ಕರೆಯುವರು]

ಚೆನ್ನ—ಬುದ್ಧಿ !

ರಣಭೈರೇಗೌಡ—ತಮ್ಮಂದಿರಾದ ವೀರಣ್ಣಗೌಡರನ್ನು ಕರೆದುಕೊಂಡು ಬಾ, ಚೆನ್ನ.

ಚೆನ್ನ—ಬುದ್ಧಿ, ಅವರು ಬೆಳಗಿನಜಾವ ಕೆರೆಕಡೆ ಹೋದವರು ಇನ್ನೂ ಬಂದಿಲ್ಲ.

ರಣಭೈರೇಗೌಡ—ನಾನು ದೇವಸ್ಥಾನಕ್ಕೆ ಹೋಗಿ ಬರುವೆ. ನೀವು ನಿಮ್ಮ ನಿಮ್ಮ ಕೆಲಸಗಳನ್ನು ನೋಡಿಕೊಳ್ಳಿ.

[ರಣಭೈರೇಗೌಡರು ಅಲ್ಲಿಂದ ಹೊರಡುವರು. ಆಗ ಹತ್ತು ವರುಷದ ಬಾಲಕ ಪುಟ್ಟೂಶಾಸ್ತ್ರಿ ಬರುವನು]

ದೊಡ್ಡಾಂಬೆ—ಬಾ ಪುಟ್ಟೂ. ನೀನೀಗ ಮನೆಯಿಂದ ಬರುತ್ತಿರುವೆಯಾ ?

ಪುಟ್ಟೂಶಾಸ್ತ್ರಿ—ದೇವಸ್ಥಾನದಿಂದಲೇ ಬರುತ್ತಿದ್ದೇನೆ. ಅಕ್ಕಾ, ಇಬ್ಬರು ದುಷ್ಟರು ಅಪ್ಪಾಜಿಯನ್ನು ಏನೇನೋ ಕೇಳುತ್ತಿದ್ದರು. ಅಷ್ಟರಲ್ಲಿ ಮೀಸೆಮಾವ ಬಂದರು. ಅವರನ್ನು ನೋಡಿ ಆ ದುಷ್ಟರು ಪರಾರಿಯಾದರು. [ಆಗ ಚೆನ್ನ ಪ್ರವೇಶಿಸಿ]

ಚೆನ್ನ—ಪುಟ್ಟುಸಾಮಿಗಳೇ ! ನಮ್ಮ ವೀರಣ್ಣಗೌಡರು ಭೈರವೇಶ್ವರ ಸ್ವರೂಪಿ

ಅವರನ್ನು ಕಂಡ ದುಷ್ಟರು ಯಾರೇ ಆಗಲೀ. ಪಲಾಯನ ಮಾಡ ತಕ್ಕದ್ದೆ.

ಪುಟ್ಟೂಶಾಸ್ತ್ರಿ—ಹೆಣ್ ಮಕ್ಕಳೆಲ್ಲಾ ಮದ್ವೆ ಆಗ್ಲೇ ಬೇಕಾ ?

ದೊಡ್ಡಾಂಬೆ—ಮದ್ವೆ ವಿಚಾರ ನಿನಗೇಕೆ ಮರಿ.

ಪುಟ್ಟೂಶಾಸ್ತ್ರಿ—ಮದ್ವೆ ಅಂದರೆ ನಂಗೆ ಬಹಳಾ ಸಿಟ್ಟು ಅಕ್ಕ. ನಮ್ಮ ಗೋದಾ ಅಕ್ಕ ನಿಮ್ಮಂಗೇ ಇದ್ರು. ಮದ್ವೆ ಮಾಡಿಕೊಂಡವರೆ, ನನ್ನನ್ನು ಬಿಟ್ಟು ಹೊರಟೇ ಹೋದ್ರು ಅಕ್ಕ. ನೀವು ಮದ್ವೆ ಆದ್ರೆ ನನ್ನ ಬಿಟ್ಟು ಹೊರಟೋಗ್ತೀರೀ ಅಂತ ಮದ್ವೆ ಆಗೋರ್ನ ಕಂಡ್ರೆ ಸಿಟ್ಟು.

ದೊಡ್ಡಾಂಬೆ—ಅಯ್ಯೋ ಹುಚ್ಚಪ್ಪ, ನಾನು ಮದ್ವೇನೆ ಆಗೋಲ್ಲ ಕಣೋ. ಒಂದು ವೇಳೆ ಆದರೆ, ನಿನ್ನನ್ನು ಜತೆಯಲ್ಲೇ ಕರೆದುಕೊಂಡು ಹೋಗು ತ್ತೇನೆ. ಹೆದರಬೇಡ. ಆಗೋ ನೋಡು ಮೀಸೆಮಾವ ಬರುತ್ತಿದ್ದಾರೆ. ಬಾ ಒಳಗೆ ಹೋಗೋಣ.

[ಪರದೆ-ಬೀಳುವುದು]

o o o

ದೃಶ್ಯ-೨

[ಶಲ್ವನಾಯಕನ ದರ್ಬಾರು]

[ಶಲ್ವನಾಯಕ, ಆವನ ಮಂತ್ರಿ ಪರಪಯ್ಯ ಆಸನಾರೂಢರಾಗಿದ್ದಾರೆ]

ಶಲ್ವನಾಯಕ—ಮಂತ್ರಿಗಳೇ, ಎಳಮಂಜಿ ಪುತ್ತೂರಿಗೆ ಹೋದ ನಮ್ಮ ಪೆರುಮಲ್ಲ, ತಿರುಮಲ್ಲರು ಇನ್ನೂ ಬರಲಿಲ್ಲವೆ ?

ಮಂತ್ರಿ—ಇನ್ನೇನು ಬರಬಹುದು ಪ್ರಭು. ಅದುವರೆಗೆ ಮನೋರಮೆಯ ನೃತ್ಯವನ್ನೇರ್ಪಡಿಸುವೆನು. ತಾವು ಮನರಂಜನೆ ಪಡೆಯಬಹುದು.

ಶಲ್ವನಾಯಕ—ಆಗಬಹುದು ಸಚಿವರೆ ! ಹಾಗೆಯೇ ಮಧು ಪಾತ್ರೆಯನು ತರಿಸಿ.

ಮಂತ್ರಿ—ಚಿತ್ತ ಪ್ರಭು. [ಮಂತ್ರಿ ಹೋಗುವನು. ಸೇವಕ ಮಧು ಪಾತ್ರೆಯನ್ನು ತಂದು, ಬಟ್ಟಲಿಗೆ ಮಧುವನ್ನು ಸುರಿದು ಶಲ್ವನಾಯಕನಿಗೆ ಕುಡಿಯಲುಕೊಡುವನು]

ಶಲ್ವನಾಯಕ—[ಮಧುವನ್ನು ಸೇವಿಸುತ್ತಾ] ಯಾರ ಬಾಯಲ್ಲಿ ಕೇಳಿದರೂ, ರಣಭೈರೇಗೌಡರ ಕುವರಿ ದೊಡ್ಡಾಂಬೆಯ ಗುಣ, ಸೌಂದರ್ಯಗಳ ವರ್ಣನೆ, ಆಕೆ ಸುರಸುಂದರಿಯಂತೆ, ಮಹಾ ಭಕ್ತಳಂತೆ. ಆಕೆಯ ನಡೆ ಹಂಸ ನಡೆಯಂತೆ. ಅಂಥಹ ಸ್ಫುರದ್ರೂಪಿ ರಣಭೈರೇಗೌಡರ ಮಗಳಾಗಿ ಹೇಗೆ ಹುಟ್ಟಿದಳು ! ಹಾಂ, ಮರೆತಿದ್ದೆ. ಇಮ್ಮಡಿ ಪುಲಿಕೇಶಿ. ಶ್ರೀ ಪುರುಷ, ರಾಜಮಲ್ಲ ಇವರ ವಂಶಜರಲ್ಲವೆ ರಣಭೈರೇಗೌಡರು. ರಾಜವಂಶದಲ್ಲಿ ರಾಜಕುವರಿ ಜನಿಸುವುದು ಸಹಜ. ಆಕೆಯನ್ನು ನನ್ನ ಅಂತಃಪುರದ ರಾಣಿಯನ್ನಾಗಿ ಮಾಡಿ ಕೊಳ್ಳುವವರಗೆ ನನಗೆ ನಿದ್ರೆ, ಆಹಾರಗಳು ರುಚಿಸವು. ಓ, ಗಂಗರಾಜ ಕುಮಾರಿ, ನೀನು ನನ್ನವಳೇ, ನೀನು ನನ್ನವಳೇ ! [ಪಾನ ಮತ್ತತೆಯಿಂದ ತೂರಾಡುತ್ತಾ, ಸಿಂಹಾಸನದ ಮೇಲೆ ಕುಸಿದು ಬೀಳುವನು]

[ಮಂತ್ರಿ ಪ್ರವೇಶಿಸಿ, ನಾಯಕನನ್ನು ಹಿಡಿದುಕೂರಿಸಿ, ಪಕ್ಕದಲ್ಲಿಯೇ ಕುಳಿತುಕೊಳ್ಳುವನು ನರ್ತಕಿ ಮನೋರಮೆ ನಾಯಕನಿಗೆ ನಮಸ್ಕರಿಸಿ, ನಾಟ್ಯ ಪ್ರಾರಂಭಿಸುವಳು]

ನೃತ್ಯ ಪ್ರದರ್ಶನ

[ನೃತ್ಯ ನಡೆಯುತ್ತಿದ್ದಂತೆ ಪೆರಿಮಲ್ಲ, ತಿರುಮಲ್ಲರ ಪ್ರವೇಶ. ನಾಟ್ಯ ಮುಗಿಯುತ್ತದೆ. ಮನೋರಮೆ ನಾಯಕನಿಗೆ ನಮಸ್ಕರಿಸಿ ನಿರ್ಗಮಿಸುವಳು]

ಶಲ್ವನಾಯಕ—ಪೆರಿಮಲ್ಲ, ತಿರುಮಲ್ಲರೇ !

ಪೆರಿಮಲ್ಲ
ತಿರುಮಲ್ಲ —[ಇಬ್ಬರೂ ಎದ್ದು ನಮಸ್ಕರಿಸಿ] ಪ್ರಭು!

ಶಲ್ವನಾಯಕ—ನಿಮಗಾಗಿ ಕಾಯುತ್ತಿದ್ದೆ. ನಾನು ನಿಮಗೆ ಹೇಳಿ ಕಳುಹಿಸಿದ ವಿಚಾರವೇನು ?

ಪೆರಿಮಲ್ಲ—ನಾವು ಕೆಲವರ ಬಳಿ ವಿಚಾರಿಸಿದೆವು ಪ್ರಭು. ಗೌಡರ ಮಗಳು ನಿತ್ಯವೂ ದೇವಾಲಯಕ್ಕೆ ಹೋಗುವ ವಿಚಾರವನ್ನು ತಿಳಿದು, ಅಲ್ಲಿಗೆ ಹೋಗಿ ಕಾದು ನಿಂತೆವು.

ಶಲ್ವನಾಯಕ—ಆಕೆಯನ್ನು ಪ್ರತ್ಯಕ್ಷ ನೋಡಿದಿರೇನು ?

ತಿರುಮಲ್ಲ—ನೋಡಿದೆವು ಪ್ರಭು ! ಆಕೆ ಅತಿ ರೂಪವತಿ. ಅಷ್ಟೊಂದು ಲಾವಣ್ಯವತಿಯನ್ನು ಈ ನಾಡಿನಲ್ಲಿ ನಾವು ಇದುವರೆವಿಗೂ ಕಂಡೇ ಇಲ್ಲ.

ಪೆರಿಮಲ್ಲ—ಆ ರೂಪ, ನಡಿಗೆ, ವಿಶಾಲಹಣೆ, ಹಣೆಯ ಮೇಲೆ ವಿಭೂತಿ-ಕುಂಕುಮ, ಕಿವಿಯಲ್ಲಿ ಕೆಂಪು ವಜ್ರದೋಲೆ ಇವನ್ನು ನೋಡಿದಾಗ ಆಕೆ ಸಾಕ್ಷಾತ್ ದೇವಿಯಂತೆ ಕಾಣುತ್ತಾಳೆ ಪ್ರಭು.

ತಿರುಮಲ್ಲ—ಅಂಥಹ ದೇವಿಯನ್ನು ಕೈ ಹಿಡಿಯಲು ಇಚ್ಛಿಸುವ ನೀವೇ ಧನ್ಯರು ಮಹಾಪ್ರಭು.

ಶಲ್ವನಾಯಕ—ಆಕೆ ಪ್ರತಿ ದಿನ ದೇವಾಲಯಕ್ಕೆ ಬರುತ್ತಾಳೆ. ತಾನೆ ! ನಾಳೆಯೂ ಬರಬಹುದೋ ?

ತಿರುಮಲ್ಲ—ಆಕೆ ದೇವಾಲಯಕ್ಕೆ ಪ್ರತಿದಿನ ಪೂಜೆಗೆ ಹೋಗದೆ ಒಂದು ತೊಟ್ಟು ನೀರೂ ಕುಡಿಯುವುದಿಲ್ಲವಂತೆ ! ಆದರೆ ನಾಳೆ ಹೇಗೋ ತಿಳಿಯದು.

ಶಲ್ವನಾಯಕ—ಏಕೆ, ಕಾರಣ ?

ತಿರುಮಲ್ಲ—ಪ್ರಭು. ಪೆರಿಮಲ್ಲ ಪೂಜಾರಿಯನ್ನು ಗದ್ದರಿಸಿ, ಗೌಡರ ಮಗಳು ಯಾರೆಂದು ಕೇಳಿದ. ಅಲ್ಲಿದ್ದ ಹೆಣ್ಣು ಮಕ್ಕಳು ಗಾಬರಿಯಿಂದ ಹೊರಟು ಹೋದರು. ಅಷ್ಟರಲ್ಲಿ ಅಲ್ಲಿಗೆ ವೀರೇಗೌಡರು ಬಂದರು. ಆತ ಆಕೆಯ ಚಿಕ್ಕಪ್ಪನಂತೆ. ನೋಡಲು ಭೀಮನಂತಿದ್ದಾನೆ.

ಪೆರಿಮಲ್ಲ—ಆತನನ್ನು ನೋಡುತ್ತಲೇ ನಮಗೊಂದು ಉಪಾಯ ಹೊಳೆಯಿತು. ನಾವು ಮಲ್ಲಯುದ್ಧ ಯೋಧರೆಂದೂ, ಅಲ್ಲಿನ ಸುತ್ತ-ಮುತ್ತಲ ಪ್ರದೇಶದಲ್ಲಿ ನಮಗೆ ಸರಿ ಜೋಡಿ ಸಿಗಲಿಲ್ಲವೆಂದೂ ತಿಳಿಸಿದೆವು. ಆತನು ನಮ್ಮ ಜತೆ ಮಲ್ಲಯುದ್ಧ ಮಾಡಲು ಒಪ್ಪಿದ.

ಶಲ್ವನಾಯಕ—ನಿಮ್ಮ ತಲೆ, ನೋಡಿಕೊಂಡು ಬನ್ನಿ ಎಂದು ಕಳುಹಿಸಿದರೆ, ಸಾಕಷ್ಟು ರಾದ್ಧಾಂತ ಮಾಡಿಕೊಂಡು ಬಂದಿದೀರಿ. ನಿಮಗೆ ದೈಹಿಕ ಶಕ್ತಿ ಇದ್ದರೂ ಬುದ್ಧಿಶಕ್ತಿಯಿಲ್ಲ.

ಪೆರಿಮಲ್ಲ—ಪ್ರಭುಗಳು ಮನ್ನಿಸಬೇಕು. ತಾವು ಆಣತಿ ಇತ್ತರೆ, ನಾವು ಈಗಲೇ ಆಕೆಯನ್ನು ಹೊತ್ತು ತಂದು ತಮ್ಮ ಪಾದದಡಿಯಲ್ಲಿ ಅರ್ಪಿಸುತ್ತೇವೆ.

ಶಲ್ವನಾಯಕ—ನಿಮ್ಮ ಬಂಡವಾಳ ನಾಳೆ ಗೊತ್ತಾಗುತ್ತದೆ. ಹೇಗೂ ಮಲ್ಲಯುದ್ಧಕ್ಕೆ ವೀರಣ್ಣಗೌಡರನ್ನು ಆಹ್ವಾನಿಸಿದ್ದೀರಿ.

ಪೆರಿಮಲ್ಲ—ತಾವು ನೋಡುತ್ತಿರಿ ಪ್ರಭು! ಆ ರಣಭೈರೇಗೌಡರ ಸೋದರರನ್ನು ಈ ನನ್ನ ಬಾಹುಗಳ ಬಲದಿಂದ ನಿರ್ಜೀವಿಗಳನ್ನಾಗಿ ಮಾಡುತ್ತೇನೆ.

ಮಂತ್ರಿ—ಪ್ರಭು, ರಣಭೈರೇಗೌಡರ ಸಹೋದರರು ಮಲ್ಲಯುದ್ಧದಲ್ಲೂ, ಖಡ್ಗ-ಕಾಳಗದಲ್ಲೂ ಅಸಾಧಾರಣರೆಂದು ತಿಳಿದು ಬಂದಿದೆ. ಹಿಂದು-ಮುಂದು ಆಲೋಚಿಸದೆ ದುಡುಕುವುದು ಒಳಿತಲ್ಲವೆಂದು ಕಾಣುತ್ತದೆ.

ಪೆರಿಮಲ್ಲ—ಮಂತ್ರಿಗಳಿಗೆ ವಯಸ್ಸಾಗುತ್ತಾ ಬಂದಿದೆ. ಕಣ್ಣು ಮಂಸಕಾಗಿ, ಬುದ್ಧಿ ಮಂಕಾಗುತ್ತಾ ಬಂದಿದೆ. ಅವರು ತಮ್ಮ ಪದವಿಯನ್ನು ಬೇರೆ ಯಾರಿಗಾದರೂ ತೆರವು ಮಾಡಿ ಕೊಡುವುದು ಲೇಸೆಂದು ಕಾಣುತ್ತದೆ.

ಮಂತ್ರಿ—ಪ್ರಭು, ಈ ಹುಡುಗು ಮುಂಡೇವು ಬೊಗಳಿದ್ದನ್ನು

ಆಲೈಸಿದಿರೇನು ? ಇವರು ನಿಮ್ಮ ಅಭಿಲಾಷೆಯನ್ನು ಈಡೇರಿಸಲಾರರು ಎಂದು ಶಂಕಿಸುತ್ತೇನೆ.

ಶಲ್ವನಾಯಕ—ಪೆರಿಮಲ್ಲ, ತಿರುಮಲ್ಲ, ಮಂತ್ರಿಗಳೆ, ನಮ್ಮ ನಮ್ಮಲ್ಲಿ ಕಚ್ಚಾಟ ಸಲ್ಲದು. ಒಟ್ಟಿನಲ್ಲಿ ಆ ದೊಡ್ಡಾಂಬೆ ಬೇರೆಯವರ ಕೈಹಿಡಿಯ ಬಾರದು.

ಮಂತ್ರಿ—ಪ್ರಭು, ಅದಕ್ಕೆ ನನ್ನದೊಂದು ಉಪಾಯ. ರಣಭೈರೇಗೌಡರನ್ನು ನಯ, ವಿನಯಗಳಿಂದ ನಮ್ಮ ಬಲೆಗೆ ಹಾಕಿಕೊಳ್ಳಬೇಕು. ಆತನ ಪುತ್ರಿಯನ್ನು ತಮ್ಮ ರಾಣಿಯನ್ನಾಗಿ ಮಾಡಿಕೊಳ್ಳಬೇಕು. ವಿರೋಧ ದಿಂದ ನಮ್ಮ ಕಾರ್ಯ ಸಫಲವಾಗುವುದಿಲ್ಲ.

ಶಲ್ವನಾಯಕ—ನಿಮ್ಮ ಮಾತು ನಿಜ ಅಮಾತ್ಯರೆ, ಮಲ್ಲಯುದ್ಧವನ್ನು ರದ್ದು ಪಡಿಸೋಣ.

ಮಂತ್ರಿ—ಕಾಲ ಮಿಂಚಿದೆ ಪ್ರಭು. ಒಂದು ಸಾರಿ ಮಲ್ಲಯುದ್ಧಕ್ಕೆ ಆಹ್ವಾನ ನೀಡಿ, ಅದನ್ನು ರದ್ದು ಪಡಿಸಿದೆವೆಂದರೆ ಅಪಕೀರ್ತಿ. ರಣಭೈರೇ ಗೌಡರಿಗೆ ಹೆದರಿ ಮಲ್ಲಯುದ್ಧ ರದ್ದಾಯಿತೆಂದು ಪ್ರಜೆಗಳು ನಗುವು ದಿಲ್ಲವೆ ?

ಶಲ್ವನಾಯಕ—ಅದೂ ಸರಿ. ಪೆರುಮಲ್ಲ, ತಿರುಮಲ್ಲರೇ, ನೀವು ನಾಳೆಯೇ ಎಳಮಂಜಿ ಪುತ್ತೂರಿಗೆ ಹೋಗಿ ಭೈರವೇಶ್ವರ ದೇವಾಲಯದ ಮುಂದೆ ಸೂಕ್ತ ಸ್ಥಳವನ್ನು ಆರಿಸಿ, ಮಲ್ಲಯುದ್ಧ ನಡೆಯುವುದೆಂದು ಸುತ್ತ-ಮುತ್ತ ಹಳ್ಳಿಗಳಲ್ಲಿ ಸಾರಲು ಹೇಳಿ.

ಶಲ್ವನಾಯಕ—[ಮಂತ್ರಿಗಳ ಕಡೆ ತಿರುಗಿ] ಮಂತ್ರಿಗಳೇ !

ಮಂತ್ರಿ—ಪ್ರಭು.

ಶಲ್ವನಾಯಕ—ಮಲ್ಲಯುದ್ಧ ಸಮಯಕ್ಕೆ ನೀವು ಅಲ್ಲಿ ಇದ್ದು ವಿಜೇತರಿಗೆ ವಿಶೇಷ ಬಹುಮಾನಗಳನ್ನು ಹಂಚಲು ಏರ್ಪಾಟು ಮಾಡಿ. ನಮ್ಮ ಪ್ರತಿಷ್ಠೆಯನ್ನು ತೋರಿಸಲು ಯತ್ನಿಸಿ. ಪೆರಿಮಲ್ಲ, ತಿರುಮಲ್ಲರೇ ನೀವಿನ್ನು ಹೊರಡಿ. ಎಚ್ಚರಿಕೆಯಿಂದ ಕಾರ್ಯಸಾಧನೆಯಾಗಬೇಕು. [ಅವರು ಹೊರಡುವರು]

ಶಲ್ವನಾಯಕ—ನಾನಿನ್ನು ಶಯನಾಗಾರಕ್ಕೆ ಹೋಗುವೆನು.

ಮಂತ್ರಿ—ಮನೋರಮೆಯನ್ನು ತಮ್ಮಲ್ಲಿ ಕಳುಹಿಸಲೆ ?

ಶಲ್ವನಾಯಕ—ಮಂತ್ರಿಗಳೇ, ರಣಭೈರೇಗೌಡರ ಕುವರಿಯು ಹಿಡಿಯುವ ವರೆಗೂ ನಿದ್ರೆ ಎಲ್ಲಿ ? ಸದ್ಯಕ್ಕೆ ನರ್ತಕಿಯನ್ನೇ ಕಳುಹಿಸಿ.

ಮಂತ್ರಿ—ಚಿತ್ತ ಪ್ರಭು [ಹೋಗುವನು]

ಶಲ್ವನಾಯಕ [ಸ್ವತಃ]—ನಾಳೆ ಬೆಳಗಿನ ಜಾವ, ಮಾರು ವೇಷದಲ್ಲಿ ಎಳಮಂಜಿ ಪುತ್ತೂರಿಗೆ ಹೋಗುತ್ತೇನೆ. ಅರ್ಚಕನಿಗೆ ಕೇಳಿದಷ್ಟು ಹಣ ಕೊಟ್ಟು, ಆ ರಾಜಹಂಸದ ಕೃಪಾ ದೃಷ್ಟಿಯನ್ನು ನನ್ನ ಕಡೆ ಹರಿಸುವಂತೆ ಮಾಡುತ್ತೇನೆ. [ಮನೋರಮೆ ಬರುವಳು ಅವಳನ್ನು ನೋಡಿ] ಹಾ ! ಈ ಮನೋರಮೆಯೂ ಕೂಡ ನೋಡಲು ಸುಂದರಿಯೆ. [ತೂರಾಡುತ್ತಾ ಹೋಗಿ ಮಂಚದ ಮೇಲೆ ಬೀಳುವನು]

[ಪರದೆ ಬೀಳುವುದು]

o o o o

ದೃಶ್ಯ-೩

[ರಸ್ತೆ ಸೀನು]

ಸ್ಥಳ : ಯಳವಂಜಿ ಪುತ್ತೂರು

[ಇಬ್ಬರು ಡಂಗುರ ಬಾರಿಸುತ್ತಾ ಬರುತ್ತಾರೆ]

೧ನೇಯುವನು—ಕೇಳ್ರಪ್ಪೊ ಕೇಳ್ರಿ! ಕೇಳ್ರಪ್ಪೋ ಕೇಳ್ರಿ! ಚಿಕ್ಕೋರು, ದೊಡ್ಡೋರು, ಮಕ್ಕಳು, ಮುದುಕರು, ಗಂಡಸರು, ಹೆಂಗಸರು, ಎಲ್ಲಾ ಕೇಳ್ರಿ.

೨ನೇಯುವನು—ಅಲ್ಲಿ ನೋಡೋ, ಗೌಡ್ರ ಮಗಳು ಬರ್ತಿದಾಳೆ.

೧ನೇಯುವನು—ಹೌದು ಕಣೋ. ಇದು ಒಳ್ಳೆ ಸಮಯ. ಆ ಯಮ್ಮಾ ಅವರಿಗೆ ಕೇಳ್ಸೊ ಅಂಗೆ ಶಲ್ವನಾಯಕರನ್ನು ಹೊಗಳೋಣ.

೨ನೇಯುವನು—ಕೇಳ್ರಪ್ಪೋ, ಈ ಸುತ್ತ-ಮುತ್ತಲ ಸೀಮೆ ದೊರೆ ಶಲ್ವ ನಾಯಕರ ಭಂಟರಾದ ಪೆರಿಮಲ್ಲ, ತಿರುಮಲ್ಲರನ್ನ, ಈ ಊರಿನ ರಣಭೈರೇಗೌಡರ ತಮ್ಮ ವೀರಣ್ಣಗೌಡರು ಮಲ್ಲಯುದ್ಧಕ್ಕೆ ಕರೆ ದಿದ್ದಾರೆ. ಇದನ್ನ ನೋಡೋಕೆ ಎಲ್ಲಾ ಬನ್ನಿ. ಶಲ್ವನಾಯಕರ ಮಂತ್ರಿ ಕರ್ಪಯ್ಯ ಗೆದ್ದೋರಿಗೆ ಬಹುಮಾನ ಹಂಚತಾರೆ.

[ಢಂ, ಡಂ, ಡಂ, ಡಮ, ಡಮ ಎಂದು ಸಾರುತ್ತಾ ಹೋಗುವರು]

ದೇವಸ್ಥಾನ

ಅರ್ಚಕರು—ಇವರಿಗೇನೋ ಕೇಡುಗಾಲ ಬಂದಿದೆ. ದೇವರ ಪೂಜೆ ನಡೆಯು ವಾಗ ಇವರು ಈ ರೀತಿ ಬೊಗಳುತ್ತಿವೆ. ಮಲ್ಲಯುದ್ಧ ಮಾಡ್ತಾರಂತೆ ಮಲ್ಲಯುದ್ಧ. ಇವರ ಮುಂಡಾಮೋಚಿತು, ನಮ್ಮ ವೀರಣ್ಣಗೌಡರ ಧೈರ್ಯ, ಶಕ್ತಿಗಳು ಈ ದರಬೇಸಿಗಳಿಗೇನು ಗೊತ್ತು ?

[ದೊಡ್ಡಾಂಬೆ ಪೂಜಾ ಸಾಮಗ್ರಿಗಳೊಡನೆ ಬರುವಳು]

ದೊಡ್ಡಾಂಬೆ—ಈಗ ಡಂಗೂರ ಹಾಕಿದರಲ್ಲಾ, ಇದೆಲ್ಲಾ ಏನು ರಾದ್ಧಾಂತ ಸ್ವಾಮಿಗಳೇ ?

ಅರ್ಚಕರು—ನೋಡಿ ತಾಯಿ, ಕೀಟ್ಲೆ ಮಾಡೋಕೆ ನೂರೆಂಟು ನೆಪಗಳು. ಆ ಶಲ್ವನಾಯಕನ ಕ್ರೂರ ದೃಷ್ಟಿ ಇದುವರೆವಿಗೂ ನಮ್ಮೂರಿನ ಮೇಲೆ ಬಿದ್ದಿರಲಿಲ್ಲ. ಈಗ ಶುರುವಾಗಿದೆ ನೋಡಿ! ಇನ್ನೇನೇನು ರಾದ್ಧಾಂತಗಳು ಕಾದಿವೆಯೋ ? ಯಾರಿಗೆ ಗೊತ್ತು, ಈ ನಮ್ಮಪ್ಪ ಭಗವಂತನೇ ಬಲ್ಲ.

ದೊಡ್ಡಾಂಬೆ—ದೇವರಿದ್ದಾನೆ ಸ್ವಾಮಿ. ನಂಬಿದವರನ್ನು ಆತ ಎಂದಿಗೂ ಕೈ ಬಿಡುವುದಿಲ್ಲ. ಸಾತ್ವಿಕರೂ, ಪರೋಪಕಾರಿಗಳೂ ಆದ ನಮಗೆ ಪರಮಾತ್ಮ ಅನ್ಯಾಯವೆಸಗಲಾರ.

೦೦೦೦

ದೃಶ್ಯ—೪

[ಮಾರು ವೇಷದಲ್ಲಿ ಶಲ್ವನಾಯಕನ ಪ್ರವೇಶ]

ಮಾರುವೇಷದ ನಾಯಕ—ನಿಜವನ್ನೇ ನುಡಿದರು ಗೌಡರ ಕುವರಿ. ಈಕೆಯು ರೂಪ-ಭಕ್ತಿಗಳಿಗೆ ತಕ್ಕಂತೆ, ದೇಶವನ್ನಾಳುವ ನಾಯಕನ ಕೈ ಹಿಡಿಯುವ ಭಾಗ್ಯವನ್ನು ಪರಮಾತ್ಮ ಈಕೆಗೆ ಕೊಡುತ್ತಾನೆ.

ಅರ್ಚಕರು—ತಾವು ಯಾರು ? ಎಲ್ಲಿಯವರು ? ಅಪರಿಚಿತರಂತೆ ಕಾಣುವಿರಿ. ತೀರ್ಥ-ಪ್ರಸಾದಗಳನ್ನು ತರುತ್ತೇನೆ. ಇರಿ.

[ಅರ್ಚಕರು ಒಳಗೆ ಹೋಗುವರು. ದೊಡ್ಡಾಂಬೆ ತಲೆ ಬಗ್ಗಿಸಿ ಭಕ್ತಿಯಿಂದ ಇರುತ್ತಾಳೆ. ಮಾರು ವೇಷದ ನಾಯಕ ಆಕೆಯನ್ನೇ ನೋಡುತ್ತಾನೆ]

ಮಾರುವೇಷದ ನಾಯಕ—ಆಹಾ ! ಎಂಥಹ ಸೌಂದರ್ಯ ! ಈಕೆಯು ಕೈ ಹಿಡಿಯುವವನು ಚಕ್ರಾಧೀಶ್ವರನೇ ಆಗುತ್ತಾನೆ. ಸ್ವಲ್ಪ ತಲೆಯೆತ್ತಿ ನೋಡಬಾರದೇನು ? ಓಹೋ, ನಿನ್ನ ಮೌನವು ನಿನ್ನ ಸೌಂದರ್ಯಕ್ಕೆ ಚಿನ್ನಕ್ಕೆ ಮೆರಗು ಕೊಟ್ಟಂತಿದೆ. ಗಂಗರಸರು ಇಡೀ ದಕ್ಷಿಣ ಭಾರತವನ್ನು ಆಳಿ ಮೆರೆದವರು. ಅವರ ರಾಣಿಯರ ಸೌಂದರ್ಯವನ್ನೆಲ್ಲಾ ಸರಿ ತೊಗಿದರೂ ನಿನ್ನ ರೂಪಕ್ಕೆ ಸರಿ ತೂಗದು.

[ಇದನ್ನು ಕೇಳುತ್ತಿದ್ದ ಪುಟ್ಟೂಶಾಸ್ತ್ರಿ ಓಡಿ ಬಂದು ದೊಡ್ಡಾಂಬೆ ಬಳಿ ನಿಲ್ಲುವನು]

ಮಾರುವೇಷದ ನಾಯಕ—ಓ ! ಮಾತನಾಡಿದಳು ರಾಜಹಂಸಿಣಿ ಒಮ್ಮೆ ನನ್ನನ್ನು ನೋಡಬಾರದೆ. ಮಯೂರಿ.

ಮಾರುವೇಷದ ನಾಯಕ—ಓ ! ನನ್ನನ್ನು ಪರಪುರುಷನೆಂದು ಬಿಟ್ಟಳು, ಈ ಚೆಲುವೆ ಸರ್ವ ಪರಿತ್ಯಾಗ ಮಾಡಿರುವ ಈ ಭಕ್ತನನ್ನು ಒಮ್ಮೆ ನೋಡಿದರೆ. ನಿಮ್ಮ ಕುಲ-ಕೋಟಿಯೇ ಉದ್ಧಾರವಾಗುವುದು.

ಮಾರುವೇಷದ ನಾಯಕ—ಕಲ್ಲಾಗಿ ಕುಳಿತಿರುವ ನಿಮ್ಮ ಭೈರವ ಏನನ್ನು ತಾನೆ ಮಾಡಬಲ್ಲನು.

[ಅರ್ಚಕರು ಮಂಗಳಾರತಿ ತಟ್ಟೆಯೊಡನೆ ಬಂದು]

ಅರ್ಚಕರು—ಓಂ, ಶ್ರೀ ಭೈರವೇಶ್ವರಾಯ ನಮಃ
ಓಂ, ಶ್ರೀ ರುದ್ರಾಯ ನಮಃ
ಓಂ, ಶ್ರೀ ಕಾಲಾಯನಮಃ
ತೆಗೆದುಕೊಳ್ಳಿ ತೀರ್ಥ ಪ್ರಸಾದಗಳನ್ನು

[ದೊಡ್ಡಾಂಬೆ ತೀರ್ಥ ಪ್ರಸಾದಗಳನ್ನು ಸ್ವೀಕರಿಸಿ ಮಾರುವೇಷದ ನಾಯಕನ ಕಡೆ ಸಿಟ್ಟಿನ ದೃಷ್ಟಿಯನ್ನು ಬೀರುತ್ತಾ, ಪುಟ್ಟುವಿನೊಡನೆ ಸರಸರನೆ ನಿರ್ಗಮಿಸುವಳು]

ಅರ್ಚಕರು—ತೆಗೆದುಕೊಳ್ಳಿ ಭಕ್ತರೇ, ತೀರ್ಥ ಪ್ರಸಾದಗಳನ್ನು

ಮಾರು ವೇಷದ ನಾಯಕ—ದೇವಿಯ ದರ್ಶನವಾಯಿತು ? ಇನ್ನು ಆಕೆಯ ಪ್ರಸಾದವನ್ನು ಸ್ವೀಕರಿಸಬೇಕಲ್ಲವೇ ?

ಅರ್ಚಕರು—ನಿಮಗೇನಂ. ಕಣ್ಣು ಸರಿಯಾಗಿ ಕಾಣುವುದಿಲ್ಲವೊ ?

ಮಾರುವೇಷದ ನಾಯಕ—[ಕೋಪದಿಂದ] ಏನಂದಿರಿ ?

ಅರ್ಚಕರು—ಮತ್ತೇನಯ್ಯ. ರುದ್ರಭಯಂಕರನಂತೆ ಎದುರಿಗೆ ನಿಂತಿರುವ 6 ಅಡಿ ಎತ್ತರದ ಭೈರವೇಶ್ವರನನ್ನು ದೇವಿಯೆಂದು ಕರೆಯುತ್ತಿದ್ದೀ.

ಮಾರು ವೇಷದ ನಾಯಕ—ದೇವೀ ಭಕ್ತನಾದ ನನಗೆ ಎಲ್ಲಾ ದೇವ ದೇವತೆಗಳು ದೇವೀ ರೂಪದಲ್ಲಿಯೇ ಕಾಣುತ್ತವೆ.

ಅರ್ಚಕರು—ಮಹಿಷಾಸುರ ಮುಂತಾದ ರಾಕ್ಷಸರೆಲ್ಲಾ ರಣಚಂಡಿಯನ್ನು ದೇವೀ ರೂಪದಲ್ಲಿಯೇ ಕಂಡದ್ದು.

ಮಾರುವೇಷದ ನಾಯಕ—ಅರ್ಚಕರೇ, ಪುರಾಣಕತೆ ನನಗೆ ಬೇಡ, ನನಗೂ ಭೂತ-ಭವಿಷ್ಯತ್‌ಗಳು ಗೊತ್ತಿವೆ.

ಅರ್ಚಕರು—ಅಯ್ಯಾ ಭಕ್ತರೆ, ನಿಮ್ಮ ಭೂತ-ಭವಿಷತ್‌ಗಳ ವಿಚಾರ ನನಗೇಕೆ ? ಅದೋ, ವೀರಣ್ಣಗೌಡರು ಈ ಕಡೆ ದಯಮಾಡಿಸುತ್ತಿದ್ದಾರೆ. ನೀವು ಇಲ್ಲಿಂದ ಹೊರಡುವುದು ಕ್ಷೇಮಕರ.

ಮಾರುವೇಷದ ನಾಯಕ—ಅಬ್ಬಾ ! ಪರಭೀಮನಂತೆ ಇದ್ದಾನೆ. ಈ ವೀರಣ್ಣಗೌಡನೆಲ್ಲಿ ? ನಮ್ಮ ಪೆರಿಮಲ್ಲನೆಲ್ಲಿ ? ನಾನು ಇಲ್ಲಿಂದ ಮರೆಯಾಗುವುದೇ ಲೇಸು. [ಅಲ್ಲಿಂದ ನಿರ್ಗಮಿಸುವನು ವೀರಣ್ಣಗೌಡರು ಪ್ರವೇಶಿಸುವರು.]

ವೀರಣ್ಣಗೌಡರು—ಅರ್ಚಕರೇ, ಯಾರಿವರು ? ಹೊಸಬರಂತೆ ಕಾಣುತ್ತದೆ.

ಅರ್ಚಕರು—ಯಾರೋ ಗೊತ್ತಿಲ್ಲ, ಬುಡು ಬುಡಿಕೆ ದಾಸಯ್ಯನಂತೆ ಬಾಯ್ಗೆ ಬಂದಂತೆ ಬೊಗಳಿದ. ನಿಮ್ಮನ್ನು ನೋಡುತ್ತಲೇ ಕಂಬಿ ಕಿತ್ತ. ಇದರಲ್ಲೇನೋ ಮೋಸವಿದೆ.

ವೀರಣ್ಣಗೌಡ—ಇರಿ ಒಂದು ಕ್ಷಣ, ಬರುತ್ತೇನೆ.

[ಹೊರಗೆ ಹೋಗಿ ನೋಡಿ ಮತ್ತೆ ಬರುವನು]

ಅರ್ಚಕರೇ, ಈ ಹೊಸಬ ಕುದುರೇ ಮೇಲೆ ಕುಳಿತು ವೇಗವಾಗಿ ಹೊರಟು ಹೋದ. ಯಾರಿರಬಹುದು ಇವನು ?

ಅರ್ಚಕರು—ಯಾಕೋ, ಇತ್ತೀಚೆಗೆ ದಿನಕ್ಕೊಂದು ಆಚ್ಚರಿ ಸಂಗತಿಗಳು ನಡೆಯುತ್ತಿವೆ. ನಡೆಯಲಿ, ನಮ್ಮ ಪಾಲಿಗೆ ಭೈರವೇಶ್ವರನಿದ್ದಾನೆ. ತೆಗೆದುಕೊಳ್ಳಿ ತೀರ್ಥ ಪ್ರಸಾದಗಳನ್ನು.

[ತೆರೆ ಬೀಳುವುದು]

೦ ೦ ೦

ದೃಶ್ಯ-೫

ಸ್ಥಳ : ಎಳಮಂಜಿ ಪುತ್ತೂರು

ಮಲ್ಲಯುದ್ಧ

[ಒಂದು ನಡೆ ಶಲ್ವನಾಯಕನ ಮಂತ್ರಿ, ಆತನ ಪಕ್ಕದಲ್ಲಿ ಪೆರಿಮಲ್ಲ, ತಿರುಮಲ್ಲ ಇರುತ್ತಾರೆ. ಮತ್ತೊಂದು ಕಡೆ ರಣಭೈರೇಗೌಡರೂ ಆತನ ಸಹೋದರರಾದ ಭದ್ರೇಗೌಡ, ವೀರಣ್ಣ ಗೌಡ, ಸೇವಕ ಚೆನ್ನ-ಅರ್ಚಕರು ಇರುತ್ತಾರೆ. ಮಂತ್ರಿ ರಂಗಸ್ಥಳದ ಮೇಲೆ ಬಂದು]

ಮಂತ್ರಿ—ಹಿರಿಯರಾದ ರಣಭೈರೇಗೌಡರಲ್ಲಿ, ಗ್ರಾಮದ ಪ್ರಮುಖರಲ್ಲಿ ಹಾಗೂ ಇಲ್ಲಿ ಸೇರಿರುವ ಸಮಸ್ತ ಪ್ರೇಕ್ಷಕರಲ್ಲಿ ಭಿನ್ನವಿಸಿಕೊಳ್ಳುವುದೇನೆಂದರೆ— ಅರಿತೋ, ಅರಿಯದೆಯೋ, ನಮ್ಮವರು ಈ ಮಲ್ಲಯುದ್ಧವನ್ನು ಹೂಡಿರುತ್ತಾರೆ. ಇದು ಒಂದು ರೀತಿಯಲ್ಲಿ ಒಳ್ಳೆಯದೇ. ಮಲ್ಲಯುದ್ಧ ಪರೀಕ್ಷೆಯಲ್ಲಿ ವೀರತ್ವ, ಧೈರ್ಯ-ಸಾಹಸಗಳನ್ನು ಪ್ರದರ್ಶಿಸಿದವರು ಬೆಳಕಿಗೆ ಬಂದು ರಾಜಮನ್ನಣೆಗೆ ಪಾತ್ರರಾಗುತ್ತಾರೆ. ಪ್ರತಿಯೊಂದು ಗ್ರಾಮದಲ್ಲೂ ಇಂಥಹ ವೀರ ಪರೀಕ್ಷೆಗಳನ್ನು ಏರ್ಪಡಿಸಿ, ಗೆದ್ದವರನ್ನು, ನಾಯಕರ ಆಸ್ಥಾನಕ್ಕೆ ಸೇರಿಸಿಕೊಳ್ಳಬೇಕೆಂಬುದು ನಮ್ಮ ನಾಯಕರ ಇಚ್ಛೆ. ಒಂದು ವೇಳೆ ವೀರಣ್ಣಗೌಡರು ಗೆದ್ದರೆ, ನಮ್ಮ ಆಸ್ಥಾನದಲ್ಲಿ ಗೌರವ ಸ್ಥಾನ ದೊರೆಯುತ್ತದೆ.

ವೀರಣ್ಣಗೌಡ—ಗೆಲ್ಲಲಿ, ಸೋಲಲಿ, ಒಬ್ಬರಿಗೆ ತಲೆ ಬಾಗಿ ಬಾಳುವ ವಂಶದಲ್ಲಿ ನಾವು ಹುಟ್ಟಿದವರಲ್ಲ. ಶಾಂತಿ, ಸುಭಿಕ್ಷಗಳಿಂದ ಬಾಳುತ್ತಿರುವ ಈ ಊರಿನಲ್ಲಿ ನಿಮ್ಮವರು ಕಾಲು ಕೆರೆದು ನಮ್ಮನ್ನು ಮಲ್ಲಯುದ್ಧಕ್ಕೆ ಎಳೆದಿದ್ದಾರೆ. ನಿಮ್ಮನ್ನು ಇಲ್ಲಿಗೆ ಕರೆದು ಪರಿಚಯ ಮಾಡಿಕೊಡಿ ಎಂದು ಹೇಳಿದವರಾರು ? ಮಲ್ಲಯುದ್ಧ ಶುರುವಾಗಲಿ, ಜಯಾಪಜಯಗಳು ತಾವೇ ತಾವಾಗಿ ಅರಿವಾಗುತ್ತದೆ.

ಮಂತ್ರಿ—[ರಣಭೈರೇಗೌಡರ ಕಡೆ ನೋಡಿ] ನಿಮ್ಮ ತಮ್ಮಂದಿರು ಹದ್ದು ಮೀರಿ ಮಾತನಾಡುತ್ತಿದ್ದಾರೆ. ನೋಡಿ ಗೌಡರೆ!

ರಣಭೈರೇಗೌಡ—ವೀರರಿಗೆ ತಕ್ಕ ರೀತಿಯಲ್ಲೇ ನನ್ನ ತಮ್ಮ ನುಡಿದಿದ್ದಾರೆ. ನಿನ್ನೆಯ ದಿನ ಗುಡಿಯ ಬಳಿ ನಿಮ್ಮ ಮಲ್ಲರು ಹೆಣ್ಣು ಮಕ್ಕಳ ಎದುರಿಗೆ ದುಷ್ಟರಂತೆ ವರ್ತಿಸಿದಾಗ, ಅವರನ್ನು ನನ್ನ ತಮ್ಮ ಜೀವ ಸಹಿತ ಬಿಟ್ಟದ್ದೇ ಹೆಚ್ಚೆಂದು ತಿಳಿ.

ಮಂತ್ರಿ—ಪ್ರಖ್ಯಾತ ಗೌಡ ವಂಶದವರೆಂದು ಮರ್‍ಯಾದೆ ಕೊಟ್ಟದ್ದೇ ತಪ್ಪಾಯಿತು ಗೌಡರೆ. ಹುಂ! ಮಲ್ಲಯುದ್ಧ ನಡೆಯಲಿ ಪೆರಿಮಲ್ಲ.

ಪೆರಿಮಲ್ಲ—ಮಂತ್ರಿಗಳೇ, ನಾನು ಸಿದ್ಧ.

ಮಂತ್ರಿ—ನಮ್ಮ ನಾಯಕರ ಅಳಿವು. ಉಳಿವುಗಳು ನಿನ್ನ ಕೈಯಲ್ಲಿವೆ, ಮಲ್ಲ.

ಪೆರಿಮಲ್ಲ—ಅದನ್ನು ಯೋಚಿಸದೆ, ಮಲ್ಲಯುದ್ಧವನ್ನು ನೋಡಿ, ಮಂತ್ರಿಗಳೇ. ಇನ್ನು ಸ್ವಲ್ಪ ಹೊತ್ತಿನಲ್ಲಿಯೇ ಅವರು ನಮಗೆ ಶರಣಾಗುವರು.

ವೀರೇಗೌಡ—ಬರೀ ಒಣ ಮಾತಿನಿಂದ ಪ್ರಯೋಜನವಿಲ್ಲ ಪೆರಿಮಲ್ಲ. ಗಂಭೀರವಾಗಿ ಮಲಗಿ ನಿದ್ರಿಸುತ್ತಿದ್ದ ಸಿಂಹರಾಜನನ್ನು ಎಚ್ಚರಿಸುವಂತೆ, ಈ ಗೌಡ ವಂಶದವರನ್ನು ನೀವು ಕೆರಳಿಸಿದ್ದೀರಿ.

ಮಂತ್ರಿ—ಹೂಂ! ನಡೆಯಲಿ, ಮಲ್ಲಯುದ್ಧ.

[ಪೆರಿಮಲ್ಲ ಹೂಂಕರಿಸಿ, ತೊಡೆ ತಟ್ಟುತ್ತಾ ಮುಂದೆ ಬರಲು, ವೀರಣ್ಣಗೌಡರು ಅವನ ಎದುರು ಭಯಂಕರ ಯಮನಂತೆ ನಿಲ್ಲುತ್ತಾರೆ]

ಶಲ್ವನಾಯಕನ ಕಡೆಯವರು

ಶಲ್ವನಾಯಕರಿಗೆ ಜಯವಾಗಲಿ!

ಅಮಾತ್ಯ ಕರಪ್ಪಯ್ಯನವರಿಗೆ ಜಯವಾಗಲಿ!

ಪೆರುಮಲ್ಲ ತಿರುಮಲ್ಲರಿಗೆ ಜಯವಾಗಲಿ!

ರಣಭೈರೇಗೌಡರ ಕಡೆಯವರು

ದೇವಿ ಕೆಂಪಾಂಬೆಗೆ ಜಯವಾಗಲಿ!

ದೇವ ಭೈರವೇಶ್ವರಿಗೆ ಜಯವಾಗಲಿ!

ರಣಭೈರೇಗೌಡರಿಗೆ ಜಯವಾಗಲಿ!

[ಎಂದು ಪ್ರೋತ್ಸಾಹಿಸುತ್ತಾರೆ]

[ಮಲ್ಲಯುದ್ಧ ತೀವ್ರವಾಗಿ ನಡೆದು, ಪೆರಿಮಲ್ಲ ಸೋತು, ತಲೆ ತಗ್ಗಿಸಿ ನಿಲ್ಲುವನು]

ಮಂತ್ರಿ—ಪೆರಿಮಲ್ಲಾ, ನಿನ್ನ ಸಂಬಿದ ನಾವು ತಲೆ ತಗ್ಗಿಸುವಂತಾಯ್ತು, ತಿರುಮಲ್ಲ ನೀನಾದರೂ ಮರ್ಯಾದೆಯನ್ನು ಕಾಪಾಡು, ಹೋಗು ಮಲ್ಲಯುದ್ಧಕ್ಕೆ.

ತಿರುಮಲ್ಲ—ನೋಡುತ್ತಿರಿ, ಅಮಾತ್ಯರೆ! ಈ ವೀರಣ್ಣಗೌಡರನ್ನು ಮಣ್ಣು ಮುಕ್ಕಿಸುತ್ತೇನೆ. (ತೊಡೆ ತಟ್ಟುತ್ತ ಮುನ್ನುಗ್ಗುವನು)

ರಣಭೈರೇಗೌಡ—ಮುನ್ ಸೂಚನೆ ಇಲ್ಲದೆ, ವಿರಾಮವಿಲ್ಲದೆ, ಇನ್ನೊಬ್ಬ ಮಲ್ಲನನ್ನು ಯುದ್ಧಕ್ಕೆ ಇಳಿಸುವುದು ಧರ್ಮ ವಿರುದ್ಧವಲ್ಲವೇ ಭದ್ರೇ ಗೌಡ.

ಭದ್ರೇಗೌಡ—ಅಣ್ಣಾ !

ರಣಭೈರೇಗೌಡ—ತಮ್ಮ, ಇದೀಗ ನಿನ್ನ ಸರದಿ. ವೀರಣ್ಣಗೌಡ ದಣಿದಿದ್ದಾನೆ.

ಮಂತ್ರಿ—ಬೇರೆಯವರಿಗೆ ಅವಕಾಶವಿಲ್ಲ. ಇವರಿಬ್ಬರಿಗೂ ಏಕ ಕಾಲದಲ್ಲಿ ಮಲ್ಲಯುದ್ಧಕ್ಕೆ ಆಹ್ವಾನವಿತ್ತಿದ್ದು ವೀರಣ್ಣಗೌಡರೇ. ಆದ್ದರಿಂದ ಅವರೇ ಯುದ್ಧ ಮಾಡಬೇಕು.

ವೀರಣ್ಣಗೌಡ—ನೀವು ಚಿಂತಿಸಬೇಡಿ ಅಣ್ಣಾಜಿ ! ಬರಲಿ, ಅವನ ಕಡೆಯವರೆಲ್ಲಾ ಬರಲಿ, ಕುಲದೇವರಾದ ಭೈರವೇಶ್ವರನ ಆಣೆಯಾಗಿ ಅವರನ್ನು ಯಮಾಲಯಕ್ಕೆ ಕಳುಹಿಸುತ್ತೇನೆ. ಬಾರೋ, ತಿರುಮಲ್ಲ. ಹೆಂಗಳೆಯರ ಮುಂದೆ ಜಂಭ ಕೊಚ್ಚಿದ ಆ ಪೆರಿಮಲ್ಲನ ಗತಿಯೇ ನಿನಗೂ. (ಯುದ್ಧದಲ್ಲಿ ತಿರುಮಲ್ಲ ಹಲ್ಲು ಕಿರಿದು ಸೋತು ನೆಲವನ್ನು ಕಚ್ಚುವನು)

ರಣಭೈರೇಗೌಡರ ಕಡೆಯವರು ಮತ್ತೆ ಉಕ್ಕಿದ ಸಂತಸದ ಜಯಕಾರ ಮಾಡುವನು–

ಕೆಂಪಾಂಬಾ ದೇವಿಗೆ ಜಯವಾಗಲಿ !
ಭೈರವೇಶ್ವರ ದೇವರಿಗೆ ಜಯಗಾಗಲಿ !
ವೀರಣ್ಣಗೌಡರು ಚಿರಾಯುವಾಗಲಿ !
ರಣಭೈರೇಗೌಡರಿಗೆ ಜಯವಾಗಲಿ !

(ಎಲ್ಲಿಂದಲೋ ಒಂದು ಕಿರುಗತ್ತಿಯನ್ನು ವೀರಣ್ಣಗೌಡರಿಗೆ ಗುರಿ ಇಟ್ಟು ಎಸೆಯುತ್ತಾರೆ. ಅವರು ಜಾಣ್ಮೆಯಿಂದ ಅದರಿಂದ ತಪ್ಪಿಸಿಕೊಂಡು. ಕಿರುಗತ್ತಿಯನ್ನು ಕೈಲಿ ಹಿಡಿದು, ಕೋಪದಿಂದ)–

ವೀರಣ್ಣಗೌಡ—ಎದುರು ನಿಂತು ಹೋರಾಡದ ಹೇಡಿಗಳು, ಮರೆಯಲ್ಲಿ ನಿಂತು,

ಕಿರುಗತ್ತಿ ಎಸೆದಿರುತ್ತಾರೆ. ಅವರಿಗೆ ಧೈರ್ಯವಿದ್ದರೆ ನನ್ನ ಎದುರಿಗೆ ಬಂದು ನಿಲ್ಲಲಿ. (ಜನರಲ್ಲಿ ಗದ್ದಲ ಉಂಟಾಗುತ್ತದೆ.)

ಮಂತ್ರಿ—ಶಾಂತಿ, ಶಾಂತಿ, ಊರಿನ ಮಹಾ ಜನರೆ. ಈ ಮಲ್ಲಯುದ್ಧದಲ್ಲಿ ಗೆದ್ದ ವೀರಣ್ಣಗೌಡರಿಗೆ ನನ್ನ ಅಭಿವಂದನೆಗಳು. ಇವರು ಈ ಗ್ರಾಮಕ್ಕೆ ಕೀರ್ತಿ ತಂದಿದ್ದಾರೆ. ಇವರನ್ನು ಹೇಗೆ ಸನ್ಮಾನಿಸಬೇಕೆಂದು ತಿಳಿಯದು. ಅವರು ಮಹಾಮಲ್ಲರೆಂದು ಘೋಷಿಸಿ, ನಾಯಕರ ಪರವಾಗಿ ಈ ಬಹುಮಾನವನ್ನು ನೀಡುತ್ತೇವೆ. ದಯವಿಟ್ಟು ಸ್ವೀಕರಿಸಬೇಕು.

ಭದ್ರೇಗೌಡ—ನಾವು ಇತರರಿಗೆ ಬಹುಮಾನವನ್ನು ಕೊಡುವವರೇ ಹೊರತು, ಇತರರಿಂದ ಸ್ವೀಕರಿಸುವವರಲ್ಲ. ನೀವು ನಮಗೆ ಕೊಡಬೇಕಾದ ಬಹುಮಾನವೆಂದರೆ ನಿಮ್ಮವರಿಗೆ ಎಚ್ಚರಿಕೆ ಕೊಡಬೇಕಾದುದು. ಅವರು ಅಪ್ಪಿತಪ್ಪಿ ಈ ಕಡೆ ಸುಳಿದರೂ ಅವರ ಹೆಣಗಳು ಹಿಂದಿರುಗುತ್ತವೆ.

ತಿರುಮಲ್ಲ—ಮಂತ್ರಿಗಳೇ, ನಾವು ಇಲ್ಲಿಂದ ಪರಾರಿಯಾಗುವುದೇ ಲೇಸು. (ಹೋಗುತ್ತಿರುವವರನ್ನು ತಡೆದು)

ವೀರಣ್ಣಗೌಡರು—ಪೆರಿಮಲ್ಲ, ನಿಲ್ಲು. ಸೋತು ಅವಮಾನಿತನಾದ ನೀನು, ಮರೆಯಲ್ಲಿ ನಿಂತು, ಎನ್ನಮೇಲೆ ಎಸೆದ ಕಿರುಗತ್ತಿಯನ್ನು ತೆಗೆದುಕೊ. ನಿನ್ನ ಮೋಸದ ಕೃತ್ಯವನ್ನು ನಾನರಿಯಲಾರೆ ಎಂದು ತಿಳಿದೆಯಾ ? ಹೋಗು. ನಿಮ್ಮ ನಾಯಕರಿಗೆ ತಿಳಿಸು–ದೇಶವನ್ನಾಳುವವರು ಗಂಭೀರವಾದ ಸಿಂಹದಂತೆ ನಡೆಯಬೇಕೆಂದೂ, ಮಾರ್ಜಾಲನಂತೆ ವರ್ತಿಸುವುದು ಸರಿಯಲ್ಲವೆಂದು.

(ಮಂತ್ರಿ ಪೆರಿಮಲ್ಲ ಮತ್ತು ತಿರುಮಲ್ಲರು ಅವಮಾನಿತರೊಂಡು ಹಿಂತಿರುಗುವರು)

(ತೆರೆ ಬೀಳುವುದು)

ದೃಶ್ಯ–೬

(ರೋಡ್ ಸೀನು–ಸೇವಕರಾದ ಚೆನ್ನ–ಚೆನ್ನಿ ಪ್ರವೇಶಿಸುವರು)

ಚೆನ್ನ—ಇದೇನ್ ಅನ್ಯಾಯ ! ಮೂರು ದಿನಗಳಿಂದ ಗದ್ದೆಗಳಿಗೆ ನೀರಿಲ್ಲವಂತೆ. ಬೆಳೆಗಳು ಒಣಗುತ್ತಿವೆಯಂತೆ. ಆ ಶಲ್ವನಾಯಕರಿಗೆ ಏನ್ ಬಂತಪ್ಪ ಕೇಡ್‌ಗಾಲ !

ಚೆನ್ನಿ—ಶಲ್ವನಾಯ್ಕನಿಗೂ, ಗದ್ದೆ ಒಣಗೋಕು ಏನ್ ಸಂಬಂಧಾರ‍್ರೀ.

ಚೆನ್ನ—ನಿನ್ನೆ ಸೋತು ಸುಣ್ಣವಾದ ಆ ಶಲ್ವನಾಯಕನ ಕಡೆಯೋರು, ಈ ಪಾಪಿ ರೈತರಿಗೆಲ್ಲಾ ತೊಂದರೆ ಕೊಡ್ತಾ ಅವರಂತೆ. ನಮ್ಮೂರ ಕಡೆ ಇರೋ ಕೆರೆ ತೂಬನ್ನ ಮುಚ್ಚಿಸಿ ನೀರು ಬರದ್ಹಾಂಗೆ ಮಾಡವ್ರೆ. ಕಂದಾಯ ಕಟ್ಟದವರ ಮನೆಗಳ ಪಾತ್ರೆ ಪೆಟ್ಟಿಗೆ ಹೊತ್ಕೊಂಡು ಹೋಗ್ತಾ ಅವ್ರೆ.

ಚೆನ್ನಿ—ಈ ಶಲ್ವನಾಯ್ಕನಿಗೆ ಬುದ್ಧಿ ಕಲ್ಸೋರು ಯಾರೂ ಇಲ್ವೆ ? ಅವನ ಹಾವಳೀನ ಜನ ಹೇಗೆ ಸಹಿಸಿಕೊಂಡಿರೋದು ?

ಚೆನ್ನ—ನಮ್ಮ ಧಣಿಯೋರು ಮನಸ್ಸು ಮಾಡಿದ್ರೆ ಏನಾರಾ ಆಗ್ಬಹುದು. ಆದರೆ ಅವರ ರೀತೀನೆ ಬೇರೆ. ದ್ಯಾವರಂತಾ ಮನಸುರು.

ಚೆನ್ನಿ—ಅಂಗಾದ್ರೆ, ದಿನಕ್ಕೊಂದು ಗಲಾಟೆ ಆಗ್ತಾ ಇದ್ರೆ, ಈ ಊರಾಗ ಬದ್ಕೋದು ಯೆಂಗೇ ಅಂತಾ !

ಚೆನ್ನ—ಅದಕ್ಕೆ, ಈ ಸುತ್ತುಮುತ್ತಲ ಗ್ರಾಮಗಳ ಹಿರೇರು ಸೇರಿ ಏನಾರ ಮಾಡ್ತಾರೆ. ಅದು ಸರಿ ಚೆನ್ನಿ, ಹೆಂಗಸು ಮುಂಡೇದು ನೀನು ಮನೇ ಕೆಲ್ಸ ಮಾಡ್ಕೊಂಡಿರೋದು ಬಿಟ್ಟು, ಗಂಡ್ಸಜತ್ಯಾಗ ಚರ್ಚೆ ಮಾಡಾಕ್ ಬರ್ತೀಯಲ್ಲಾ, ಹೋಗ್–ಹೋಗ್.

ಚೆನ್ನಿ—ಓ ! ನೀನ್ ಬಲೇ ದೊಡ್ಡ ಗಂಡ್ಸು, ನಿನ್ನ ಕೆಲ್ಸಾನ ಕಂಡಿಲ್ವೆ !

ಚೆನ್ನ—ಲೇ ಚೆನ್ನಿ, ಅಶ್ವತ್ಥಕಟ್ಟೇ ಮೇಲೆ ಏನೋ ಚರ್ಚೆಯಂತೆ. ಆ ಕಡೆ ಹೋಗಿ ಬರ್ತೀನಿ. (ಹೋಗುವನು)

ದೃಶ್ಯ–೭

(ಕೆಲವು ಗ್ರಾಮಗಳ ಮುಖಂಡರ ಜತೆ, ರಣಭೈರೇಗೌಡರು, ವೀರಣ್ಣಗೌಡರು, ಭದ್ರೇಗೌಡರು, ಚೆನ್ನ ಇರುತ್ತಾರೆ–ರಣಭೈರೇಗೌಡರು ಊರನ್ನು ಬಿಡುವ ನಿರ್ಧಾರ ಕೈಗೊಳ್ಳುತ್ತಾರೆ)

ಒಂದನೆಯ ಪ್ರಮುಖ—ರಣಭೈರೇಗೌಡರೆ, ಇದುವರೆಗೂ ನೀವು ತೋರಿದ ದಾರಿಯಲ್ಲಿಯೇ ನಡೆದು, ನಿಮ್ಮ ಸಹಾಯವನ್ನು ಪಡೆಯುತ್ತಿದ್ದೆವು. ಬೆಳೆಗಳಾಗದೆ, ರೈತರು ನಷ್ಟ ಪಟ್ಟಿರುತ್ತಾರೆ. ಇಂಥಹ ಸಮಯದಲ್ಲೇ ಆ ಶಲ್ವನಾಯಕರು ಕರ–ಕಂದಾಯಗಳ ನೆಪದಲ್ಲಿ ಜನರನ್ನು ಮತ್ತಷ್ಟು ಕಷ್ಟಕ್ಕೆ ಗುರಿ ಮಾಡುತ್ತಿದ್ದಾರೆ.

ಎರಡನೆಯ ಪ್ರಮುಖ—ಈಗ ತಾನೇ ದೇವರ ಕರುಣೆಯಿಂದ ಮಳೆಯಾಗಿದೆ. ಆರಂಭ ಪ್ರಾರಂಭಿಸುವ ಈ ಸಮಯದಲ್ಲಿ, ಕಂದಾಯ ವಸೂಲಿ ನೆಪದಲ್ಲಿ, ದನ–ಕುರಿಗಳನ್ನು ಹಿಡಿದುಕೊಂಡು ಹೋದ್ರೆ ಆರಂಭ ಮಾಡೋದು ಹೇಗೆ ?

ಚೆನ್ನ—ಶಿವ ಮಳೆ ಸುರ್ಸಿ ಭೂತಾಯಿ ಬೆಳೆ ಕೊಟ್ರೆ, ಈ ಶಲ್ವನಾಯಕ ದುರ್ಭಿಕ್ಷ ಕೊಡ್ತಾ ಅವ್ನೆ.

ರಣಭೈರೇಗೌಡ—ಚೆನ್ನಾ, ಹಿರಿಯರು ಮಾತನಾಡುವಾಗ ಮಧ್ಯೆ ತಲೆ ಹಾಕಬೇಡ ಎಂದು ಎಷ್ಟು ಸಾರಿ ನಾನು ನಿನಗೆ ಹೇಳಿಲ್ಲಾ ?

ಚೆನ್ನ—ತಪ್ಪಾಯ್ತು, ಕ್ಷಮಿಸಿ ಬುದ್ಧಿಯೋರಾ.

ಒಂದನೆಯ ಪ್ರಮುಖ—ನಿಮ್ಮ ಚೆನ್ನಾ ಹೇಳೋದ್ರಲ್ಲಿ ಸತ್ಯ ಇದೆ, ಗೌಡರೇ, ದೇಶಾನ ಆಳುವ ನಾಯಕ, ಜನರ ಕಷ್ಟಸುಖಗಳನ್ನು ನೋಡದೆ, ಈ ರೀತಿ ತೊಂದರೆ ಕೊಟ್ಟರೆ ಜನರ ಪಾಡೇನು ? ಪೂರ್ವದಲ್ಲಿ ರಾಜ ಮಹಾರಾಜರು, ಜನರ ಕಲ್ಯಾಣಕ್ಕಾಗಿ ಕೆರೆ ಕಟ್ಟೆಗಳನ್ನು ಕಟ್ಟಿಸಿ, ಜನರ ಸುಖವೇ ತಮ್ಮ ಸುಖವೆಂದು ಆಳುತ್ತಿದ್ದರು.

ಎರಡನೆಯ ಪ್ರಮುಖ—ಈ ನಾಯಕ ಒಂದು ಕೆರೇನ ದುರಸ್ಥಿ ಮಾಡ್ಸವ್ನಾ? ಒಂದು ಬಾವಿ ತೋಡ್ಸವ್ನಾ? ಒಂದು ಕಾಲ್ದಾರಿ ಮಾಡ್ಸವ್ನಾ? ಏನೂ ಇಲ್ಲ. ಕಂದಾಯ, ಕಂದಾಯ ಅಂತ ರೈತರ ರಕ್ತಾನ ಹೀರ್‍ತಾನ!

ಒಂದನೆಯ ಪ್ರಮುಖ—ನೀವೇ ನೋಡ್ತಿದೀರಲ್ಲಾ ಗೌಡರೆ, ಮೂರು ದಿನಗಳಿಂದ! ಕೆರೆ ತೂಬು ಮುಚ್ಚಿಸಿ, ನೀರನ್ನು ಬಿಡದಹಾಗೆ ಮಾಡಿದ್ದಾರೆ. ಇದಕ್ಕೆ ಒಂದು ದಾರಿ ಮಾಡಿ ನಮ್ಮನ್ನು ಕಷ್ಟದಿಂದ ಪಾರು ಮಾಡಿ.

ರಣಭೈರೇಗೌಡ—ಬಂಧುಗಳೇ, ನೀವು ಹೇಳುವುದೆಲ್ಲಾ ನಿಜವೆ. ಶಲ್ವ ನಾಯಕರು ಮೊದಲು ಹೀಗಿರಲಿಲ್ಲ, ಈಗೀಗ ಅವರು ಹೀಗೇಕೆ ಆಡುತ್ತಿದ್ದಾರೆ ಎಂಬುದನ್ನು ತಿಳಿಯಬೇಕು. ಒಂದು ವೇಳೆ ಅವರಿಗೆ ಯಾರ ಮೇಲಾದರೂ ದ್ವೇಷ ಇದ್ದರೆ, ಅದಕ್ಕೆ ಪರಿಹಾರ ಹುಡುಕೋಣ:

ಚೆನ್ನ—ಅಗೋ, ಅಲ್ಲಿ ನೋಡಿ ಬುದ್ಧಿ! ಶಲ್ವನಾಯಕರ ಕಡೆಯ ಮಂತ್ರಿ. ಸೈನಿಕರ ಬರ್‍ತಿವಾರೆ!

ಭದ್ರೇಗೌಡ—ಮತ್ತೇನೋ ಕೀಟಲೆ ಮಾಡೋಕೆ ಬರ್‍ತಾ ಇರೋ ಹಾಗೆ ಕಾಣುತ್ತೆ.

(ಮಂತ್ರಿ ಮತ್ತು ಅವರ ಪರಿವಾರ ಪ್ರವೇಶ)

ಮಂತ್ರಿ—ಸುತ್ತ-ಮುತ್ತಲ ಗ್ರಾಮಗಳ ಹಿರಿಯರೆಲ್ಲಾ ಇಲ್ಲಿ ಸೇರಿರೋದು ಸಂತೋಷದ ವಿಷಯ. ನಮ್ಮ ನಾಯಕರ ಕಡೆಯಿಂದ ನಿಮಗೆ ಒಂದು ಒಳ್ಳೆಯ ಸುದ್ದಿ ತಂದಿರುವೆ. ಮುಚ್ಚಿಸಿದ್ದ ಕೆರೆಯ ತೂಬನ್ನು ತೆರೆಸಿದ್ದಾರೆ. ಕಂದಾಯಗಳ ದರದಲ್ಲಿ ಅರ್ಧ ಕಡಿಮೆ ಮಾಡಿದ್ದಾರೆ. ಕ್ಷಾಮ ಪೀಡಿತ ಗ್ರಾಮಗಳಿಗೆ ನೆರವು ನೀಡಲು ನಿರ್ಧರಿಸಿದ್ದಾರೆ.

ರಣಭೈರೇಗೌಡ—ಮಂತ್ರಿಗಳೇ ನಿಮ್ಮ ನಾಯಕರು ಜನರು ಕಷ್ಟ-ಸುಖಗಳನ್ನು ಅರಿತು ಕಲ್ಯಾಣ ಕಾರ್ಯಗಳನ್ನು ಮಾಡಲು ನಿರ್ಧರಿಸಿದ್ದು ಒಳ್ಳೆಯದೇ ಆಯಿತು. ನೆನ್ನೆಯ ಮಲ್ಲಯುದ್ಧದಲ್ಲಿ ನಿಮ್ಮವರು ಪರಾಭವಗೊಂಡ ಕಾರಣ, ನಮ್ಮ ಗ್ರಾಮದ ಮೇಲೆ ದ್ವೇಷಗೊಂಡರೇನೋ ಎಂಬ ಶಂಕೆ ತಲೆದೋರಿತು.

ಮಂತ್ರಿ—ಶಿವಾ, ಶಿವಾ, ಅವರು ಅಂಥವರಲ್ಲ. ಅವರನ್ನು ನೀವು ಅಪಾರ್ಥ ಮಾಡಿಕೊಂಡಿದ್ದೀರಿ. ಅವರಿಗೆ ನಿಮ್ಮ ಬಗ್ಗೆ ವಿಶ್ವಾಸ–ಗೌರವಗಳಿವೆ. ಆದ್ದರಿಂದಲೇ ಅವರು ನಿಮ್ಮಲ್ಲಿ ಸಂಬಂಧ ಬೆಳೆಸಲು ಇಚ್ಛಿಸಿದ್ದಾರೆ.

ರಣಭೈರೇಗೌಡ--ಪ್ರಜೆಗಳ ಸುಖಕ್ಕಾಗಿ ಅವರಿಗೆ ಸ್ನೇಹ ಹಸ್ತ ನೀಡಲು ನಾವು ಸದಾ ಸಿದ್ಧ.

ಮಂತ್ರಿ—ಬರೀ ಸ್ನೇಹ ಹಸ್ತವನ್ನಲ್ಲ ಅವರು ನಿಮ್ಮಿಂದ ಅಪೇಕ್ಷಿಸುವುದು ?

ರಣಭೈರೇಗೌಡ—ಮತ್ತೇನನ್ನು ಅಪೇಕ್ಷಿಸುವರು ?

ಮಂತ್ರಿ—ನೀವು ಶ್ರೇಷ್ಠವಂಶದವರೆಂದೂ, ಸಾತ್ವಿಕರೆಂದೂ ನಿಮ್ಮ ಖ್ಯಾತಿ ಈ ಸುತ್ತಮುತ್ತಲೆಲ್ಲಾ ಹಬ್ಬಿದೆ. ರಕ್ತ ಸಂಬಂಧವನ್ನು ಬೆಳೆಸಲು ನೀವು ಅರ್ಹರೆಂದು ನಾಯಕರ ಅಭಿಪ್ರಾಯ.

ವೀರಣ್ಣ—ಏನು ? ನಮಗೂ ಶಲ್ವನಾಯಕರಿಗೂ ರಕ್ತ ಸಂಬಂಧವೇ ? ಮಂತ್ರಿಗಳೇ ಇದರ ಗೂಢಾರ್ಥವೇನೆಂಬುದನ್ನು ನೇರವಾಗಿ ತಿಳಿಸಿ.

(ಮಂತ್ರಿ ತಲೆ ಕೆರೆದುಕೊಳ್ಳುತ್ತ ಸೈನಿಕರ ಕಡೆ ನೋಡುವನು)

ಒಂದನೇ ಸೈನಿಕ—ಬಚ್ಚಿಟ್ಟು ಪ್ರಯೋಜನವೇನು ? ಅದನ್ನು ನಾನು ಹೇಳುತ್ತೇನೆ. ನಮ್ಮ ಪ್ರಭುಗಳು, ನಿಮ್ಮ ಕುವರಿ ದೊಡ್ಡಾಂಬೆಯನ್ನು ವರಿಸಲು ಇಚ್ಛಿಸುತ್ತಾರೆ.

ಭೈರೇಗೌಡ—ಏನು ಬೊಗಳಿದೆ ನಾಯಿ ! ರಣಭೈರೇಗೌಡರ ಹೆಣ್ಣನ್ನು ಕೇಳುವಷ್ಟು ಸೊಕ್ಕೇ ನಿಮ್ಮ ನಾಯಕರಿಗೆ !

ರಣಭೈರೇಗೌಡ—ಶಾಂತನಾಗು ತಮ್ಮ. ಅವರು ಹೇಳುವುದನ್ನೆಲ್ಲಾ ಹೇಳಲಿ. ನಂತರ ಮಿಕ್ಕ ವಿಚಾರ.

ವೀರಣ್ಣ—ಅಣ್ಣಾ, ನಿಮ್ಮ ಶಾಂತಿ ಜಪವೇ, ಈ ಕುನ್ನಿಗಳು ಇಷ್ಟೊಂದು ಮುಖಂಡರ ಮುಂದೆ ನಮ್ಮನ್ನು ಅವಮಾನಪಡಿಸಲು ಕಾರಣ.

ಒಂದನೇ ಸೈನಿಕ—ಪ್ರಭುಗಳ ಸಂದೇಶವನ್ನು ತಿಳಿಸಿದ್ದೇವೆ. ಅವರನ್ನು ತಿರಸ್ಕಾರ ದೃಷ್ಟಿಯಿಂದ ಕಂಡರೆ ಪರಿಸ್ಥಿತಿ ವಿಕೋಪಕ್ಕೆ ತಿರುಗುವುದು. ಇದನ್ನರಿತು ವರ್ತಿಸಿ.

ಎರಡನೇ ಸೈನಿಕ—ನಮ್ಮ ನಾಯಕರನ್ನು ಧಿಕ್ಕರಿಸುವ ಗ್ರಾಮಗಳ ಗತಿ ಏನಾಗುತ್ತದೆಂಬುದನ್ನು ನೀವೇ ಯೋಚಿಸಿ.

ಒಂದನೇ ಸೈನಿಕ—ಮರ್ಯಾದೆಯಿಂದ ನಿಮ್ಮ ಮಗಳನ್ನು ಕೊಟ್ಟರೇ ಸರಿ. ಇಲ್ಲದಿದ್ದರೆ ನಿಮ್ಮ ಊರು ರಣರಂಗವಾಗಿ, ಹೆಣಗಳ ರಾಶಿ ಬೀಳುವುದು ಖಂಡಿತ. ಹೇಗಾದರೂ ಮಾಡಿ ದೊಡ್ಡಾಂಬೆಯನ್ನು ಹೊತ್ತು ಕೊಂಡು ಹೋಗುವೆವು.

ಒಂದನೆಯ ಪ್ರಮುಖ—ನೋಡಿದಿರಾ ಇವರ ಸೊಕ್ಕನ್ನು, ಅನ್ಯಾಯ, ಅಧರ್ಮಗಳನ್ನು !

ಎರಡನೆಯ ಪ್ರಮುಖ—ನಮ್ಮ ದೊಡ್ಡಾಂಬೆಯಂತ ಸಾಧ್ವೀಮಣಿ ಪರಮ ಭಕ್ತಳನ್ನು ಬಲಾತ್ಕಾರವಾಗಿ ಅಪೇಕ್ಷಿಸಿದವರ ವಂಶ ಸರ್ವನಾಶವಾಗುವುದು ಖಂಡಿತ.

(ಪ್ರಮುಖರು, ವೀರಣ್ಣ, ಭದ್ರೇಗೌಡರು, ಸೈನಿಕರನ್ನು ಅಟ್ಟಿಸಿಕೊಂಡು ಹೋಗಿ ಒದ್ದು ಓಡಿಸುತ್ತಾರೆ.)

ಮಂತ್ರಿ—ರಣಭೈರೇಗೌಡರೇ, ಆ ಶಲ್ವನಾಯಕ ಬಹಳ ದುಷ್ಟ. ಇಂದೋ, ನಾಳೆಯೋ, ತನ್ನ ಇಡೀ ಸೈನ್ಯವನ್ನು ತಂದು ನಿಮಗೆ ತೊಂದರೆ ಕೊಡಬಹುದು. ನೀವು ಜಾಗೃತರಾಗಿರಿ. ಭೈರವೇಶ್ವರ ಖಂಡಿತ ನಿಮ್ಮನ್ನು ಕಾಪಾಡುತ್ತಾನೆ ನಾನು ಇನ್ನು ಹೊರಡುವೆ. (ಹೋಗುವನು)

ರಣಭೈರೇಗೌಡರು—(ನಿಟ್ಟುಸಿರನ್ನು ಬಿಡುತ್ತಾ) ಆಯಿತು. ಇಂದಿಗೆ ಈ ಊರಿನ ಋಣ ತೀರಿತೆಂದು ಕಾಣುತ್ತದೆ. ಹೇ, ಜಗನ್ಮಾತೆ ಕೆಂಪಾಂಬೆ, ನಿನ್ನ ಸಂಕಲ್ಪವಿದ್ದಂತೆ ಆಗಲಿ. ಸೇನೆಯಿಲ್ಲದ ನಾವು, ಒಂದು ವೇಳೆ ನಾಯಕ ಸೈನ್ಯ ಸಮೇತ ಬಂದರೆ, ಆವನನ್ನು ಎದುರಿಸುವುದು ಹೇಗೆ ? ಅನ್ಯಾಯವಾಗಿ ಅಮಾಯಕರಾದ ರೈತ ಬಾಂಧವರನ್ನು ಬಲಿ ಕೊಡಬೇಕಾಗುತ್ತದಲ್ಲ ! ಇದು ಸಾಧುವಲ್ಲ, ಈ ಊರನ್ನು ಬಿಟ್ಟು ನಾವು ಹೊರಡುವುದೇ ಲೇಸು.

ವೀರಣ್ಣ—ಅಣ್ಣಾ, ನೀವು ಅನುಮತಿ ನೀಡಿದರೆ, ಇಂದೇ ಸುತ್ತಮುತ್ತಲ ಗ್ರಾಮಗಳ ಯುವಕರನ್ನು ಸೇರಿಸಿ, ಒಂದು ಯುವ ಸೈನ್ಯವನ್ನು ಕಟ್ಟಿ, ಆ ನಾಯಕನನ್ನು ಪದಚ್ಯುತಗೊಳಿಸುವೆನು !

ರಣಭೈರೇಗೌಡ—ಬೇಡ, ತಮ್ಮ ಯುದ್ಧಕಾಲೇ ಶಸ್ತ್ರಾಭ್ಯಾಸದಂತೆ ನಮ್ಮ ಕೆಲಸವಾಗುವುದು. ಯುದ್ಧವನ್ನರಿಯದ ಮುಗ್ಧ ರೈತ ಯುವಕರನ್ನು

ಅಪಾಯಕ್ಕೆ ಗುರಿ ಮಾಡುವುದು ಧರ್ಮವಲ್ಲ. ಗ್ರಾಮಸ್ಥರಿಗೆ, ನಮ್ಮಿಂದ ಈ ಕಷ್ಟಗಳು ಪ್ರಾಪ್ತವಾದುವು. ನಾವು ಈ ಸ್ಥಳವನ್ನು ಬಿಟ್ಟು ನಮ್ಮ ಪೂರ್ವಿಕರ ಕನ್ನಡ ನಾಡಿಗೆ ತೆರಳೋಣ. ನಮ್ಮ ಎಳು ಬಂಡಿಗಳನ್ನು ಸರಿಪಡಿಸಿ, ಈಗಲೇ ಹೊರಡಲು ಸಿದ್ಧತೆ ನಡೆಯಲಿ, ಬೇಗ ಹೊರಡೋಣ.

ಒಂದನೆಯ ಪ್ರಮುಖ—ಗೌಡರೇ, ನೀವು ಮತ್ತು ನಿಮ್ಮ ವಂಶಜರು ತಲ ತಲಾಂತರಗಳಿಂದ ನಮ್ಮ ಗ್ರಾಮಗಳನ್ನು ಧರ್ಮದಿಂದ ಕಾಪಾಡಿ ಕೊಂಡು ಬಂದಿರುವಿರಿ. ನೀವೀಗ ಹೊರಟರೆ, ನಾವು ಅನಾಥರಾಗು ವೆವು. ನಮ್ಮನ್ನು ಕೇಳುವವರೇ ಇಲ್ಲದಾಗುತ್ತೆ.

ರಣಭೈರೇಗೌಡ—ಆಗುವುದೆಲ್ಲಾ ಒಳ್ಳೇದಕ್ಕೆ ಬಂಧುಗಳೇ. ನಾವು ಇದ್ದಷ್ಟೂ ನಿಮಗೆ ತೊಂದರೆ ಹೆಚ್ಚು.

(ಚೆನ್ನನನ್ನು ಕುರಿತು)
ಚೆನ್ನ

ಚೆನ್ನ—ಬುದ್ಧೀ

ರಣಭೈರೇಗೌಡ—ನಿನಗೆ ಇರಲು ಆಸ್ತಿ, ಪಾಸ್ತಿ, ಮನೆಗಳನ್ನು ಕೊಡುವೆನು. ನೀನು ಇಲ್ಲಿಯೇ ಇದ್ದು ಎಚ್ಚರಿಕೆಯಿಂದ ಬಾಳನ್ನು ಸಾಗಿಸು.

ಚೆನ್ನ—(ಬಿಕ್ಕಿ, ಬಿಕ್ಕಿ ಅಳುತ್ತಾ) ನನ್ನೊಡೆಯಾ, ತಂದೆ–ತಾಯಿ ಇಲ್ಲದ ನನ್ನನ್ನು ಸಾಕಿ ಸಲಹಿದಿರಿ, ಮದ್ವೆ ಮಾಡಿದ್ರಿ. ಸ್ವಂತ ಮಗನಿಗಿಂತಾ ಚೆನ್ನಾಗಿ ನೋಡಿಕೊಂಡ್ರಿ, ನೀವು ನನ್ನ ಬಿಟ್ಟು ಹೋದ್ರೆ, ನಾ ಎಂಗೆ ಪ್ರಾಣ ಇಟ್ಕೊಂಡು ಬದುಕಲಿ.

ರಣಭೈರೇಗೌಡ—ನೋಡು ಚೆನ್ನ ನೀನು ಇಲ್ಲಿದ್ದು, ಇಲ್ಲಿನ ವಿದ್ಯಮಾನ ಗಳೆನ್ನೆಲ್ಲಾ ನಿಗಾ ಇಟ್ಟು ನೋಡಿ ಹುಷಾರಾಗಿ ಬಾಳು. ಒಂದು ವೇಳೆ ಇಲ್ಲಿರಲು ನಿನಗೆ ಇಷ್ಟವಿಲ್ಲದೇ ಇದ್ದರೆ ನಾವಿರುವ ಕಡೆಗೆ ಉಪಾಯ ದಿಂದ ಬಂದು ಬಿಡು.

(ಎಲ್ಲರೂ ಹೃದಯ ಭಾರದಿಂದ ನಿರ್ಗಮಿಸುವರು)

ದೃಶ್ಯ–೮

ಅರಣ್ಯ ದೃಶ್ಯ

(ಚೆನ್ನ–ಚೆನ್ನಿ ಪ್ರವೇಶಿಸುತ್ತಾರೆ. ಅವರ ಮುಖಗಳು ಗಾಬರಿಯಿಂದ ತುಂಬಿವೆ. ಚೆನ್ನನ ಹೆಗಲ ಮೇಲೆ ಬುತ್ತಿ ತಗಲಿಸಿದ ಒಂದು ಕೋಲು. ಅದನ್ನು ಹಿಡಿದು, ಇನ್ನೊಂದು ಕೈಲಿ ಕಳ್ಳು ತುಂಬಿದ ಪಾತ್ರೆ.)

ಚೆನ್ನಿ—ಬೇಗ, ಬೇಗ ನಡೀರಿ ಅಂದ್ರೆ. ಈ ಪಾಟಿ ಕುಡೀತಾ, ತೂರಾಡ್ತಾ ನಡೀತಿದೀರಲ್ರೀ. ಇನ್ನು ನಾವು ನಮ್ಮ ದಣಿ ಗೌಡ್ರನ್ನು ಸೇರಿದ ಹಾಗೆ! ದುಷ್ಟರ ಕೈಗೆ ಸಿಕ್ಕಿಕೊಳ್ಳೋದು ದಿಟ.

ಚೆನ್ನ—(ಸ್ವಲ್ಪ ಕುಡಿದು)–

ನಮ್ಮ ಊರ್ನೆಲ್ಲಾ ಆ ನಾಯಕ ಧ್ವಂಸ ಮಾಡ್ದ. ದೇವರಂಗೆ ಇದ್ದ ನಮ್ಮ ದಣಿಯೋರು ಪರಸ್ಥಳಕ್ಕೆ ಹೊರ್ಟುಹೋದ್ರು. ಚೆನ್ನೀ, ಆ ಪರಮಾತ್ಮ ಈ ಕಳ್ಳುನಾಗೆ ಅದೇನು ಮಡಗವ್ನೋ? ಆವನಿಗೇ ಗೊತ್ತು.

ಚೆನ್ನಿ—ಅಲ್ರೀ, ಆ ನಾಯಕನ ಕಡೇರು, ಊರಿಗೆ ಬೆಂಕಿ ಹಚ್ತಾ ಇದ್ರೆ, ಎದರಿಕೊಂಡು, ಪ್ರಾಣ ಉಳಿಸುಕೊಳ್ಳೋಕೆ ಓಡಿ ಬಂದೋರು ನೀವು ಒಬ್ಬ ಗಂಡಸೇನ್ರೀ?

ಚೆನ್ನ—ಚೆನ್ನೀ, ನಿನ್ನ ಮ್ಯಾಲಿನ ಪಿರೀತಿಗೆ ನನ್ನ ಪ್ರಾಣ ಉಳ್ಸಿಕೊಂಡೆ ಕಣೇ, ಆ ದುಷ್ಟರು ನಿನ್ನ ನೋಡಿದ್ರೆ, ಈ ನನ್ನ ಚಿನ್ನಾಗೆ ಏನು ಮಾಡ್ತಿದ್ರೋ ಏನೋ? ಅದೆಲ್ಲಾ ತಿಳುಕೊಂಡ್ರೆ, ಮೈ ನಡುಕ ಕಣೇ? ಅದಕ್ಕೆ ಈ ಕಳ್ಳು.

ಚೆನ್ನಿ—ನಿನ್ನ ಪಿರೀತಿ ಸಾಕ್ ಮಾಡು. ಬ್ಯಾಗ, ಬ್ಯಾಗ, ನಡಿ, ಆ ದುಷ್ಟರು ಬರೋಕೆ ಮುಂಚೇನೆ, ದಣಿಯೋರ್ಗೆ ಸಮಚಾರ ತಿಳಿಸೋಣ. ನಾವು ಕಷ್ಟಪಟ್ಟಿದ್ದೂ ಸಾರ್ಥಕ ಆಗ್ತೈತೆ.

ಚೆನ್ನ—ನೋಡೇ (ದೊಣ್ಣೆ ಎತ್ತಿ) ಅವರೇನಾದ್ರು ಬಂದ್ರೆ, ಅವರನ್ನು ಇಲ್ಲಾ ಅನ್ನಿಸಿ ಬಿಡ್ತೀನಿ.

ಚೆನ್ನಿ—ಒಹೋ, ನಿಮ್ಮ ಪೌರುಷ ಜಾಸ್ತಿಯಾಯ್ತು! ಅರವತ್ ಜನಾನ ಕಡಿದ ವೀರನಾಂಗೆ ಮಾತಾಡ್ತಿ. ಅಯ್ಯೋ ಗ್ರಹಚಾರವೇ, ಅಲ್ಲಿ ನೋಡ್ರಿ. ಅವರು ಬಂದೇ ಬಿಟ್ರು.

(ಇಬ್ಬರು ಸೈನಿಕರು ಅವರ ಬಳಿ ಬರುವರು)

ಒಂದನೆಯ ಸೈನಿಕ—ಏ ನೀವು ರಣಭೈರೇಗೌಡರ ಕಡೆಯುವರು, ಅಲ್ಲವೇನು ?

ಎರಡನೆಯ ಸೈನಿಕ—ಹೇಳಿ, ನಿಜ ಹೇಳಿ, ರಣಭೈರೇಗೌಡರ ಕುಟುಂಬದವರು, ಯಾವ ಕಡೆ ಹೋದರು ಅಂತಾ ! ಇಲ್ಲದಿದ್ದರೆ—!

ಚೆನ್ನಿ—ಆದ್ಯಾವ ರಣಭೈರೇಗೌಡ್ರೋ, ನಮಗೇನು ಗೊತ್ತು ?

ಚೆನ್ನ—ಅವಳನ್ಯಾಕ ಕೇಳ್ತೀರ್ರೀ. ಕೇಳ್ರೀ ನಾನೇಳ್ತೀನಿ ರಹಸ್ಯಾನ.

ಒಂದನೆಯ ಸೈನಿಕ—(ಚೆನ್ನಿಯ ಕೈ ಹಿಡಿದು ಕೊಳ್ಳುವನು)

ಎರಡನೆಯ ಸೈನಿಕ—(ಚೆನ್ನನ ಕೈಹಿಡಿದು) ಹುಂ! ಹೇಳೋ, ಅದೇನ್ ರಹಸ್ಯ!

ಚೆನ್ನ—ನಾನಿವಳನ್ನ ಪಿರೀತಿಸಿಬಿಟ್ಟೆ. ಈ ವಿಚಾರ ಅವಳ ಮನೆಯೋರ್ಗೆ ಗೊತ್ತಾಯ್ತು. ಇವಳ ಅಣ್ಣಂದಿರ ಕೈಗೆ ಸಿಕ್ಕೊಂಡ್ರೆ ಪರಾಣ ಗೊಟಕ ಅನ್ನಿಸಿ ಬಿಡ್ತಾರೆ. ಅದಕ್ಕೆ, ಈ ಕಾಡು ಕಡೀಗೆ ಓಡಿಬಂದು, ಅವಿತುಕೊಳ್ಳೋಕೆ ಜಾಗಾ ನೋಡ್ತಿದೀವಿ.

ಚೆನ್ನಿ—ಬ್ಯಾಡಾ ಅಂದ್ರೆ, ಹೇಳ್ ಬಿಟ್ಟೆಯಾ. ನಮ್ಮ ಗುಟ್ಟನ್ನು ಇವರು ನಮ್ಮೋರ್ಗೆ ಹೇಳ್ಬಿಟ್ರೆ, ನಮ್ಗತಿ ?

ಒಂದನೆಯ ಸೈನಿಕ—ಸುಮ್ಕೆ ಇರಪ್ಪ. ನಿಮ್ಮೋರು ಯಾರೋ ನಮಗೇನು ಗೊತ್ತು ? ನಮ್ಮ ಗ್ರಹಚಾರ ನಮಗೆ, ಆ ಹಾಳು ರಣಭೈರೇಗೌಡರು ಯಾವ ಕಡೆ ಹೋದರೋ ? ಅವರನ್ನ ಹುಡುಕದೇ ಇದ್ರೆ, ನಮ್ಮ ಚರ್ಮ ಸುಲೀತಾರೆ ಆ ನಮ್ಮ ನಾಯಕರು !

ಚೆನ್ನ—ಓ ! ನೀವು ನಮ್ಮಂಗೆ ಗಾಚಾರಕ್ಕೆ ಸಿಕ್ಕಿದ್ದೋರ ? ಅದಕ್ಕೆ ನನ್ನತಾವ ಔಸದಿ ಐತೆ ಬೇಕಾದ್ರೆ ಕೊಡ್ತೀನಿ, ತಗೊಳ್ಳಿ (ಕಳ್ಳು ಪಾತ್ರೆ ಕೊಡುವನು)

ಎರಡನೆಯ ಸೈನಿಕ—(ಅದರ ವಾಸನೆ ಹಿಡಿದು) ಓ ! ರಾಮರಸ ಕಣೋ !

(ತಾನು ಅರ್ಧ ಕುಡಿದು, ಮಿಕ್ಕಿದ್ದನ್ನು ಇನ್ನೊಬ್ಬನಿಗೆ ಕೊಡುವನು)

ಚೆನ್ನ—ಕುಡೀರಿ, ಚೆಂದಾಗಿ ಕುಡೀರಿ. ಒಂದೇಸರ್ತಿ ಕೈಲಾಸಕ್ಕೆ ಹೋಗ್ತೀರಿ.

(ಸೈನಿಕರಿಬ್ಬರೂ ಕುಡಿದು, ಮತ್ತೇರಿ ಮೈಮರೆತಿರಲು, ಚೆನ್ನ, ಚೆನ್ನಿ ಅವರ ಕೈಕಾಲುಗಳನ್ನು ಬಿಗಿಯಾಗಿ ಕಟ್ಟಿ, ಪಕ್ಕಕ್ಕೆ ಎಳೆಯುವರು)

ಚೆನ್ನಿ—ಸದ್ಯ, ಪೀಡೆಗಳು ತೊಲಗಿದವು. ಅವರು ಎಚ್ಚರಗೊಳ್ಳೋಕೆ ಮುಂಚೆ ದಣಿಯೋರ್‍ನ ಸೇರ್‍ಕೊಳ್ಳೋಣ, ನಡಿ.

(ಹೋಗುವರು)

——

ದೃಶ್ಯ–೯

ಸ್ಥಳ : ಕ್ಷೀರ (ಪಾಲಾರ್)

ನದೀತೀರ

(ರಣಭೈರೇಗೌಡರು, ಅವರ ಕುಟುಂಬದವರು ನದಿ ದಡದಲ್ಲಿ ಬೀಡು ಬಿಟ್ಟಿರುತ್ತಾರೆ.)

ರಣಭೈರೇಗೌಡ—ನನ್ನ ಪ್ರಿಯ ಸೋದರರೇ, ಮುದ್ದಿನ ಮಕ್ಕಳೇ, ನಾವು ಇಲ್ಲಿಯವರೆಗೂ ಬಾಳಿ, ಬೆಳೆದ ಊರನ್ನು ಬಿಟ್ಟು ಬಂದೆವು. ಪ್ರಯಾಣ ಇದುವರಗೆ ಸುಗಮವಾಗಿ ಸಾಗಿತು. ಆದರೆ, ಇಲ್ಲಿ ಪಾಲಾರ್ ನದೀ ಮಾತೆ, ನಮ್ಮ ಮೇಲೆ ಮುನಿದು, ಭೋರ್ಗರೆದು ಹರಿಯುತ್ತಿರುವಂತೆ ಕಾಣುತ್ತಿದೆ. ನದಿ ದಾಟಲು ತೆಪ್ಪವನ್ನು ತಯಾರಿಸಬೇಕು. ಅದಕ್ಕೆ ಅವಧಿ ಎಲ್ಲಿದೆ ? ಆದರೂ ದೇವರಿದ್ದಾನೆ. ತೆಪ್ಪ ಕಟ್ಟಲು ಷುರು ಮಾಡಿ.

ವೀರಣ್ಣ—ಅಣ್ಣಾಜಿ, ನಾವು ಹೇಗೂ ಬಂದು ಬಿಟ್ಟಿದ್ದೇವೆ. ಒಂದು ವೇಳೆ ಆ ಶಲ್ವನಾಯಕ ನಮ್ಮ ಮೇಲೆ ಎರಗಿದರೆ, ನಮ್ಮ ಪ್ರಾಣಗಳನ್ನಾದರೂ ಅರ್ಪಿಸುತ್ತೇವೆಯೇ ಹೊರತು ತಲೆ ಬಾಗುವುದಿಲ್ಲ.

ಭದ್ರೇಗೌಡ—ಅದೋ ! ಯಾರೋ ಈ ಕಡೆಯೇ ಬರುವಂತಿದೆ. ಆಯುಧಗಳನ್ನು ಸಿದ್ಧಪಡಿಸಿ, ಶಸ್ತ್ರಸಜ್ಜಿತರಾಗಿ.

ವೀರಣ್ಣಗೌಡ—ಅಲ್ಲಿ ಬರುತ್ತಿರುವರು ನಮ್ಮ ಚೆನ್ನ–ಚೆನ್ನಿಯರಂತೆ ಕಾಣುತ್ತಿದ್ದಾರೆ.

(ಅದೇ ಸಮಯಕ್ಕೆ ಚೆನ್ನ–ಚೆನ್ನಿ ಹತ್ತಿರ ಬರುವರು)

ರಣಭೈರೇಗೌಡ—ಏನಾಯಿತು, ಚೆನ್ನ ? ಊರಿನಲ್ಲೇನಾದರೂ ಅನಾಹುತ ನಡೆಯಿತೇ ?

ಚೆನ್ನ—ನನ್ನ ದಣಿಯೋರೇ, ನಾ ಏನ್ ಹೇಳ್ಲಿ ? ರಾತ್ರೋ–ರಾತ್ರಿ ಅವರು ನಮ್ಮ ಹಳ್ಳೀಮ್ಯಾಲ್ ನುಗ್ಗಿ, ನಿಮಗಾಗಿ ಊರೆಲ್ಲಾ ಹುಡ್ಕಾಡಿದರು.

ಚೆನ್ನಿ—ದಣಿ, ಊರಾಗ ಯಾರು ನಿಮ್ಮ ಯಿಚಾರಾನ ಹೇಳದಿದ್ದಕ್ಕೆ ಅವರ ಮನೆ-ಮಠಗಳಿಗೆ ಬೆಂಕಿ ಹಚ್ಚಿದರು. ಸಿಕ್ಕಿದ್ದನ್ನು ಲೂಟಿ ಮಾಡಿದರು. ನಾನು ಚೆನ್ನ ಕಾಲಿಗೆ ಬುದ್ಧಿ ಹೇಳಿ ತಪ್ಪಿಸಿಕೊಂಡು, ಓಡಿ ಬಂದೆವು. ಇಬ್ಬರು ಸಿಪಾಯಿಗಳು ನಮ್ಮ ಬೆನ್ನತ್ತಿದರು. ಅವರಿಗೆ ಕಳ್ಳು ಕುಡ್ಸಿ, ಕೈಕಾಲು ಕಟ್ಟಿಹಾಕಿ, ಓಡಿ ಬಂದೆವು ಬುದ್ಧಿ!

ರಣಭೈರೇಗೌಡ—ವೀರಣ್ಣ, ನಮಗಿನ್ನು ಹೆಚ್ಚು ಸಮಯವಿಲ್ಲ. ಆ ದುಷ್ಟರು ಬರುತ್ತಿರುವ ಸುಳಿವೇನಾದರೂ ಕಾಣುತ್ತೇನೋ ನೋಡು.

ವೀರಣ್ಣ—(ಹೋಗುವನು, ಇವರು ಬಂದ ದಾರಿ ಕಡೆ ನೋಡುವನು)

ದೊಡ್ಡಾಂಬೆ—ನನ್ನಿಂದ ನಮ್ಮವರಿಗೆ ಎಷ್ಟು ಕಷ್ಟಗಳುಂಟಾದವು? ಹೇ, ಜಗದಾಂಬಾ! ಸಕಲ ಪ್ರಾಣಿಗಳಿಗೂ ಆಧಾರ ಭೂತಳೆ! ಅಂದು ಶ್ರೀ ಕೃಷ್ಣ ಜನಿಸಿದಾಗ, ಆ ಪರಮಾತ್ಮನನ್ನು ಯಶೋಧೆ ಬಳಿ ಕಳುಹಿಸಲು, ವಸುದೇವನಿಗೆ ದಾರಿ ಬಿಟ್ಟವಳು ನೀನೆ ಅಲ್ಲವೆ ಮಾತೆ! ಸಗರ ಚಕ್ರವರ್ತಿಯ ಮಕ್ಕಳ ಮುಕ್ತಿಗಾಗಿ, ಶಿವನ ಜಟೆಯಿಂದ ಇಳೆ ಗಿಳಿದು, ಭರತ ಖಂಡವನ್ನು ಪ್ರವಿತ್ರಗೊಳಿಸಿದ ದೇವಿಯಲ್ಲವೆ ನೀನು? ಹಗಲಿರುಳೂ, ನಿನ್ನ ಧ್ಯಾನದಲ್ಲಿರುವ ಈ ನಿನ್ನ ಭಕ್ತರಿಗೆ ದಾರಿ ಏಕೆ ಬಿಡುತ್ತಿಲ್ಲ, ತಾಯಿ? ನಮ್ಮ ಮೊರೆಯನ್ನು ಆಲಿಸು ತಾಯಿ. ನಾನು ನಿಜವಾಗಿಯೂ ಪವಿತ್ರಳಾಗಿದ್ದರೆ ನಮಗೆ ಹಾದಿಯನ್ನು ಮಾಡಿಕೊಡು ಮಾತೆ, ಇದೋ, ಭಕ್ತಿ, ವಿನಮ್ರತೆಗಳಿಂದ ನನ್ನೀ ವಜ್ರದೋಲೆ ಯನ್ನು ನಿನಗರ್ಪಿಸುವೆನು! ಸುಪ್ರೀತಳಾಗು ತಾಯೆ!

ವೀರಣ್ಣಗೌಡ—ಅಣ್ಣಾಜಿ, ಅಣ್ಣಾಜಿ, ಆ ದುಷ್ಟ ಶಲ್ವನಾಯಕನ ಸೇನೆ ಈ ಕಡೆಯೇ ಬರುತ್ತಿದೆ!

ಭದ್ರೇಗೌಡ—ಅಣ್ಣಾ, ಈ ಕಡೆ ನೋಡಿ, ದೊಡ್ಡಾಂಬೆಯ ಭಕ್ತಿ, ಮೊರೆ ಗಳನ್ನು ಮೆಚ್ಚಿ, ನದಿದೇವತೆ ದಾರಿ ಬಿಟ್ಟಿದ್ದಾಳೆ. ನಮ್ಮ ದೊಡ್ಡಾಂಬೆ ನಿರಾಯಾಸವಾಗಿ ನದಿಯನ್ನು ದಾಟಿ ಆಚೆ ದಡಕ್ಕೆ ಹೋಗುತ್ತಿದ್ದಾಳೆ.

ರಣಭೈರೇಗೌಡ—(ಅಚ್ಚರಿಯಿಂದ) ನಮ್ಮ ಕುಲದೇವತೆಯ ವರದಿಂದ ಹುಟ್ಟಿದ ದೊಡ್ಡಾಂಬೆಯ ಮೊರೆಯನ್ನು ಪಾಲಾರ್ ಮಾತೆ ಕೇಳಿಸಿಕೊಂಡಳು ಹಾಗೂ ಅನುಗ್ರಹಿಸಿದಳು. ಬೇಗ ನಡೀರಿ, ಆಚೆ ದಡವನ್ನು

ಸೇರೋಣ. (ಅವರು ನದಿ ದಾಟುತ್ತಲೇ ಶಲ್ವನಾಯಕನ, ಕಡೆಯವರು ಬರುತ್ತಾರೆ.)

ಪೆರಿಮಲ್ಲ—(ಆ ಕಡೆ ದಡದಿಂದ) ಪ್ರಭು, ನಾವು ಇಷ್ಟು ದೂರ ಬಂದರೂ ಫಲಿಸಲಿಲ್ಲ.

ಮಂತ್ರಿ—ಪ್ರಭು, ನೀವು ಕಣ್ಣಾರೆ ನೋಡಿದಿರೇನು, ಇಲ್ಲಿ ನಡೆದಿರುವ ಅದ್ಭುತವನ್ನು ? ಪಾಲಾರ್ ನದಿ ಅವರಿಗೆ ದಾರಿ ಮಾಡಿಕೊಟ್ಟು, ಮತ್ತೆ ರಭಸದಿಂದ ಹರಿಯುತ್ತಿದ್ದಾಳೆ! ಅವರು ಪರಮ ಭಕ್ತರು ಪವಿತ್ರರು ಪರಾಕ್ರಮಿಗಳು.

ಶಲ್ವನಾಯಕ—ಎಂಥಹ ಅಧರ್ಮ ಕೆಲಸ ಮಾಡಿದೆ ? ಸಾಧ್ವೀಮಣಿ ದೊಡ್ಡಾಂಬೆಯ ಮೇಲಿನ ವ್ಯಾಮೋಹದಿಂದ. ಅಹಂಕಾರ, ಅಂಧತೆಗಳಿಂದ, ನನ್ನನ್ನು ಬಿಟ್ಟರೆ ಬೇರೊಬ್ಬರಿಲ್ಲವೆಂಬ ಮದದಿಂದ, ಮಾಡಬಾರದ ಅನ್ಯಾಯಗಳನ್ನು ಮಾಡಿದೆನಲ್ಲ ! ಧರ್ಮಾತ್ಮರಿಗೆ ಪ್ರಕೃತಿ, ಪ್ರಾಣಿ ಪಕ್ಷಿಗಳೆಲ್ಲರೂ ಸಹಕರಿಸುತ್ತವೆ. ನಾನೆಂತಹ ಕಪಟಿ, ನೀಚನೆಂದು ಇತಿಹಾಸ ಸಾರುವುದಿಲ್ಲವೆ ? ರಣಭೈರೇಗೌಡರೇ ನನ್ನನ್ನು ದಯವಿಟ್ಟು ಕ್ಷಮಿಸಿ. ಇಗೋ ನಿಮಗೆ ನನ್ನ ಪ್ರಣಾಮಗಳು.
(ಗೌಡರು ಹೋಗುತ್ತಿರುವ ಕಡೆ ನಮಸ್ಕರಿಸುವನು)

(ತೆರೆ ಬೀಳುವುದು)

———

ಭಾಗ-೨

(ತೆರೆಯ ಹಿಂಬದಿಯಿಂದ, ಪ್ರೇಕ್ಷಕರಿಗೆ ಕೇಳಿಸುವಂತೆ ಪ್ರಕಟಿಸುವುದು)

ನಂದಿ ಬೆಟ್ಟಗಳ ಸಾಲಿನ ಒಂದು ಪ್ರಶಸ್ತ ಪ್ರದೇಶ. ರಣಭೈರೇಗೌಡರ ಪರಿವಾರವು ಅಲ್ಲಿ ಬಂದು ನೆಲಸಿ, ಮನೆ ಮಠಗಳನ್ನು ಕಟ್ಟಿಕೊಂಡರು. ಧರ್ಮ ಸ್ವರೂಪಿಗಳೂ, ನ್ಯಾಯಪರರೂ ಆದ ರಣಭೈರೇಗೌಡರ ಪ್ರತಿಭೆ, ಖ್ಯಾತಿ ಸುತ್ತಮುತ್ತ ಗ್ರಾಮಗಳಿಗೆ, ಅಲ್ಲಿನ ಮುಖಂಡರಿಗೆ ಹರಡಿತು. ಅವರು ರಣಭೈರೇಗೌಡರನ್ನು ಆಗಾಗ ಭೇಟಿ ಮಾಡಿ ತಮ್ಮ ಕಷ್ಟ, ಸುಖಗಳನ್ನು ಹೇಳಿ ಕೊಳ್ಳುತ್ತಿದ್ದರು. ಸುತ್ತಮುತ್ತಲ ಪ್ರದೇಶಗಳನ್ನು ಅವರ ವಶಕ್ಕೆ ತೆಗೆದು ಕೊಂಡು, ಪುಂಡರೂ, ಕ್ರೂರಿಗಳೂ ಆದ ಶತೃಪಾಳೆಯಗಾರರಿಂದ ರಕ್ಷಿಸ ಬೇಕೆಂದು ಮೊರೆಯಿಟ್ಟರು. ಗಂಗರರಸರ ರಾಜರಕ್ತ ರಣಭೈರೇಗೌಡರ ನರನಾಡಿಗಳಲ್ಲಿ ಹರಿದು, ಅದಕ್ಕೆ ಸಮ್ಮತಿಯನ್ನಿತ್ತರು. ಸುತ್ತಮುತ್ತಲ ಪ್ರಾಂತ್ಯಕ್ಕೆ ಪ್ರಭುವಾಗಿ, "ಅವತಿನಾಡ ಪ್ರಭು"ವೆಂದು ನಾಮಾಂಕಿತಗೊಂಡು, ಇತಿಹಾಸದಲ್ಲಿ ಮೆರೆಯುತ್ತಾರೆ.

ದೃಶ್ಯ—೧೦

ಸ್ಥಳ : ಆವತಿ

(ರಣಭೈರೇಗೌಡರು ದೀರ್ಘಾಲೋಚನೆಯಿಂದ ಆಸನಾರೂಢರಾಗಿರುತ್ತಾರೆ

ರಣಭೈರೇಗೌಡ—ಅಮ್ಮಾ, ದೊಡ್ಡಾಂಬೆ, ಕುಡಿಯಲು ನೀರನ್ನು ತಾ ತಾಯಿ.

(ದೊಡ್ಡಾಂಬೆ ಹೊಳೆಯುವ ನೀರಿನ ಚೊಂಬನ್ನು ತಂದೆಗೆ ನೀಡುವಳು. ಗೌಡರು ನೀರನ್ನು ಕುಡಿದು ಚೊಂಬನ್ನು ಹಿಂತಿರುಗಿಸುವರು)

ದೊಡ್ಡಾಂಬೆ—ಅಪ್ಪಾಜಿ, ಇಷ್ಟು ಹೊತ್ತಾದರೂ ನೀವೇಕೆ ಮಲಗಲು ಹೋಗಲಿಲ್ಲ.

ರಣಭೈರೇಗೌಡ—ನಿದ್ದೆ ಎಲ್ಲಿಂದ ಬರಬೇಕು, ಮಗಳೆ! ನಂದಿಕ್ಷೇತ್ರ ಪಂಚ ಮಹಾ ಗಿರಿಗಳ ಸಮೀಪದ ಈ ಶ್ರೀ ತಿಮ್ಮರಾಯಸ್ವಾಮಿಯ ಗುಡ್ಡದ ಬಯಲಿನಲ್ಲಿ, ದಿಕ್ಕು ಕಾಣದೆ, ಮುಂದೇನು ಮಾಡಬೇಕೆಂದು ಅರಿಯದೆ ಯೋಚಿಸುತ್ತಿದ್ದೇನೆ.

ದೊಡ್ಡಾಂಬೆ—(ತೇವದ ಕಣ್ಣನ್ನು ಒರೆಸಿಕೊಂಡು)

ಇದೆಲ್ಲವೂ ನನ್ನಿಂದಲೇ ಅಲ್ಲವೆ, ಅಪ್ಪಾಜಿ ? ನನ್ನ ಸಲುವಾಗಿ, ನಮ್ಮ ಕುಟುಂಬದವರೆಲ್ಲಾ, ನಾನಾ ಕಷ್ಟಗಳನ್ನು ಪಡಬೇಕಾಯಿತು.

ರಣಭೈರೇಗೌಡ—ಹುಚ್ಚು ತಾಯಿ ! ನೀನು ಹುಟ್ಟಿದಾಗಲೆ, ನಿನ್ನಿಂದ ನಮ್ಮ ಕುಲ ಉದ್ಧಾರವೆಂದು, ದೈವಜ್ಞರು ನುಡಿದಿದ್ದಾರೆ. ನಾವಿಲ್ಲಿಗೆ ಬಂದದ್ದು ದೈವ ಪ್ರೇರಣೆಯಿಂದಲೇ ಹೊರತು, ನಿನ್ನಿಂದಲ್ಲ. ಇಲ್ಲಿ ನಮಗೆ ಒಳ್ಳೆಯ ಭವಿಷ್ಯ ಕಾದಿದೆ. ಅಂದು ನಿನ್ನ ನಿಷ್ಕಳಂಕ ಭಕ್ತಿಗೆ ಕ್ಷೀರ ನದಿ ನಮಗೆ ದಾರಿ ಮಾಡಿಕೊಟ್ಟಳು. ಆ ಅದ್ಭುತವೇ ಇದಕ್ಕೆ ಸಾಕ್ಷಿ.

ದೊಡ್ಡಾಂಬೆ—ಅಪ್ಪಾಜಿ, ಆ ಪವಿತ್ರ ಕ್ಷೀರಗಂಗೆ ಎಲ್ಲಿ ಹುಟ್ಟಿ ಹರಿಯುತ್ತಾಳೆ?

ರಣಭೈರೇಗೌಡ—ನಮಗೆ ಸಮೀಪದ ಪಂಚಮಹಾಗಿರಿಗಳಲ್ಲಿ ಅತಿಪುರಾಣ ಪ್ರಸಿದ್ಧವಾದ ನಂದಗಿರಿಯಲ್ಲಿ ಹುಟ್ಟಿ ಹರಿಯುತ್ತದೆ, ತಾಯೆ.

ದೊಡ್ಡಾಂಬೆ—ಕ್ಷೀರಗಂಗೆ ಉದ್ಭವಿಸುವ ಪವಿತ್ರ ಸ್ಥಳದಲ್ಲಿ ಪೂಜೆ ಸಲ್ಲಿಸಬೇಕೆಂಬ ಅರಿಕೆ ಹೊತ್ತಿದೇನೆ ಅಪ್ಪಾಜಿ.

ರಣಭೈರೇಗೌಡ—ನಿನ್ನ ಅರಿಕೆ ಮಹತ್ವದ ಅರಿಕೆ ಮಗಳೇ ! ಒಂದು ಶುಭ ದಿನ ಖಂಡಿತ ಅಲ್ಲಿಗೆ ಹೋಗೋಣ.

ದೊಡ್ಡಾಂಬೆ—ಅಪ್ಪಾಜಿ, ನಿನ್ನೆ ಬೆಳಗಿನ ಜಾವ ನಾನು ಒಂದು ಕನಸನ್ನು ಕಂಡೆ !

ರಣಭೈರೇಗೌಡ—ನಿನ್ನೆ ಶುಕ್ರವಾರವಲ್ಲವೆ, ತಾಯಿ. ಪ್ರತಿ ಶುಕ್ರವಾರ ತಪ್ಪದೆ ಕೆಂಪಾಂಬ, ಭೈರವೇಶ್ವರಿಗೆ ಪೂಜೆ ಸಲ್ಲಿಸುತ್ತೀಯ. ಅದಕ್ಕೆ ಕನಸು ಬಿದ್ದಿರಬೇಕು. ಅದೇನೆಂದು ಹೇಳು, ಮಗಳೆ !

ದೊಡ್ಡಾಂಬೆ—ಕೇಳಿ, ಅಪ್ಪಾಜಿ, ಚಿನ್ನದ ಆಭರಣಗಳಿಂದ ಸಿಂಗರಿಸಲ್ಪಟ್ಟ ಬಿಳಿ ಆನೆಯೊಂದು, ಗಂಭೀರ ನಡಿಗೆಯಿಂದ ಬರುತ್ತಿತ್ತು. ಅದರ ಮೇಲೊಂದು ಶ್ವೇತ ಛತ್ರ. ಅದರ ಹಿಂದೆ ಕತ್ತಿ, ಗುರಾಣಿಗಳನ್ನು ಹಿಡಿದ ಅನೇಕ ಸೈನಿಕರು ಕುದುರೆಗಳ ಮೇಲೆ ಕುಳಿತು ಬರುತ್ತಿದ್ದರು. ಆ ಆನೆ ಹೋದೆಡೆಯಲೆಲ್ಲಾ ಅರಮನೆಗಳು, ದೇವಾಲಯಗಳು, ಕೋಟೆಗಳು ಕಾಣುತ್ತಿದ್ದವು.

ರಣಭೈರೇಗೌಡ—ನೀನೇ ಧನ್ಯಳು ತಾಯಿ ! ಈ ಕನಸಿನ ಅರ್ಥ ರಾಜ ವೈಭವಗಳಿಂದ ಕೂಡಿದೆ. ಮುಂದೆ ನಮಗೆ ಯಾವುದೋ ಶುಭ ಸಂಗತಿ ಕಾದಿರುವ ಶುಭ ಸೂಚನೆ ಇದು. ಈಗಾಗಲೇ ಬಹಳ ಹೊತ್ತಾಯಿತು. ನೀನಿನ್ನು ಹೋಗಿ ನಿದ್ರಿಸು.

(ದೊಡ್ಡಾಂಬೆ ಹೋಗುವಳು.)

(ಮಲಗುವುದಕ್ಕೆ ಮುಂಚೆ, ಮಾಮೂಲಿನಂತೆ, ರಣಭೈರೇಗೌಡರು, ದೇವರಿಗೆ ಕೈಮುಗಿದು ಪ್ರಾರ್ಥಿಸುವರು)

ರಣಭೈರೇಗೌಡ—ಹೆ, ದೇವಾಧಿದೇವ, ಈಶ್ವರ ! ಶ್ರೀ ಭೋಗ ನಂದೀಶ್ವರನೂ ನೀನೇ, ಶ್ರೀ ಯೋಗ ನಂದೀಶ್ವರನೂ ನೀನೇ, ಭೈರವೇಶ್ವರನೂ ನೀನೆ, ಸಕಲ ಚರಾಚರಗಳ ಚಲನೆಗೆ, ಬ್ರಹ್ಮಾಂಡ

ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣನೂ ನೀನೇ. ನಿಲ್ಲಲು ನೆಲೆಯಿಲ್ಲದ ನಿನ್ನೀ ಭಕ್ತರನ್ನು ಇಲ್ಲಿಗೆ ಕರೆಯಿಸಿಕೊಂಡವನು ನೀನಲ್ಲವೆ? ನಿನ್ನ ಅಣತಿಯಿಲ್ಲದೆ ಹುಲ್ಲು ಕಡ್ಡಿಯೂ ಅಲಗದು. ನೀನೇ ನಮಗೆ ಆಧಾರ ಪ್ರಭು. ನಿನ್ನ ಇಚ್ಛೆಯಂತೆ ನಮ್ಮನ್ನು ನಡೆಸಿಕೊ ದೇವ.

(ರಣಭೈರೇಗೌಡರು ಮಲಗಿ ನಿದ್ರಿಸುವರು. ನಂದಿ ಬೆಟ್ಟದ ಕಡೆ ಮಿಂಚು ಮಿಂಚುತ್ತದೆ. ಸ್ವಲ್ಪ ಹೊತ್ತಿನಲ್ಲಿಯೇ ಜಟಾಧಾರಿಯಾದ ಶಿವನು ತ್ರಿಶೂಲ-ಢಮರುಗಳೊಂದಿಗೆ ಭೈರವೇಶ್ವರನ ರೂಪದಲ್ಲಿ ಕನಸಿನಲ್ಲಿ ಕಾಣುವನು.)

(ಅಶರೀರವಾಣಿ)

ನಂದೀಶ್ವರ—ಹೇ ಭಕ್ತಾಗ್ರಣಿ ರಣಭೈರೇಗೌಡ, ನಿನ್ನ ಭಕ್ತಿಗೆ ಮೆಚ್ಚಿದೆ, ನೀನು ನನ್ನ ಪರಮಭಕ್ತ. ಈಗ ನೀನಿರುವ ಸ್ಥಳವು ನನ್ನ ಕೃಪಾ ಕಟಾಕ್ಷಕ್ಕೆ ಪಾತ್ರವಾಗಿ, ಹಿಂದೆ ಗೌತಮ ಕ್ಷೇತ್ರವೆಂದು ಪ್ರಸಿದ್ಧಿಗೊಂಡಿತ್ತು. ನನ್ನ ಪ್ರೇರಣೆಯಿಂದಲೇ ನೀನು ಇಲ್ಲಿಗೆ ಬಂದದ್ದು. ನೀನು ಇಲ್ಲಿಯೇ ಸ್ಥಿರವಾಗಿ ನೆಲಸು. ನಿನ್ನ ವಂಶಜರು, ರಾಜಯೋಗವನ್ನು ಪಡೆದು, ಸೂರ್ಯ-ಚಂದ್ರಾರ್ಕವಾದ ಕೀರ್ತಿ ಗಳಿಸಿ, ಇತಿಹಾಸದಲ್ಲಿ ಪ್ರಸಿದ್ಧರೆನಿಸುವರು. ನನ್ನ ವರದಹಸ್ತ ಸದಾ ನಿಮ್ಮ ವಂಶಜರ ಮೇಲೆ ಇರುತ್ತದೆ. ಇದೇ ಅವರಿಗೆ ರಕ್ಷಣೆ. (ಶಿವ ಅದೃಶ್ಯನಾಗುವನು)

ರಣಭೈರೇಗೌಡ—(ದಿಗ್ಗನೆದ್ದು ಕಣ್ಣೊರೆಸಿಕೊಂಡು)
ಶ್ರೀ ನಂದೀಶ್ವರ, ಧನ್ಯ ನಾನು. ಭೈರವೇಶ್ವರನ ರೂಪದಲ್ಲಿ ಕನಸಿನಲ್ಲಿ ದರ್ಶನವಿತ್ತೆ. ದೀನ ದಯಾಳು ಪರಾತ್ಪರ, ನಿನ್ನ ಕರುಣೆ ಅಪಾರವಾದುದು. ನಿನ್ನ ಅಗಾಧ ಮಹಿಮೆಯನ್ನು ಸುರಾಸುರರಿಗೂ ಅರಿಯಲು ಸಾಧ್ಯವಿಲ್ಲ. ನಿನ್ನ ದರ್ಶನದಿಂದ ನನ್ನ ಕುಲಕೋಟಿಗಳು ಪುನೀತವಾದುವು. ನಿನ್ನ ಅಣತಿಯಂತೆ ನಾನು ಇಲ್ಲಿಯೇ ನೆಲಸಿ ಈ ನಾಡಿನ ಸೇವೆಯನ್ನು ಸಲ್ಲಿಸುವೆ, ದೇವ.

ಚೆನ್ನ—(ಗೌಡರ ಬಳಿ ಬಂದು ಕೈ ಕಟ್ಟಿ ನಿಂತಿರುತ್ತಾನೆ)

ರಣಭೈರೇಗೌಡರು—ಚೆನ್ನ, ಬೆಳಗಾಯಿತೇನು?

ಚೆನ್ನ—ಆಯ್ತು ಬುದ್ಧಿಯೋರೆ. ಆಗಲೇ ಲಕ್ಷ್ಮಮ್ಮಾ ಅವ್ರು, ದೊಡ್ಡಾಂಬೆ

ಯವ್ರು ದೇವರ ಪೂಜೆ ಮಾಡ್ತಾ ಇದಾರೆ. ದಣಿಯವರು ಎದ್ದವ್ರೇನೋ ನೋಡಿಕೊಂಡು ಬಾ ಅಂತ ಕಳ್ಸಿದ್ರು !

ರಣಭೈರೇಗೌಡ—ಚೆನ್ನ, ವೀರಣ್ಣನವರು, ಭದ್ರೇಗೌಡರು ಇದಾರೇನೋ ?

ಚೆನ್ನ—ಅವ್ರೆ, ಬುದ್ಧಿ.

ರಣಭೈರೇಗೌಡ—ಅವರೆಲ್ಲರನ್ನೂ ಕರೆಯಪ್ಪ.

(ಚೆನ್ನ ಹೊರಡುವನು)

(ಸ್ವಲ್ಪ ಹೊತ್ತಿನಲ್ಲಿಯೇ, ಲಕ್ಷ್ಮಮ್ಮ, ದೊಡ್ಡಾಂಬೆ, ವೀರಣ್ಣಗೌಡ, ಭದ್ರೇಗೌಡ ಇವರು ಬಂದು ನಿಲ್ಲುವರು)

ರಣಭೈರೇಗೌಡ—ತಮ್ಮಂದಿರೇ, ಮಗಳೇ, ನಾನಿಂದು ಕನಸಿನಲ್ಲಿ ಶ್ರೀಭೋಗನಂದೀಶ್ವರನನ್ನು ಕಂಡೆ. ಆ ಮಹಾದೇವನು ನಮಗೆ ರಾಜಯೋಗವಿದೆಯೆಂದೂ, ನಾವಿಲ್ಲಿಯೇ ಸ್ಥಿರವಾಗಿ ನೆಲಸಬೇಕೆಂದು ಅಣತಿ ಮಾಡಿದನು.

ಭದ್ರೇಗೌಡ—ಧನ್ಯರು ನಾವು, ಅಣ್ಣಾ. ಶ್ರೀ ನಂದೀಶ್ವರನ ದರ್ಶನ ಪಡೆದ ನೀವು ಭಾಗ್ಯವಂತರಣ್ಣ, ಆ ಸ್ವಾಮಿಯ ಆಜ್ಞೆಯಂತೆ ನಾವು ಇಲ್ಲಿಯೇ ನೆಲೆಸೋಣ.

(ಎಲ್ಲರೂ ತಮ್ಮ ತಮ್ಮ ಕರ್ತವ್ಯಗಳನ್ನು ನೆರವೇರಿಸಲು ಹೊರಡುವರು)

ದೃಶ್ಯ—೧೧

ರಸ್ತೆ ಸೀನು

ಸ್ಥಳ : ಆವತಿಗ್ರಾಮದ ಅರಳೀಕಟ್ಟೆ
(ಬಿಸಿಲಿನ ತಾಪ, ಒಬ್ಬ ವಿಪ್ರ ಬರುತ್ತಿರುತ್ತಾರೆ)

ನಾರಾಯಣಶಾಸ್ತ್ರಿ—(ಆ ರಸ್ತೆಯಲ್ಲಿ ಬರುತ್ತಿದ್ದ ಚೆನ್ನನನ್ನು ನೋಡಿ) ಅಯ್ಯಾ, ನಿನ್ನ ಹೆಸರೇನಪ್ಪ ?

ಚೆನ್ನ—ನನ್ನ, ಚೆನ್ನ ಅಂತ ಕರಿತಾರೆ ಸಾಮಿ.

ಶಾಸ್ತ್ರಿ—ಆ ಅರಳೀಕಟ್ಟೆ ಮೇಲೆ ಕುಳಿತಿರುದ ಯಜಮಾನರು ಹೊಸದಾಗಿ ಬಂದಿರುವರಂತೆ ಕಾಣುತ್ತೆ. ಅವರು ಎಲ್ಲಿಯವರೆಂದು ನಿನಗೆ ಗೊತ್ತೆ?

ಚೆನ್ನ—ನಾನು ಅವರ ಸೇವಕ ಸಾಮಿ, ನಮ್ಮ ಧನೀರ ಕತೆ ಬಾಳಾ ದೊಡ್ಡದು ಸಾಮಿ. ಬನ್ನಿ, ಅವ್ರಗೆ ನಿನ್ನ ಭೇಟಿ ಮಾಡ್ಸಿತೀನಿ.

ನಾರಾಯಣಶಾಸ್ತ್ರಿ—ಹಾಗೆಯೇ ಮಾಡಪ್ಪ. ಅವರನ್ನು ಮಾತನಾಡಿಸಬೇಕು ಅಂತಾ ಏಕೋ ಮನಸ್ಸು ಹೇಳುತ್ತದೆ.

ಚೆನ್ನ—ನಮ್ಮ ಧಣಿ. ಈ ಪ್ರಾಂತ್ಯಕ್ಕೆ ಬಂದಾಗಿನಿಂದ, ಸುತ್ತ ಮುತ್ತ ದೊಡ್ಡ ಮನಸುರೆಲ್ಲಾ ಆಗಾಗ್ಗೆ ಬಂದು ಮಾತಾಡಿಕೊಂಡು ಹೋಗ್ತಾರೆ ಸಾಮಿ.

ಚೆನ್ನಿ—ಅಲ್ರಿ, ಅಲ್ಲಿ ಅಷ್ಟೊಂದು ಕೆಲ್ಸ ಇದ್ರೂ, ಅದ್ಯಾರೊ ಸಾಮಿಯೋರ ಹತ್ರ ಹಲ್ಟೆ ಹೊಡೀತಿದ್ದೀರಲ್ರೀ.

ಚೆನ್ನ—ಲೇ ಚೆನ್ನಿ, ಈ ಸಾಮಿಯೋರು ಬಲು ದೊಡ್ಡ ಸಾಮಿಯೋರು ಕಣೆ ! ಇವರು ನಮ್ಮ ಧಣಿಯೋರ್ನ ನೋಡ್ ಬೇಕಂತೆ. ಅದಕ್ಕೆ ಅವರತ್ರ ಕರ್ಕೊಂಡು ಹೋಗ್ತಾ ಇದೀವ್ನಿ. ನಿನಗ್ಯಾಕ್ಕೆ ಹೊಟ್ಟೆ ಉರಿ ? ಕುಣೀಲ್ಲಾರ್‌ದೋಳ್ ಮದ್ಲೆ ಬಾರ್ಲೋನ್ ಮೇಲೆ ಬಿದ್ಲಂತೆ! ಅಂಗೆ ನನ್ನ ಮ್ಯಾಲ್ ಬೀಳ್ತಿ. ಹೋಗ್ಲೆ, ನಿನ್ನ ಕೆಲಸಕ್ಕ.

ಚಿನ್ನಿ—ಮದ್ಲೆ, ಗಿದ್ಲೆ ಅಂದ್ರೆ, ಭದ್ರೇಗೌಡ್ರಿಗೆ ಹೇಳಿ, ಕಾಲು ಮುರ್ಸಿತೀನಿ. ಗೊತ್ತೆ.

ನಾರಾಯಣಶಾಸ್ತ್ರಿ—ಅಯ್ಯಾ, ನಿಮ್ಮ ಜಗಳ ಸಾಕು ಮಾಡಿ. ಆಕೆ ನಿನಗೇನಾಗ ಬೇಕು ?

ಚಿನ್ನ—ತಪ್ಪಾಯ್ತು, ಕ್ಷಮಿಸಿ ಸಾಮಿ. ಆಕೆ ನನ್ನ ಹೆಂಡ್ತಿ.

ನಾರಾಯಣಶಾಸ್ತ್ರಿ—ಬಹಳ ಚೆನ್ನಾಗಿದೆ ನಿಮ್ಮ ಜೋಡಿ ! ನಡೀ ಗೌಡರ ಬಳಿ ಹೋಗೋಣ.

ಚಿನ್ನ—ಬನ್ನಿ ಸಾಮಿ.

(ಇಬ್ಬರೂ ರಣಭೈರೇಗೌಡರು ಕುಳಿತಿರುವ ಸ್ಥಳವನ್ನು ಸೇರುವರು)

———

ದೃಶ್ಯ—೧೨

ಅರಳೀಕಟ್ಟೆ

ರಣಭೈರೇಗೌಡ—(ಶಾಸ್ತ್ರಿಗಳನ್ನು ನೋಡಿ) ಬನ್ನಿ, ಬಿಸಿಲಿನ ತಾಪ ಹೆಚ್ಚಾಗಿದೆ ಕುಳಿತುಕೊಂಡು ಸುಧಾರಿಸಿಕೊಳ್ಳಿ. ತಾವು ಎಲ್ಲಿಗೆ ಹೊರಟಿರುವಿರಿ?

ನಾರಾಯಣಶಾಸ್ತ್ರಿ—ಹಿರಿಯರೇ, ನನ್ನ ಹೆಸರು ನಾರಾಯಣಶಾಸ್ತ್ರಿ. ಇಲ್ಲಿಂದ ಹೊರಟು ಕೋಡಿಮಂಚೇನಹಳ್ಳಿ ಮಾರ್ಗವಾಗಿ ಪೇರೆಸಂದ್ರ ಗ್ರಾಮಕ್ಕೆ ಹೋಗಲು ಬರುತ್ತಿದ್ದೆ. ಮಾರ್ಗಾಯಾಸದಿಂದ, ಅಲ್ಲಿ ಕಾಣುವ ಅತ್ತಿ ಮರದ ಬಳಿ ಕುಳಿತಾಗ ಒಂದು ಅದ್ಭುತವನ್ನು ಕಂಡೆ !

ರಣಭೈರೇಗೌಡ—ಅದಾವ ಅದ್ಭುತವನ್ನು ಕಂಡಿರಿ ?

ನಾರಾಯಣಶಾಸ್ತ್ರಿ—ಅತ್ತಿ ಮರದ ಕೆಳಗಡೆ ಒಂದು ಕುಲೀನ ಮಗು ನಿದ್ರಿಸುತ್ತಿತ್ತು. ತೇಜಸ್ವಿಯಾಗಿ ಕಾಣುತ್ತಿದ್ದ ಆ ಮಗುವಿನ ತಲೆಯ ಮೇಲೆ ಒಂದು ಸರ್ಪ ಹೆಡೆ ಆಡಿಸುತ್ತಿತ್ತು. ಆ ಮಗುವಿಗೆ ರಾಜನಾಗುವ ಯೋಗವಿದೆ. ಅದು ಯಾರ ಮಗು, ಹಿರಿಯರೇ ?

ರಣಭೈರೇಗೌಡ—ಆರ್ಯರೆ, ನೀವು ಆ ಮರದ ಕೆಳಗೆ ಕಂಡ ಮಗು ನನ್ನ ಮಗುವೇ, ನೀವು ಶಾಸ್ತ್ರಜ್ಞರಂತೆ ಕಾಣುವಿರಿ. ನಿಮ್ಮ ಭವಿಷ್ಯವಾಣಿ ನಿಜವಾಗುವುದೆ ?

ನಾರಾಯಣಶಾಸ್ತ್ರಿ—ನಾನು ತಮ್ಮನ್ನು ಇದೇ ಪ್ರಥಮ ಕಾಣುತ್ತಿರುವುದು, ತಾವು ಯಾರೆಂದು ಪರಿಚಯವಾಗಲಿಲ್ಲವಲ್ಲ.

ರಣಭೈರೇಗೌಡ—ಅಯ್ಯಾ, ವಿಪ್ರೋತ್ತಮರೆ, ಮೂಲತಃ ನಾವು ಕನ್ನಡಿಗರೇ! ನಮ್ಮ ಪೂರ್ವಜರಾದ ಗಂಗರಸರು ಇಡೀ ದಕ್ಷಿಣ ಭಾರತದಲ್ಲಿ, ಪ್ರಭುತ್ವ ಹೊಂದಿ, ಆಂಧ್ರ, ಕರ್ನಾಟಕ, ತುಳು, ತಮಿಳುನಾಡುಗಳಲ್ಲಿ ರಾಜ್ಯವಾಳಿದ ವಿಚಾರ ನಿಮಗೆ ತಿಳಿದೇ ಇರಬೇಕು. ನಮ್ಮ ಪೂರ್ವಿಕರಲ್ಲಿ ಕೆಲವರು ಪ್ರತಿನಿಧಿಗಳಾಗಿ ಪಕ್ಕದ ಪ್ರಾಂತ್ಯಗಳಿಗೆ

ಹೋದವರು ಅಲ್ಲಿಯೇ ಸ್ಥಿರವಾಗಿ ನೆಲೆಸಿದರು. ಅಂಥಹವರಲ್ಲಿ ನಾವೂ ಒಬ್ಬರು. ಕಾರಣಾಂತರಗಳಿಂದ ನಾವು ಇತ್ತೀಚಿಗೆ ಮತ್ತೆ ತಾಯಿನಾಡಿಗೆ ಬರಬೇಕಾಯಿತು. ನನ್ನ ಹೆಸರು ರಣಭೈರೇಗೌಡ ಶಾಸ್ತ್ರಿಗಳವರೆ.

ನಾರಾಯಣಶಾಸ್ತ್ರಿ—ಧನ್ಯರಾದ ನಿಮ್ಮನ್ನು ಕಂಡು ಬಹಳ ಸಂತೋಷ ವಾಯಿತು ಗೌಡರೆ. ನೋಡಲು ನೀವು ಧರ್ಮಮೂರ್ತಿಗಳಂತೆ ಕಾಣು ತ್ತಿರುವಿರಿ. ಮುಖದಲ್ಲಿ ರಾಜಲಕ್ಷಣಗಳಿವೆ. ಮುಂದೆ ನಿಮ್ಮ ವಂಶಜರು ಅನೇಕ ಪ್ರಾಂತ್ಯಗಳನ್ನು ಆಳಿ ಇತಿಹಾಸದಲ್ಲಿ ಮೆರೆಯುವರೆಂದು, ಅತಿ ಅಭಿಮಾನದಿಂದ ಹೇಳಬಯಸುತ್ತೇನೆ.

ರಣಭೈರೇಗೌಡ—ತಾವು ನುಡಿದ ಭವಿಷ್ಯವಾಣಿ ನಿಜವಾದರೆ, ನಾವು ಪಟ್ಟ ಶ್ರಮ ಸಾರ್ಥಕಗೊಳ್ಳುವುದು. ತಮ್ಮಿಂದ ಪವಿತ್ರ ನಂದಿ ಕ್ಷೇತ್ರದ ಮಹಿಮಾ ಕತೆ ಕೇಳಬೇಕೆಂದು ನನ್ನ ಅಭಿಲಾಷೆ. ದಯವಿಟ್ಟು ತಿಳಿ ಸೋಣವಾಗಲಿ.

ನಾರಾಯಣಶಾಸ್ತ್ರಿ—ಶ್ರೀ ಗಿರಿಜಾ-ಶಂಕರರ ತಪೋಸ್ಥಳ ನಂದಿ ಕ್ಷೇತ್ರ, ನಂದಿ ಬೆಟ್ಟ ಸಾಲುಗಳಲ್ಲಿ ಪಂಚ ಗಿರಿಗಳು, ಪಂಚ ನದಿಗಳು ಉದ್ಭವಿಸಿವೆ. ದಿವ್ಯಗಿರಿ, ಬ್ರಹ್ಮಗಿರಿ, ನಂದಿಗಿರಿ, ಚೆನ್ನಗಿರಿ, ಸ್ಕಂದಗಿರಿಗಳೇ ಪಂಚ ಗಿರಿಗಳು. ಸುವರ್ಣಮುಖಿ, ಅರ್ಕಾವತಿ, ಪಾಲಾರ್, ಪೆನ್ನಾರ್, ಪಾಪಾಘ್ನಿ ನದಿಗಳೇ ಪಂಚ ನದಿಗಳು. ವೇದ, ಉಪನಿಷತ್ತುಗಳು ಪುರಾಣಗಳ ಕಾಲದಿಂದಲೂ ಪವಿತ್ರ ಕ್ಷೇತ್ರ. ಇಲ್ಲಿ ನೀವು ರಾಜ್ಯವನ್ನು ಕಟ್ಟಿ ವಿಸ್ತರಿಸಿ. ಈ ಸ್ಥಳಕ್ಕೆ ಆವತಿ ಎಂದು ಹೆಸರಿಡಿ. ನಿಮ್ಮ ಮಗು ವಿಗೆ ಜಯಗೌಡನೆಂದು ನಾಮಕರಣ ಮಾಡಿ. ಇಂದಿನಿಂದ ನೀವು ಏನೇ ಕಾರ್ಯ ಕೈಗೊಂಡರೂ, ಜಯವು ಶತಃಸಿದ್ಧ.

ರಣಭೈರೇಗೌಡ—ಶಾಸ್ತ್ರಿಗಳೇ ನಿಮ್ಮಲ್ಲಿ ನನ್ನದೊಂದು ಅರಿಕೆ. ಅದನ್ನು ನೀವು ನಡೆಸಿಕೊಡುವಿರಿ ಎಂದು ನನ್ನ ನಂಬಿಕೆ.

ನಾರಾಯಣಶಾಸ್ತ್ರಿ—ನೀವು ಹಿರಿಯರು, ಧರ್ಮ ಪಕ್ಷಪಾತಿಗಳು, ನ್ಯಾಯ ವಾದಿಗಳೆಂದು ಕೇಳಿರುವೆ-ನೀವು ಏನು ಕೇಳಿದರೆ, ಅದನ್ನು ನಡೆಯಿಸಿ ಕೊಡುವೆನು.

ರಣಭೈರೇಗೌಡ—ತಾವು ಇಲ್ಲಿಯೇ ನೆಲೆಸಿ, ನಮ್ಮ ಕರಣಿಕರಾಗಿ, ನಮ್ಮವರಿಗೆ ವಿದ್ಯಾಬುದ್ಧಿಗಳನ್ನು ಧಾರೆಯೆರೆದು ನಮ್ಮನ್ನು ಮುನ್ನಡಸಬೇಕೆಂದು ನನ್ನ ಕೋರಿಕೆ.

ನಾರಾಯಣಶಾಸ್ತ್ರಿ—ನಿಮ್ಮ ಸತ್ಯ ಆಶ್ರಯದಲ್ಲಿ ನಾಡಿನ ಸೇವೆ ಸಲ್ಲಿಸಲು ನನಗೆ ತುಂಬಾ ಸಂತೋಷ.

ರಣಭೈರೇಗೌಡ—ಹೊನ್ನಾರು ಕಟ್ಟಿ, ಊರನ್ನು ಪ್ರದಕ್ಷಿಣೆ ಮಾಡಲು ಒಂದು ಶುಭ ಮುಹೂರ್ತವನ್ನು ಗೊತ್ತುಪಡಿಸಿ.

ನಾರಾಯಣಶಾಸ್ತ್ರಿ—ನಾಳೆ ಚೈತ್ರಾ ಪೂರ್ಣಿಮ. ಶುಭಕಾಯಕ್ಕೆ ಒಳ್ಳೆ ಮುಹೂರ್ತ.

ರಣಭೈರೇಗೌಡ—ಈ ಶುಭ ಕಾರ್ಯ ನಿಮ್ಮ ಅಮೃತಹಸ್ತದಿಂದಲೇ ನಡೆಯಬೇಕು. ಬನ್ನಿ ತಕ್ಕ ಸಿದ್ಧತೆಗಳನ್ನು ಮಾಡೋಣ, ನಡೆಯಿರಿ.

(ನಿರ್ಗಮಿಸುವರು)

ದೃಶ್ಯ–೧೩

ರಸ್ತೆ ಸೀನು

(ಚೆನ್ನ ಹಾಡುತ್ತಾ ಬರುವನು, ಚೆನ್ನಿ ಕೋಪಗೊಳ್ಳುವಳು)

ಹಾಡು

ಚೆನ್ನ—ಲೇ, ಚೆನ್ನಿ, ಅದ್ಯಾಕ್ಲೆ ಮದ್ವೆಯಾಗಿ ಈಸು ದಿನವಾದ್ರೂ, ಆಪಾಟಿ ನಾಚಿಕೆ ಪಟ್ಕೊತೀಯ ? ಆವತ್ತು, ಅದ್ಯಾರೊ ಸಾಮಿಗಳೋರ್ ಜತೆ ಅಲ್ಟೆ-ಪಲ್ಟೆ ಒಡೀತಿದ್ದೆ ಅಂತ ತಮಾಸೆ ಮಾಡ್ಬಿಟ್ಟೆ. ಈಗ್ನೋಡು ಆ ಸಾಮಿಯೋರು ನುಡಿದ ಮಾತು ದಿಟ ಆಗಿ ಏಟೊಂದು ರೊಕ್ಕ ಸಿಕ್ಕಿತು. ನಮ್ಮ ಧಣಿಯೋರ್ಗೇ !

ಚೆನ್ನಿ—ಯ್ಯಾ, ಬಡ್ಲ, ಆ ಸ್ವಾಮಿಯೋರ್ನ ಯಾಕ ಒಗಳ್ತಿ ! ನಮ್ಮ ಧನಿಯೋರು ಮುಟ್ಟಿದ್ದೆಲ್ಲಾ ಚಿನ್ನಾ ಆಯ್ತದೆ.

ಚೆನ್ನ—ನಮ್ಮ ಧನಿಯೋರು, ಮಾರಾಜ್ರು ಆಗ್ತಾರೆ ಗೊತ್ತಾ ನಿಂಗೆ ?

ಚೆನ್ನಿ—ನಾವ್ ಬಿಟ್‌ಬಂದ್ವಲ್ಲಾ ಊರು, ಅಲ್ಲಿದ್ದ ಶಲ್ವ ನಾಯಕನಂಗಾ ?

ಚೆನ್ನ—ಲೇ ಚೆನ್ನಿ, ಆ ನಾಯಕ ಯಾವ ಸೀಮೆ ಮಾರಾಜ ಕಣೆ? ಅವನೊಬ್ಬ ಕಳ್ಳ ಕೊರಮ. ಆವನ್ನ ರಾಜಾ ಅಂತಿಯಲ್ಲಾ; ನಿನ್ನ ತಲೇಗ ಏನಯ್ತೇ ?

ಚೆನ್ನಿ—ಹೋಗ್ಲ ಬಿಡು. ನಂಗೇನು ಗೊತ್ತು ಮಾರಾಜ್ರು ಎಂಗಿರ್ತಾರೆ ಅಂತ!

ಚೆನ್ನ—ಈ ಸುತ್ತ ಮುತ್ಲ ಪ್ರಾಂತ್ಯಕ್ಕಾ ರಾಜ್ರಾಗಿ ಆಳ್ತಾರಂತೆ ನಮ್ಮ ಧನಿಯೋರು ! ಗೌಡರು ಕರೀತಾ ಅವ್ರಂತೆ ನಡಿ.

ವೀರಣ್ಣಗೌಡ—(ಸ್ವಗತ) ಅಣ್ಣ ಭದ್ರೇಗೌಡರಿಗೆ ಸೇನೆ ಕಟ್ಟುವ ಚಿಂತೆ. ದೊಡ್ಡಣ್ಣಾವರಿಗೆ ಬಂದೋರ ಕಷ್ಟ ಸುಖ ವಿಚಾರಿಸುವ ಚಿಂತೆ. ಮಿಕ್ಕದ್ದನ್ನ ಆ ಪರಮಾತ್ಮನೇ ನೋಡಿಕೊಳ್ಳಬೇಕು.

ಚೆನ್ನ—ಬುದ್ಧಿ, ಭದ್ರೇಗೌಡರು ದಯಮಾಡಸ್ತಾ ಅವ್ರೆ.

(ಭದ್ರೇಗೌಡರ ಪ್ರವೇಶ)

ವೀರಣ್ಣಗೌಡ—ಅಣ್ಣ, ಮಧುಗಿರಿ ನಾಯಕನಿಂದ ಬಂದ ಸುದ್ದಿ ಕೇಳಿದಿರೇನು?

ಭದ್ರೇಗೌಡ—ಮಧುಗಿರಿ ನಾಯಕನಿಗೂ, ನಮಗೂ ಏನು ಸಂಬಂಧ ವೀರಣ್ಣ!

ವೀರಣ್ಣಗೌಡ—ಇಲ್ಲಿ ನೋಡಣ್ಣ, ಅವನಿಂದ ಬಂದಿರುವ ಎಚ್ಚರಿಕೆ ಪತ್ರ!

(ಭದ್ರೇಗೌಡರು ಪತ್ರವನ್ನು ತೆಗೆದುಕೊಂಡು ಓದುವರು)

ಪತ್ರ—

ಈ ರಾಯಸದ ಮೂಲಕ ಮಧುಗಿರಿಯ ಪ್ರಭುಗಳಾದ ನಾವು ಆವತಿಯ ಪ್ರದೇಶಕ್ಕೆ ಬಂದು ನೆಲಸಿರುವ ರಣಭೈರೇಗೌಡ ಮತ್ತು ಅವರ ಸೋದರರಿಗೆ ತಿಳಿಸುವುದೇನೆಂದರೆ—ನೀವು ನಮ್ಮ ಅನುಮತಿ ಯನ್ನು ಪಡೆಯದೆ ನಂದಿ ಕ್ಷೇತ್ರ ಸಮೀಪದ ಪ್ರದೇಶದಲ್ಲಿ ನೆಲಸಿರುವು ದಲ್ಲದೆ, ಆ ಸುತ್ತಮುತ್ತಲ ಪ್ರದೇಶಗಳನ್ನು ವಶಪಡಿಸಿಕೊಂಡು, ರಾಜದ್ರೋಹಿಗಳಾಗಿ, ನಮ್ಮ ಕೋಪಕ್ಕೆ ತುತ್ತಾಗಿದ್ದೀರಿ. ಅಲ್ಲದೆ, ಅಲ್ಲಿನ ಪ್ರಜೆಗಳನ್ನು ಬೆರಗುಗೊಳಿಸಿ, ನಾಡ ಪ್ರಭುಗಳೆಂದು ಮೆರೆಯು ತ್ತಿದ್ದೀರಿ. ಆವತಿಯಲ್ಲಿ ನಿಮಗೆ ಸಿಕ್ಕಿದ ಚಿನ್ನದ ನಿಧಿಯನ್ನು ನಮ್ಮ ಬೊಕ್ಕಸಕ್ಕೆ ಅರ್ಪಿಸಿ, ನಮ್ಮಲ್ಲಿ ಕ್ಷಮೆ ಕೋರಿ, ಶರಣಾಗಬೇಕು. ಇಲ್ಲದ ಪಕ್ಷಕ್ಕೆ ನಿಮ್ಮ ಗತಿ ಏನಾಗುವುದೆಂಬುದನ್ನು ನೀವೇ ಊಹಿಸಿ ಕೊಳ್ಳಿ.

—ಮಧುಗಿರಿಯ ಮಹಾಮಲ್ಲ ಮಾರನಾಯಕ—

(ರಣಭೈರೇಗೌಡರ ಪ್ರವೇಶ)

ರಣಭೈರೇಗೌಡ—ವೀರಣ್ಣ, ಭದ್ರಣ್ಣ, ನೀವೇನೋ ಚರ್ಚೆ ಮಾಡುತ್ತಿರು ವಂತಿದೆ. ತಮ್ಮಂದಿರಾದ ಮುತ್ತೇಗೌಡ, ಚಿಕ್ಕೇಗೌಡರು, ಕೋಲಾರ

ಹೊಸಕೋಟೆ ಪ್ರಾಂತ್ಯಗಳಿಗೆ ಹೋದವರು ಇನ್ನೂ ಹಿಂತಿರುಗಿ ಬರಲಿಲ್ಲವೆ ? ಅವರಿಂದ ವರದಿಗಳೇನಾದರೂ ಬಂದವೆ ?

ವೀರಣ್ಣ—ಅಣ್ಣ, ಈಗ ತಾನೆ, ಮಧುಗಿರಿ ನಾಯಕನಿಂದ ನಮಗೆ ಎಚ್ಚರಿಕೆ ರಾಯಸ ಬಂದಿದೆ.

(ರಣಭೈರೇಗೌಡರು, ರಾಯಸವನ್ನು ಕೈಗೆ ತೆಗೆದುಕೊಂಡು ಓದುವರು)

ರಣಭೈರೇಗೌಡ—ಕನ್ನಡ ನಾಡು ನಮ್ಮ ನಾಡು, ಗಂಡುಗಲಿಗಳ ನಾಡು. ಇಲ್ಲಿಯವರೆಗೂ ನಾವು ಪರನಾಡಿನಲ್ಲಿದ್ದೆವು. ಮತ್ತೆ ನಾವೀಗ ನಮ್ಮ ತಾಯಿ ನಾಡಿನಲ್ಲಿದ್ದೇವೆ. ಪುಂಡರು, ದರೋಡೆಕಾರರು, ದುಷ್ಟ ಪಾಳೆಗಾರರನ್ನು ಸದೆ ಬಡಿದು, ಕನ್ನಡ ನಾಡನ್ನು ಸಮೃದ್ಧಿಗೊಳಿಸಿ, ರಾಮರಾಜ್ಯವನ್ನಾಗಿ ಮಾಡಬೇಕೆಂಬುದು ನನ್ನ ಹಿರಿಯ ಆಸೆ ವೀರಣ್ಣ. ಆ ಸೊಕ್ಕಿನ ಮಧುಗಿರಿ ನಾಯಕನಿಗೆ ಇಂದೇ ತಕ್ಕ ಉತ್ತರವನ್ನು ಕಳುಹಿಸಿ. ನಮ್ಮ ಗಂಗರಸರ ಪ್ರಪ್ರಥಮ ರಾಜಧಾನಿಯೇ ಕೋಲಾರ. ರಕ್ಷಣಾ ಕೋಟೆಯೇ ನಂದಿದುರ್ಗ. ಈ ಸುತ್ತಮುತ್ತಲ ಪ್ರದೇಶಗಳು ಅವರ ಅಧೀನದಲ್ಲಿದ್ದರೆ ಅವರೇಕೆ ಇವುಗಳ ಅಭಿವೃದ್ಧಿಗೆ ಶ್ರಮಿಸಲಿಲ್ಲ. ದೌರ್ಜನ್ಯ, ದರೋಡೆ, ಲೂಟಿಗಳಿಂದ ಪ್ರಜೆಗಳನ್ನು ಪೀಡಿಸುವುದಲ್ಲದೇ ತಾವೇ ನಾಡ ಪ್ರಭುಗಳೆಂದು ಹೇಳಿಕೊಂಡ ಮಾತ್ರಕ್ಕೆ ಅವರು ನಾಯಕರೇನು ? ಅವರಿಗೆ ನಾವು ಸಾಮಂತರೆ ? ಗೌಡ ವಂಶಸ್ಥರು ಹೊಯ್ಸಳ ಸಾಮ್ರಾಟರನ್ನು ಬಿಟ್ಟು ಮತ್ತಾರಿಗೂ ತಲೆ ಬಾಗಿಸಿದವರಲ್ಲ. ನಮ್ಮೀ ಒಕ್ಕಲಿಗರ ಇತಿಹಾಸವನ್ನು ಪ್ರತಿಯೊಬ್ಬರೂ ಅರಿಯಲೇಬೇಕು !

ವೀರಣ್ಣಗೌಡ—ಅಣ್ಣಾ, ನನಗೊಂದು ಯೋಚನೆ ಹೊಳೆಯುತ್ತಿದೆ. ಆ ಮಧುಗಿರಿ ನಾಯಕನಿಗೆ ಉತ್ತರ ಕಳಿಸುವುದಕ್ಕೆ ಬದಲು, ಒಂದೇ ಸಾರಿ ನಮ್ಮ ಸೈನ್ಯ ಸಮೇತ ಮುತ್ತಿಗೆ ಹಾಕೋಣ. ಬಲಾಬಲಗಳು ಆಗ ಗೊತ್ತಾಗುತ್ತವೆ.

ರಣಭೈರೇಗೌಡ—ನಾವು ಯುದ್ಧಕ್ಕೆ ಬರುತ್ತಿದ್ದೇವೆಂದು, ಅವರಿಗೆ ಮುಂಚಿತವಾಗಿಯೇ ತಿಳಿಸುವುದು ರಾಜಧರ್ಮ.

(ನಾರಾಯಣಶಾಸ್ತ್ರಿ ಪ್ರವೇಶ)

ನಾರಾಯಣಶಾಸ್ತ್ರಿ—ಧರ್ಮ ಸ್ವರೂಪಿಗಳಾದ ನೀವು ಸರಿಯಾಗಿ ಹೇಳಿದಿರಿ, ಗೌಡರೆ! ಆ ಮಾರನಾಯಕ, ತನ್ನ ಪ್ರಭುವಾಗಿದ್ದ ಹಿರೇಗೌಡರನ್ನು ಮೋಸದಿಂದ ಕೊಲೆ ಮಾಡಿ ಸಿಂಹಾಸನವನ್ನು ಆಕ್ರಮಿಸಿಕೊಂಡ ದುಷ್ಟ. ನಿಮ್ಮ ಸೋದರರು ಮಧುಗಿರಿಯನ್ನು ವಶವಡಿಸಿಕೊಳ್ಳಲೇಬೇಕು! ಆ ನಾಯಕನಿಗೆ ತಕ್ಕ ಶಿಕ್ಷೆಯನ್ನು ವಿಧಿಸಲೇಬೇಕು.

ರಣಭೈರೇಗೌಡ—ವೀರಣ್ಣ, ಭದ್ರಣ್ಣ, ನೀವು ನಮ್ಮ ಸೇನೆಯನ್ನು ಎರಡು ಭಾಗಗಳನ್ನಾಗಿ ಮಾಡಿ, ಒಬ್ಬರು ಮಧುಗಿರಿಯ ಮೇಲೂ, ಮತ್ತೊಬ್ಬರು ಮಿಡಿಗೇಸಿಯ ಮೇಲೂ ದಾಳಿ ಮಾಡಬೇಕು. ಆ ಮಾರನಾಯಕನಿಗೆ ತುರ್ತಾಗಿ ಇಂದೇ ರಾಯಸವನ್ನು ಕಳುಹಿಸಿ,

ನಾರಾಯಣಶಾಸ್ತ್ರಿ—ಪ್ರಭುಗಳೆ, ನಾಳೆ ಬಹಳ ಪ್ರಶಸ್ತವಾದ ದಿನ. ನೀವು ನಾಳೆ ಯುದ್ಧಕ್ಕೆ ಹೊರಟರೆ, ನಿಮಗೆ ಖಂಡಿತ ಜಯ ಪ್ರಾಪ್ತವಾಗುತ್ತದೆ.

ರಣಭೈರೇಗೌಡ—ಹಾಗಾದರೆ ನಡೆಯಿರಿ, ಯುದ್ಧಕ್ಕೆ ತಕ್ಕ ಸಿದ್ಧತೆಗಳನ್ನು ಮಾಡಿ.

(ಹೊರಡುವರು)

ದೃಶ್ಯ–೧೪

(ಸ್ಥಳ : ಮಧುಗಿರಿಯ ಕೋಟೆ)

(ಮಧುಗಿರಿಯ ಪಾಳೆಯಗಾರ ಸಮಾಲೋಚನ ಮಂದಿರದಲ್ಲಿ ಯೋಚನಾಮಗ್ನನಾಗಿ ಕುಳಿತಿರುತ್ತಾನೆ : ಬಳಿಯಲ್ಲಿ ಕರಣಿಕನೂ ಇರುತ್ತಾನೆ.)

ಪಾಳೆಗಾರ—ಕರಣಿಕರೆ, ನಂದಿದುರ್ಗದ ಸಮೀಪದ ಪ್ರದೇಶದಲ್ಲಿ ಯಣಮಂಜ ಪುತ್ತೂರು ಪ್ರಾಂತ್ಯದ ಕಡೆಯಿಂದ, ರಣಭೈರೇಗೌಡ ಎಂಬವರು ಬಂದು ನೆಲಸಿದ್ದಲ್ಲದೆ, ನಮ್ಮ ಅನುಮತಿಯೂ ಇಲ್ಲದೆ, ಪಾಳೇಪಟ್ಟುಗಳನ್ನು ನಿರ್ಮಿಸುತ್ತಿದ್ದಾರೆ. ನಾವು ಅವರಿಗೆ ಕಳುಹಿಸಿದ ಎಚ್ಚರಿಕೆಯ ರಾಯಸವು ಈಗಾಗಲೇ ತಲುಪಿರಬಹುದಲ್ಲವೆ ?

ಕರಣಿಕ—ಪ್ರಭುಗಳಿಗೆ, ಮೊದಲಿನಿಂದಲೂ ತಮ್ಮಲ್ಲಿ ನಾನು ಅರಿಕೆ ಮಾಡಿಕೊಳ್ಳುತ್ತಿದ್ದೆ—ನಂದಿ ದುರ್ಗದ ಸುತ್ತಲಪ್ರದೇಶ ಫಲವತ್ತಾದ ಮತ್ತು ಜಲ ಸಮೃದ್ಧಿಯಿಂದ ಕೂಡಿದ ಪ್ರದೇಶವೆಂದೂ, ಅದನ್ನು ಅಧೀನದಲ್ಲಿಟ್ಟುಕೊಳ್ಳಬೇಕೆಂದು. ಆದರೆ ತಾವು ಅದಕ್ಕೆ ಕಿವಿಗೊಡದೆ ಉದಾಸೀನ ಮಾಡಿದಿರಿ.

ಪಾಳೆಗಾರ—ನಮ್ಮ ನೆರೆಹೊರೆಯ ಶತ್ರುಗಳೊಡನೆ ಹೋರಾಡುತ್ತಾ, ನಮ್ಮ ಮಧುಗಿರಿ ದುರ್ಗವನ್ನು ರಕ್ಷಿಸಿಕೊಳ್ಳುವುದರಲ್ಲಿ ತೊಡಗಿದ್ದ ನಮಗೆ, ಆಕಡೆ ಗಮನ ಕೊಡಲು ಸಮಯವೆಲ್ಲಿತ್ತು ಕರಣಿಕರೇ ? ಆದರೂ, ಯಲಹಂಕ, ಆವತಿ, ಚಿಕ್ಕಬಳ್ಳಾಪುರ, ಕೋಲಾರ, ಹೊಸಕೋಟೆ ಪ್ರಾಂತ್ಯಗಳು ನಮಗೆ ಸೇರಬೇಕಾದ ಪ್ರಾಂತ್ಯಗಳೇ. ಅವನ್ನು ಬೇರೊಬ್ಬರು ಪ್ರವೇಶಿಸುವುದನ್ನು ನಾವು ಸಹಿಸಲಾರೆವು.

ಕರಣಿಕ—ಈಗಾಗಲೆ, ವಿಳಂಬವಾಯ್ತು ಪ್ರಭು, ಆ ರಣಭೈರೇಗೌಡರು ಕೆಂಪಾಂಬೆ ದೇವಿ ಮತ್ತು ಭೈರವೇಶ್ವರರ ಪರಮ ಭಕ್ತರಂತೆ. ಆವತಿಯ ಬಳಿ ಅಪಾರ ಭೂವಿಧಿ ಸಿಕ್ಕಿತಂತೆ. ಸುತ್ತ ಮುತ್ತಲ

ಪ್ರದೇಶಗಳನ್ನು ತಮ್ಮ ಸ್ವಾಧೀನ ಪಡಿಸಿಕೊಂಡು ಆವತಿನಾಡ ಪ್ರಭು ವೆಂದು ಪ್ರಜೆಗಳ ಮೆಚ್ಚಿಗೆ ಪಡೆದಿಹರಂತೆ!

ಪಾಳೆಗಾರ—ಆಗಲಿ! ಆಗಲಿ! ಏ ಯಾರಲ್ಲಿ?

ಸೇವಕ—ಪ್ರಭು!

ಪಾಳೆಗಾರ—ಮಧು ಪಾತ್ರೆಯನ್ನು ತಾ!

ಸೇವಕ—ಚಿತ್ತ ಪ್ರಭು.

(ಸೇವಕ ಮಧು ಪಾತ್ರೆಯನ್ನು ತಂದಿಡುವನು, ನಾಯಕ ಮಧುಪಾನ ಮಾಡುತ್ತಾ ಇರುವನು)

ಸೇವಕ—ಪ್ರಭು, ನಮ್ಮ ಗೂಢಚಾರರು, ಈ ಪತ್ರವನ್ನು ತಂದಿದಾರೆ.

ಪಾಳೆಗಾರ—ಕರಣಿಕರೆ, ಆ ಪತ್ರದಲ್ಲಿರುವ ವಿಚಾರವೇನೆಂಬುದನ್ನು ಓದಿ.

(ಕರಣಿಕರು ಪತ್ರವನ್ನು ಓದುವರು)

ಕರಣಿಕರು—ಪ್ರಭು, ರಣಭೈರೇಗೌಡರ ಸಹೋದರರು ಹೊಸಕೋಟೆ, ಕೋಲಾರ ಪ್ರಾಂತ್ಯಗಳನ್ನು ಮುತ್ತಿ ಸ್ವಾಧೀನ ಪಡಿಸಿಕೊಂಡರೆಂಬ ವಾರ್ತೆ ಬಂದಿದೆ.

ಪಾಳೆಗಾರ—ಆ, ಆ–ರಣಭೈರೇಗೌಡ, ಯಾರನ್ನು ಕೇಳಿದರೂ, ಆತನ ವಿಚಾರವೆ, ವಲಸೆಬಂದ ಆತನಿಗೆ ಇಷ್ಟು ಧೈರ್ಯವೆ? ಕರಣಿಕರೇ, ನಾಳೆಯೇ ನಮ್ಮ ಸೈನ್ಯ ಸಿದ್ಧವಾಗಲಿ. ಅವರ ಸೊಕ್ಕನ್ನು ಮುರಿದು, ಆ ಪ್ರಾಂತ್ಯಗಳನ್ನು ಮತ್ತೆ ವಶಪಡಿಸಿಕೊಳ್ಳೋಣ.

ಕರಣಿಕ—ಪ್ರಭು, ನನ್ನದೊಂದು ಭಿನ್ನಹ!

ಪಾಳೆಗಾರ—ಏನದು?

ಕರಣಿಕ—ದುಡುಕದೆ ಸ್ವಲ್ಪ ಯೋಚಿಸಿ ಕೆಲಸ ಮಾಡಬೇಕು ಪ್ರಭು.

ಪಾಳೆಗಾರ—ಯೋಚಿಸುವುದೇನು ಬಂತು ಕರಣಿಕರೇ! ಈ ಮಧುಗಿರಿ ನಾಯಕನ ಹೆಸರನ್ನು ಕೇಳಿದರೆ ಸಾಕು, ಸುತ್ತಮುತ್ತಲ ನಾಯಕರೆಲ್ಲಾ ಅಂಜಿ ಓಡುವರು. ಇನ್ನು ಪರದೇಶಿಗಳಾಗಿ ಬಂದ ಆ ಗೌಡರ ಪರಿವಾರ ನಮಗೆ ಯಾವ ಲೆಕ್ಕಕ್ಕೆ. ನಾವು ಕಳುಹಿಸಿರುವ ರಾಯಸಕ್ಕೆ ಹೆದರಿ ನಮಗೆ ಶರಣಾಗಲೇ ಬೇಕು.

ನಮ್ಮ ರಾಯಸವನ್ನು ಕಳುಹಿಸಿ ಹಲವು ದಿನಗಳಾದರೂ ಅವರಿಂದ ಉತ್ತರ ಬರಲಿಲ್ಲವಲ್ಲ!

ಸೇವಕ—ಪ್ರಭು, ಅವತಿಗೆ ಹೋಗಿದ್ದ ನಮ್ಮ ರಾಯಭಾರಿಗಳು ಬಂದಿದ್ದಾರೆ.

ಪಾಳೆಗಾರ—ಅವರನ್ನು ಇಲ್ಲಿಗೆ ಬರಮಾಡು.

(ಸೇವಕನು ರಾಯಭಾರಿಗಳನ್ನು ಕರೆದು ತರುವನು)

ಪಾಳೆಗಾರ—ಮಲ್ಲಣ್ಣನವರೇ, ನೀವು ಹೋದ ಕೆಲಸ ಏನಾಯಿತು ?

ಮಲ್ಲಣ್ಣ—ಪ್ರಭು ನಾನು ಹೋದ ಕೆಲಸ ಸಫಲವಾಗಲಿಲ್ಲ.

ಪಾಳೆಗಾರ—ಏನೆಂದಿರಿ ? ನಮ್ಮ ರಾಯಸವನ್ನು ಧಿಕ್ಕರಿಸುವಷ್ಟು ಸೊಕ್ಕೆ, ಆ ಗೌಡರಿಗೆ ?

ಮಲ್ಲಣ್ಣ—ಅವರಿಂದ ಉತ್ತರವಾಗಿ ಬಂದಿರುವ ಈ ರಾಯಸವನ್ನು ಪರಾಂಬರಿಸಿ ಪ್ರಭು.

ಪಾಳೆಗಾರ—ಅವರ ಉತ್ತರ ಏನೆಂಬುದನ್ನು ಓದಿ ಕರಣಿಕರೇ.

ಕರಣಿಕ—(ಓದುವನು)

ರಾಯಸ—ಮಧುಗಿರಿಯ ನಾಯಕರಿಗೆ, ಕೆಂಪಾಬೆಯ ಭಕ್ತರಾದ ರಣಭೈರೇಗೌಡರು ಮತ್ತು ಸಹೋದರರು ತಿಳಿಸುವುದೇನೆಂದರೆ–ನೀವು ನಮ್ಮನ್ನು ಪರದೇಶಿಗಳೆಂದೂ, ನಾವಿರುವ ಪ್ರದೇಶಗಳು ನಿಮ್ಮ ಅಧೀನವೆಂದೂ, ನಾವು ನಿಮಗೆ ಶರಣಾಗಿ ತಲೆಬಾಗಬೇಕೆಂದೂ ನಿಮ್ಮ ರಾಯಸದಲ್ಲಿ ತಿಳಿಸಿ ಉದ್ಧಟತನದಿಂದ ವರ್ತಿಸಿದ್ದೀರಿ. ನಾವ್ಯಾರೆಂಬುದು ನಿಮಗೆ ತಿಳಿಯದು. ಅಚ್ಚ ಕನ್ನಡಿಗರೂ ಹಾಗೂ ಗಂಗರಸರ ವಂಶಜರು ನಾವು. ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ ಸಾಮ್ರಾಜ್ಯಗಳ ಸಮ್ಮಿಳನಗೊಂಡವರು ನಾವು. ಹೊಯ್ಸಳೇಶ್ವರ ಸಾಮ್ರಾಟರ ವೀರ ಸೋಮೇಶ್ವರ ಆಳ್ವಿಕೆಯಲ್ಲಿ, ಸಾಮ್ರಾಟರ ಅಳಿಯರಾದ ರಾಜೇಂದ್ರ ಚೋಳರ ಪರವಾಗಿ, ಪಾಂಡ್ಯರ ಮೇಲೆ ಯುದ್ಧಕ್ಕೆ ಹೋಗಿ, ಅವರನ್ನು ಸೋಲಿಸಿ, ಕರ್ನಾಟಕದ ಗಡಿಯನ್ನು ಪೂರ್ವ ದಿಕ್ಕಿನ ಕಂಚಿಯವರೆಗೂ ವಿಸ್ತರಿಸಿದ ಕಡುಗಲಿಗಳಾದ ವೀರ ಗಂಗರ ವಂಶಜರು ನಾವು. ಹೊಯ್ಸಳ ಸಾಮ್ರಾಜ್ಯದ ಪ್ರತಿನಿಧಿಗಳಾಗಿ, ಅಲ್ಲಿಯೇ ನೆಲಸಿದ್ದು, ಮರಳಿ ತಾಯಿನಾಡಿಗೆ ಬಂದವರು ನಾವು. ಗಂಗಾಜಯತೇಜ ರಾಜರು ನಮ್ಮ ಪೂರ್ವಿಕರು. ಅವರಿಗೆ ಸೇರಿದ ಪ್ರದೇಶಗಳೇ ಮಣ್ಣೆ, ಕೋಲಾರ, ಆವತಿ ಪ್ರದೇಶಗಳು. ಇವು ಮೂಲತಃ ನಮ್ಮ ಜನ್ಮ ಹಕ್ಕು, ನಿಮ್ಮ

ಹಾಗೆ ನಾವು ಸ್ವಾಮಿ ದ್ರೋಹಿಗಳಲ್ಲ. ಮಧುಗಿರಿಯ ನಾಡ ಪ್ರಭು ಹಿರೇಗೌಡರನ್ನು ಮೋಸದಿಂದ ಕೊಲ್ಲಿಸಿ, ಸಿಂಹಾಸನವನ್ನೇರಿದ ನಿಮ್ಮಂಥಹ ಕುತಂತ್ರಿಗಳಲ್ಲ ನಾವು. ಇದೋ, ನಾವು ಮಧುಗಿರಿಯನ್ನು ಮುತ್ತಲು ಬರುತ್ತಿದ್ದೇವೆ? ಶಕ್ತಿ ಇದ್ದರೆ ನಮ್ಮನ್ನು ಎದುರಿಸಿ ಇಲ್ಲವೇ ಶರಣಾಗಿ !

ಇಂತೀ

ರಣಭೈರೇಗೌಡರು ಮತ್ತು ಸಹೋದರರು,

ಪಾಳೆಗಾರ—(ಕೋಪದಿಂದ ಎದ್ದು ನಿಂತು, ಇನ್ನಷ್ಟು ಮಧುಪಾನ ಮಾಡುತ್ತಾ ಹುಚ್ಚು ನಗೆಯಿಂದ)

ಕೇಳಿದಿರಾ, ಕರಣಿಕರೇ ! ರಣಭೈರೇಗೌಡರ ಹೆಗ್ಗಳಿಕೆ, ಪೌರುಷ, ಅಟ್ಟಹಾಸಗಳನ್ನ. ಇವರು ಗಂಗ, ಚಾಳುಕ್ಯ, ಹೊಯ್ಸಳರಿಗೆ ಸೇರಿದವರಂತೆ ! ಆ ನಾರಾಯಣಶಾಸ್ತ್ರಿ, ಬಡಬ್ರಾಹ್ಮಣ ನಮ್ಮ ರಹಸ್ಯವನ್ನು ಅವರಿಗೆ ತಿಳಿಸಿದಂತೆ ಕಾಣುತ್ತದೆ. ಆ ಅಹಂಕಾರಿಗಳಿಗೆ ಬುದ್ಧಿ ಕಲಿಸಲು ರಣರಂಗವೇ ಸರಿಯಾದ ಸ್ಥಳ. ನಾಳೆ ಮುಂಜಾನೆಯೇ ಸೇನೆಯನ್ನು ಹೊರಡಿಸಿ.

ಕರಣಿಕ—ಪ್ರಭು ಗೌಡರು ಏಕಕಾಲದಲ್ಲಿ ಮಿಡಿಗೇಸಿ, ಮಧುಗಿರಿಗಳ ಮೇಲೆ ಮುತ್ತಿಗೆ ಹಾಕುವರೆಂದು ತಿಳಿದು ಬಂದಿದೆ. ಈ ಸಮಯದಲ್ಲಿ ಮಿಡಿಗೇಸಿ ನಾಯಕರ ಸಹಾಯವನ್ನು ನಾವು ಕೇಳುವುದೇ ? ನಮ್ಮ ಸೈನ್ಯಬಲವೇ ನಮಗೆ ಸಾಕು.

(ಚಾರನ ಪ್ರವೇಶ)

ಚಾರ—ಪ್ರಭು, ಗೌಡರ ತಮ್ಮಂದಿರಾದ ವೀರಪ್ಪಗೌಡರು ಮಧುಗಿರಿಯ ಮೇಲೂ, ಭದ್ರಪ್ಪಗೌಡರು ಮಿಡಿಗೇಸಿಯ ಮೇಲೂ ನುಗ್ಗಿ ಬರುತ್ತಿದ್ದಾರೆ.

ಪಾಳೆಗಾರ—ಬರಲಿ, ಬರಲಿ, ಬೆಂಕಿಗೆ ಬೀಳುವ ಪತಂಗಗಳಂತೆ, ಮೃಗರಾಜನ ಗುಹೆಗೆ ಹೋಗುವ-ಕುರಿಗಳಂತೆ ನಮ್ಮ ಮೇಲೆ ಬರುತ್ತಿದ್ದಾರೆ ಹುಂಬರು. ಕೋಟೆ ದ್ವಾರಗಳನ್ನು ಭದ್ರಪಡಿಸಿ, ದಂಡನಾಯಕರನ್ನು ಇಲ್ಲಿಗೆ ಬರಮಾಡಿ.

ಚಾರ—ಚಿತ್ತ ಪ್ರಭು.

ಪಾಳೆಗಾರ—ಕರಣಿಕರೇ, ನಮ್ಮ ದಂಡನಾಯಕರಿಗೆ ಯುದ್ಧಕ್ಕೆ ಸಿದ್ಧರಾಗಬೇಕೆಂದು ನನ್ನ ಆಜ್ಞೆಯನ್ನು ತಿಳಿಸಿ. ನಾನಿನ್ನು ವಿಶ್ರಾಂತಿ ಮಂದಿರಕ್ಕೆ ಹೊರಡುತ್ತೇನೆ.

(ಹೊರಡುವನು)

ದೃಶ್ಯ--೧೫

(ಸ್ಥಳ : ರಣಭೈರೇಗೌಡರ ಮನೆ)

ರಣಭೈರೇಗೌಡ—(ಪತ್ನಿಯನ್ನು ಕುರಿತು) ಲಕ್ಷ್ಮೀ, ಏಕೆ ಇಂದು ತುಂಬಾ ಚಿಂತೆಯಲ್ಲಿರುವಂತೆ ಕಾಣುತ್ತೀ ?

ಲಕ್ಷ್ಮಮ್ಮ—ಪ್ರಭು, ನಿಮಗೆ ಯುದ್ಧ ಮಾಡೋದು, ರಾಜ್ಯ ಕಟ್ಟೋದು, ನ್ಯಾಯ ತೀರ್ಮಾನ ಮಾಡೋದು--ಇವನ್ನು ಬಿಟ್ಟರೆ ಬೇರೆ ಚಿಂತೆಯೇ ಇಲ್ಲ. ಮನೇ ಕಡೆ ಸ್ವಲ್ಪವಾದರೂ ಗಮನ ಕೊಡುತ್ತಿರುವಿರಾ ?

ರಣಭೈರೇಗೌಡ—ಮನೆಯ ಒಡತಿ, ಲಕ್ಷ್ಮೀದೇವಿ ನೀನಿರುವಾಗ ನನಗೆಂತಹ ಚಿಂತೆ ? ಯಣಮಂಜಿ ಪುತ್ತೂರಿನಲ್ಲಿ ಕೇವಲ ಗ್ರಾಮದ ಹಿರಿಯರಷ್ಟೇ ಆಗಿದ್ದವರು, ಆ ಶಲ್ವನಾಯಕನಿಂದ ಇತ್ತೀಚೆಗೆ ತಾಯ್ನಾಡಿಗೆ ಮರಳಿ, ಕೆಂಪಾಂಬೆ, ಭೈರವೇಶ್ವರ ಕೃಪಾನುಗ್ರಹದಿಂದ ಆವತಿನಾಡ ಪ್ರಭುಗಳಾಗಿದ್ದೇವೆ. ಅಂತಹದರಲ್ಲಿ ನೀನು ಸಂತಸದಿಂದಿರುವುದನ್ನು ಬಿಟ್ಟು ಏಕೆ ಚಿಂತೆ ಮಾಡಬೇಕು ?

ಲಕ್ಷ್ಮಮ್ಮ—ಸರಿ ಹೋಯಿತು ಬಿಡಿ. ಅದೆಲ್ಲಾ ನಿಮ್ಮ ಗಂಡಸರ ಕೆಲಸ. ಹೆಂಗಸರಾದ ನಮಗಿರುವ ಚಿಂತೆಗಳನ್ನು ನೀವು ಅರ್ಥ ಮಾಡಿಕೊಳ್ಳ ಬಲ್ಲಿರಾ ?

ರಣಭೈರೇಗೌಡ—ಲಕ್ಷ್ಮೀ, ಇಷ್ಟೊಂದು ವರ್ಷಗಳಿಂದ, ನನ್ನ ಮನೆ ಬೆಳಗಿದ ದೇವಿ ನೀನು. ನಿನ್ನ ಚಿಂತೆಗೆ ಕಾರಣವೇನು ಎಂಬುದನ್ನು ಹೇಳ ಬಾರದೆ ?

ಲಕ್ಷ್ಮಮ್ಮ—ನಮ್ಮ ಪುತ್ರಿ ದೊಡ್ಡಾಂಬೆ ಮದುವೆಗೆ ಪ್ರಾಪ್ತ ವಯಸ್ಕಳಾಗಿದ್ದಾಳೆ. ಆಕೆಯ ಮದುವೆಯ ಬಗ್ಗೆ ಏನಾದರೂ ಯೋಚಿಸುತ್ತಿದ್ದೀರಾ?

ರಣಭೈರೇಗೌಡ—ನಿಜ ಲಕ್ಷ್ಮೀ. ಅದೇ ಯೋಚನೆ ನನ್ನನ್ನು ಬಹಳ ದಿನಗಳಿಂದ ಕಾಡುತ್ತಿದೆ. ಆದರೆ ದೊಡ್ಡಾಂಬೆಗೆ ಎಲ್ಲಾ ವಿಧದಲ್ಲೂ

ಅನುಗುಣನಾದ ಗಂಡು ಸಿಕ್ಕುವುದೇ ಕಷ್ಟವಾಗಿದೆ. (ಚೆನ್ನನನ್ನು ಕರೆಯುವರು) ಚೆನ್ನಾ, ಚೆನ್ನಾ.

ಚೆನ್ನಾ—(ಪ್ರವೇಶಿಸಿ) ಇದೋ ಬಂದೆ ಬುದ್ಧಿ.

ರಣಭೈರೇಗೌಡ—ಹೋಗಿ ನಾರಾಯಣಶಾಸ್ತ್ರಿಗಳನ್ನು ಕರೆದುಕೊಂಡು ಬಾ.

(ಚೆನ್ನಾ ಹೋಗುವನು)

ರಣಭೈರೇಗೌಡ—ಲಕ್ಷ್ಮೀ, ದೊಡ್ಡಾಂಬೆ ಏನು ಮಾಡುತ್ತಿದ್ದಾಳೆ ?

ಲಕ್ಷ್ಮಮ್ಮ—ದೇವಸ್ಥಾನಕ್ಕೆ ಹೋಗಲು ಸಿದ್ಧಳಾಗುತ್ತಿದ್ದಾಳೆ.

(ಅದೇ ಸಮಯಕ್ಕೆ ಹಣ್ಣು, ಹೂ, ಕಾಯಿ ತುಂಬಿದ ತಟ್ಟೆಯೊಡನೆ ದೊಡ್ಡಾಂಬೆ ಪ್ರವೇಶಿಸಿ, ತಂದೆ ತಾಯಿಯರಿಗೆ ನಮಸ್ಕರಿಸುವಳು)

ದೊಡ್ಡಾಂಬೆ—ಅಪ್ಪಾಜಿ ದೇವಾಲಯಕ್ಕೆ ಹೋಗುತ್ತೇನೆ.

ಲಕ್ಷ್ಮಮ್ಮ—ಹೋಗಿ ಬರುತ್ತೇನೆ ಎಂದು ಹೇಳು ಮಗು.

ದೊಡ್ಡಾಂಬೆ—ಆಮ್ಮಾ, ಈ ಶರೀರ ನಶ್ವರ, ಆತ್ಮ ಮಾತ್ರ ಅಮರ. ಪ್ರಪಂಚದಲ್ಲಿ ಹುಟ್ಟಿದ ಮೇಲೆ, ಒಂದಲ್ಲ ಒಂದು ದಿನ ಈ ನಶ್ವರ ಶರೀರವನ್ನು ತ್ಯಜಿಸಲೇಬೇಕು.

ಲಕ್ಷ್ಮಮ್ಮ—ಇದೇನು ಮಗಳೆ! ನನಗೆ ಅರ್ಥವಾಗದ ವೇದಾಂತವನ್ನು ಹೇಳುತ್ತಿರುವೆ!

ರಣಭೈರೇಗೌಡ—ನಮ್ಮ ತಾಯಿ ನಾರಾಯಣಶಾಸ್ತ್ರಿಗಳ ಪರಮ ಶಿಷ್ಯಳಲ್ಲವೆ? ಅವರು ಈಕೆಗೆ ವೇದ, ಪುರಾಣ, ಉಪನಿಷತ್ತು ಇವುಗಳನ್ನು ಅರೆದು ಕುಡಿಸಿ ಬಿಟ್ಟಿದ್ದಾರೆ.

ದೊಡ್ಡಾಂಬೆ—ಅಮ್ಮ ನೀವು ಬಹುಶಃ ನನ್ನ ಮದುವೆ ವಿಷಯ ಕುರಿತು ಮಾತನಾಡುತ್ತಿರಬಹುದು. ಒಂದು ವೇಳೆ ನಾನು ಮದುವೆಯಾಗಿ ಅತ್ತೆ ಮನೆಗೆ ಹೋದರೆ ನಿಮಗೆ ನೋವಾಗುವುದಿಲ್ಲವೆ?

ಲಕ್ಷ್ಮಮ್ಮ—ಹಾ, ಮಗಳೆ! ನಿನ್ನನ್ನು ಬಿಟ್ಟು ನಾನು ಒಂದು ಕ್ಷಣವೂ ಬದುಕಿರಲಾರೆ.

ರಣಭೈರೇಗೌಡ—ಲಕ್ಷ್ಮೀ, ಮಗಳಿಗೆ ಮದುವೆ ಮಾಡಬೇಕೆಂದು ಈಗ ತಾನೇ ಹೇಳುತ್ತಿದ್ದೆ. ಮತ್ತೆ ಆಕೆಯನ್ನು ಬಿಟ್ಟು ಒಂದು ಕ್ಷಣವೂ ಇರಲಾರೆ ಎಂದು ಹೇಳುತ್ತಿರುವೆ.

ದೊಡ್ಡಾಂಬೆ—ಅಪ್ಪಾಜಿ, ನಾನು ಎಂದೆಂದಿಗೂ ನಿಮ್ಮ ಜತೆಯಲ್ಲಿಯೇ ಇರುವೆ. ನಾನಿನ್ನು ದೇವಸ್ಥಾನಕ್ಕೆ ಹೋಗುವೆನು.

ಲಕ್ಷ್ಮಮ್ಮ—ಬಿಡಿತು ಅನ್ನು, ಮತ್ತೆ ಅದೇ ಮಾತು.

(ನಾರಾಯಣಶಾಸ್ತ್ರಿ ಪ್ರವೇಶ)

ನಾರಾಯಣಶಾಸ್ತ್ರಿ—ದೊಡ್ಡಾಂಬೆ ದೇವಸ್ಥಾನಕ್ಕೆ ಹೊರಟಂತಿದೆ ?

ದೊಡ್ಡಾಂಬೆ—(ಶಾಸ್ತ್ರಿಗಳಿಗೆ ನಮಸ್ಕರಿಸಿ) ಪೂಜ್ಯ ಗುರುಗಳೇ, ನನ್ನ ತಂದೆ-ತಾಯಿಗಳು ನನಗೆ ಆದಷ್ಟು ಬೇಗ ಮದುವೆ ಮಾಡಿ ಅತ್ತೆ ಮನೆಗೆ ಕಳುಹಿಸಬೇಕೆಂದು ಕಾತುರರಾಗಿದ್ದಾರೆ. ನನಗೆ ಮದುವೆ ಇಷ್ಟವಿಲ್ಲ. ನಾನು ಸದಾ ನನ್ನವರ ಜತೆಯಲ್ಲಿಯೇ ಇರಬೇಕೆಂದು ನಿಶ್ಚಯಿಸಿದ್ದೇನೆ. ನಾನಿನ್ನು ಹೊರಡುತ್ತೇನೆ. ನನ್ನ ತಂದೆ-ತಾಯಿಯರಿಗೆ ನೀವು ಸಮಾಧಾನ ಹೇಳಿ. (ಹೋಗುವಳು)

ರಣಭೈರೇಗೌಡರು—ಚೆನ್ನಾ, ಚನ್ನಿ ನೀವು ದೊಡ್ಡಾಂಬೆ ಜತೆಯಲ್ಲಿಯೇ ದೇವಸ್ಥಾನಕ್ಕೆ ಹೋಗಿ. ಮತ್ತೆ ಆಕೆಯ ಜತೆಯಲ್ಲಿಯೇ ಹಿಂತಿರುಗಿ. ಇಂದು ಆಕೆಯ ವರ್ತನೆಯೇ ಏನೋ ಒಂದು ರೀತಿಯಿದೆ, (ಚೆನ್ನ-ಚೆನ್ನಿ ಹೋಗುವರು) (ಗೌಡರು ಶಾಸ್ತ್ರಿಗಳ ಕಡೆ ತಿರುಗಿ) ನೋಡಿದಿರಾ ರಾಯರೇ ! ನಮ್ಮ ದೊಡ್ಡಂಬೆಯ ಹಠವನ್ನು, ನೀವೇ ಆಕೆಗೆ ಸಮಾಧಾನ ಹೇಳಿ, ಆಕೆಗೆ ತಕ್ಕ ವರವನ್ನು ಹುಡುಕಿ.

ನಾರಾಯಣಶಾಸ್ತ್ರಿ—ಆಕೆಗೆ ವರನನ್ನು ಹುಡುಕುವಷ್ಟು ಶಕ್ತಿ ನನಗಿಲ್ಲ. ಪ್ರಭುಗಳೇ.

ರಣಭೈರೇಗೌಡ—ಹಿರಿಯರೂ, ಜ್ಞಾನಿಗಳೂ, ಆಕೆಗೆ ವಿದ್ಯಾಗುರುಗಳೂ ಆದ ನೀವು ಹೇಳುವುದರಲ್ಲಿ ಏನೋ ಗೂಢಾರ್ಥವಿದೆ.

ನಾರಾಯಣಶಾಸ್ತ್ರಿ—ಪ್ರಭೂ, ಆಕೆಗೆ ಸಕಲಶಾಸ್ತ್ರಗಳನ್ನೂ ಕಲಿಸಿರುವುದು ನಿಜ. ಆಕೆ ನನ್ನ ಶಿಷ್ಯಳಾದರೂ, ಆಕೆಯನ್ನು ಅರಿಯಲು ನನಗೆ ಸಾಧ್ಯವಾಗಿಲ್ಲ. ಆಕೆ ದೇವಿಯ ಅಪರಾವತಾರದಂತೆ ನನಗೆ ಕಂಡು ಬರುತ್ತಾಳೆ. ನಿಮ್ಮ ಅನನ್ಯ ಭಕ್ತಿಗೆ ಮೆಚ್ಚಿ, ಶ್ರೀ ಕೆಂಪಾಂಬ ದೇವಿಯೇ ನಿಮಗೆ ಮಗಳಾಗಿ ಹುಟ್ಟಿರುವಂತೆ ನನಗೆ ಭಾಸವಾಗುತ್ತಿದೆ. ನಾನು ಕಂಡಂತೆ, ಆಕೆಗೆ ವರನಾಗತಕ್ಕ ಯೋಗ್ಯ ಗಂಡು ಈ ಸುತ್ತ

ಮುತ್ತ ಯಾವ ಪ್ರಾಂತ್ಯದಲ್ಲೂ ಕಂಡು ಬರುತ್ತಿಲ್ಲ. ಲಕ್ಷ್ಮಮ್ಮನವರೇ, ದೊಡ್ಡಾಂಬೆಯ ಜಾತಕವನ್ನು ತನ್ನಿ, ಪರಿಶೀಲಿಸೋಣ.

(ಲಕ್ಷ್ಮಮ್ಮ ಹೋಗಿ ಜಾತಕವನ್ನು ತಂದು ಕೊಡುವಳು)

ನಾರಾಯಣಶಾಸ್ತ್ರಿ— (ಜಾತಕವನ್ನು ಪರಿಶೀಲಿಸುತ್ತ ಏನೋ ಗುಣಾಕಾರ ಹಾಕುತ್ತಾ) ಲಕ್ಷ್ಮಮ್ಮನವರೇ ನೀವಿನ್ನು ಹೋಗಿ, ನಾನು ಜಾತಕವನ್ನು ಪರೀಕ್ಷಿಸಿ, ಪ್ರಭುಗಳಿಗೆ ಅರಿಕೆ ಮಾಡುತ್ತೇನೆ.

ರಣಭೈರೇಗೌಡ—ದೊಡ್ಡಾಂಬೆಯ ಜಾತಕ ಹೇಗಿದೆ ಶಾಸ್ತ್ರಿಗಳೇ ?

ನಾರಾಯಣಶಾಸ್ತ್ರಿ—ಜಾತಕ ತುಂಬಾ ಪ್ರಶಸ್ತವಾಗಿದೆ ಪ್ರಭು. ಆದರೆ 18 ವರ್ಷ ತುಂಬುತ್ತಲೇ ಪರಿವರ್ತನಾಯೋಗವಿದ್ದಂತೆ ಕಂಡುಬರುತ್ತಿದೆ.

ರಣಭೈರೇಗೌಡ—ದೊಡ್ಡಾಂಬೆಗೆ ನಿನ್ನೆ ತಾನೇ 18 ವರ್ಷ ತುಂಬಿತು. ಪರಿವರ್ತನಾಯೋಗವು ವಿವಾಹಕ್ಕೆ ಅನುಕೂಲವೆ ?

ಚೆನ್ನ-ಚೆನ್ನಿ—(ಏದುಸಿರಿನಿಂದ ಓಡುತ್ತಾ ಬಂದು)ಬುದ್ಧೀ, ಚಿಕ್ಕಮ್ಮಾವ್ರು ಕಾಣ್ತಾ ಇಲ್ಲ.

ರಣಭೈರೇಗೌಡ—ಏನಾಯಿತು, ಸರಿಯಾಗಿ ಹೇಳ್ರೋ.

ಚೆನ್ನ—ಬುದ್ಧೀ ಚಿಕ್ಕಮ್ಮಾವ್ರು ದೇವಸ್ಥಾನದೊಳಗೆ ಹೋದೋರು, ಏಟೊತ್ತಾದರೂ ಈಚೆಗೆ ಬರ್ಲೇ ಇಲ್ಲಾ. ನಾವು ಒಳಗೋಗಿ ನೋಡಿದ್ರೆ, ಆಯವ್ವ ಕಾಣ್ಲೇ ಇಲ್ಲ.

ರಣಭೈರೇಗೌಡ— ನಿಜವಾಗಿ ನೀವು ಒಳಗೆ ಹೋಗಿ ನೋಡಿದಿರಾ ?

ಚೆನ್ನ—ನಿಜ ಹೇಳ್ತಿದೀನಿ ಬುದ್ಧಿ. ನಮ್ಮನ್ನ ಆಚೆ ಇರಾಕ ಹೇಳಿ, ಆ ಯವ್ವಾ ಒಳಗೋದೋರು ಏಟೊತ್ತಾದರೂ ಬರಲೇ ಇಲ್ಲ. ನಾವು ಒಳಗೋಗಿ ನೋಡಿದ್ರೆ ಕಾಣ್ಲೇ ಇಲ್ಲ ಬುದ್ಧೀ. ಎಷ್ಟು ಸಾರಿ ಕೂಗಿದರೂ, ಓ ಎನ್ನಲಿಲ್ಲ. ನಮಗೆ ಭಯ ಆಗಿ ನಿಮುಗ ಹೇಳಾಕ ಬಂದೆವು.

ರಣಭೈರೇಗೌಡ—ಇದೇನು ಆಶ್ಚರ್ಯ ಶಾಸ್ತ್ರಿಗಳೇ ಈ ಚೆನ್ನ ಹೇಳುವುದು ! ನನಗೆ ದಿಕ್ಕು ತೋಚದಂತಾಗಿದೆ. ಬನ್ನಿ, ನಾವೇ ಹೋಗಿ ಖುದ್ದು ಪರೀಕ್ಷಿಸೋಣ.

(ಹೊರಡುವರು)

ದೃಶ್ಯ-೧೬

ಸ್ಥಳ : ರಣಭೈರೇಗೌಡರ ಮನೆ

(ವೀರಣ್ಣಗೌಡರು ಭದ್ರೆಗೌಡರು ಯುದ್ಧದಲ್ಲಿ ಜಯ ಗಳಿಸಿ, ದೊಡ್ಡಾಂಬೆಗಾಗಿ ಬಗೆ ಬಗೆಯ ಅಮೂಲ್ಯ ಆಭರಣಗಳನ್ನು ತರುತ್ತಾರೆ. ಮೋಡ ಕವಿದಂತಿದ್ದ ಮನೆಯನ್ನು ನೋಡಿ)

ವೀರಣ್ಣಗೌಡ—ಅಣ್ಣಾ ಏನಿದು ? ಎಲ್ಲಿ ನೋಡಿದರೂ ಮೌನ ಆವರಿಸಿದೆ. ಯಾರ ಮುಖದಲ್ಲೂ ಗೆಲುವಿಲ್ಲ !

ಭದ್ರೇಗೌಡ—ವೀರಣ್ಣ, ಅಣ್ಣ-ಅತ್ತಿಗೆಯವರು ಕಾಣುತ್ತಿಲ್ಲವಲ್ಲ. ಅವರು ಕ್ಷೇಮದ ಬಗ್ಗೆ ಮೊದಲು ವಿಚಾರಿಸೋಣ.

ವೀರಣ್ಣಗೌಡ—ಯುದ್ಧದಲ್ಲಿ ಗೆದ್ದು ಬಂದ ನಮ್ಮನ್ನು ನೋಡಿ ದೊಡ್ಡಾಂಬೆ ಎಷ್ಟು ಸಂತೋಷ ಪಡಬೇಕಾಗಿತ್ತು, ಈಗ, ಆದರೆ ಆಕೆಯ ಸುಳಿವೇ ಕಾಣುತ್ತಿಲ್ಲವಿಲ್ಲ. ಚೆನ್ನಾ, ಚೆನ್ನಾ ಮನೆಯಲ್ಲಿ ಯಾರೂ ಇಲ್ಲವೆ ? ಎಲ್ಲರೂ ಎಲ್ಲಿ ?

ಚೆನ್ನ—(ಕೈ ಕಟ್ಟಿ ನಿಂತು) ಬುದ್ಧೀ.

ವೀರಣ್ಣಗೌಡ—ಚನ್ನಾ, ಯುದ್ಧದಲ್ಲಿ ಗೆದ್ದ ಸಂತಸದ ಸುದ್ದಿಯನ್ನು ಚಾರರ ಮೂಲಕ ಹೇಳಿ ಕಳುಹಿಸಿದ್ದೆವಲ್ಲ. ಅವರೇನಾದರೂ ಆ ಸುದ್ದಿಯನ್ನು ಮುಟ್ಟಿಸಲಿಲ್ಲವೆ ? ಇಲ್ಲಿ ನೋಡು, ದೊಡ್ಡಾಂಬೆಗಾಗಿ ತಂದಿರುವ ಆಭರಣಗಳನ್ನು ! ಈ ವಜ್ರದ ಹಾರ, ವಜ್ರದ ಬಳೆ, ವಜ್ರದ ಓಲೆ ಇವುಗಳನ್ನು ನೋಡಿ ನಮ್ಮ ದೊಡ್ಡಾಂಬೆ ಸಂತೋಷದಿಂದ ಕುಣಿದಾಡುವುದಿಲ್ಲವೆ ? ಆಕೆಯನ್ನು ಬೇಗ ಕರೆದುಕೊಂಡು ಬಾ.

ಚೆನ್ನ—(ಬಿಕ್ಕಿ ಬಿಕ್ಕಿ ಅಳುತ್ತಾನೆ)

ಭದ್ರೇಗೌಡ—ಚೆನ್ನಾ, ಏಕೆ ಅಳು, ಈ ಸಂತಸದ ಸಮಯದಲ್ಲಿ ? ಧರ್ಮ ಸ್ವರೂಪಿ ಅಣ್ಣನವರಿಗೆ ಶತ್ರುಗಳಿಂದ ಏನಾದರೂ ತೊಂದರೆ

ಸಂಭವಿಸಿತೆ ? ನನ್ನ ಅಣ್ಣನಿಗೆ ತೊಂದರೆ ಮಾಡಿದವರು ಯಾರೇ ಆಗಲಿ, ಅವರ ಶಿವವನ್ನು ತುಂಡರಿಸಿ, ಅಣ್ಣನ ಪಾದದ ಅಡಿದಾವರೆಯಲ್ಲಿ ಅರ್ಪಿಸುವೆನು.

ಚೆನ್ನ—(ಅಳುತ್ತಾ) ಬುದ್ಧೀ, ನಮ್ಮ ದೊಡ್ಡಾಂಬೆ ಇನ್ನಿಲ್ಲ ಬುದ್ಧಿ. ಆ ಯವ್ವ ಕೆಂಪಾಂಬೆಯ ಪಾದ ಸೇರಿಬಿಟ್ಲು.

ವೀರಣ್ಣಗೌಡ—ಏನೆಂದೆ ಚೆನ್ನ ? ನಿನ್ನ ತಲೆ ನೆಟ್ಟಗಿದೆಯೋ ಇಲ್ಲವೋ ? ನಮ್ಮ ದೊಡ್ಡಾಂಬೆ ಬಗ್ಗೆ ಹುಡುಗಾಟ ಆಡಿದರೆ ನಾಲಿಗೆ ಕತ್ತರಿಸಿ ಬಿಟ್ಟೇನು !

ಚೆನ್ನ—ನನ್ನಾಣೆ, ಶಿವನಾಣೆಗೂ ನಿಜ ಬುದ್ಧಿ. ಮೊನ್ನೆ ಶುಕ್ರವಾರ ಆ ಯವ್ವ ದೇವಸ್ಥಾನಕ್ಕೆ ಹೋಗಿ ಅಲ್ಲಿಯೇ ದೇವರಲ್ಲಿ ಐಕ್ಯಳಾದಳು. ಆವತ್ತಿನಿಂದ ದೊಡ್ಡ ಬುದ್ಧಿಯವರು ಹಾಸಿಗೆ ಬಿಟ್ಟು ಏಳ್ಳೇ ಇಲ್ಲ !

ವೀರಣ್ಣಗೌಡ—ತಾಯೆ, ದೊಡ್ಡಾಂಬೆ, ಎಲ್ಲಿಗೆ ಹೋದೆಯಮ್ಮ ? ನಮ್ಮ ಕುಲದೇವತೆ ಕೆಂಪಾಂಬೆ ನಿರ್ದಯಳೇ ಆರಾಧ್ಯ ದೇವ ಭೈರವೇಶ್ವರ ಕ್ರೂರಿಯೇ ನಮ್ಮ ವಂಶದ ಏಕೈಕ ಹೆಣ್ಣು ಕುಡಿಯನ್ನು ಈ ದೇವರುಗಳು ಕಸಿದುಕೊಂಡರೆ ? ಅವರು ದೇವರುಗಳಲ್ಲ. ಕಲ್ಲಿನ ಪ್ರತಿಮೆಗಳಾಗಿ ಮೋಸ ಗೊಳಿಸಿದಾರೆ. ಯುದ್ಧದಲ್ಲಿ ವಿಜಯಗಳಾಗಿ, ವಿಜಯ ಪತಾಕೆಯನ್ನು ಹೊತ್ತು ತಂದ ನಮ್ಮನ್ನು ಸಹಿಸದೆ, ನಾವು ಬರುವುದರೊಳಗೆ, ಆ ನಮ್ಮ ತಾಯಿಯನ್ನು ಇವು ಕಸಿದುಕೊಂಡಿವೆ.

ರಣಭೈರೇಗೌಡ—(ಪ್ರವೇಶಿಸಿ) ದೈವನಿಂದೆ ಮಹಾ ತಪ್ಪು ತಮ್ಮ. ಅವನ ಇಚ್ಛೆಯನ್ನು ಮೀರಿ ಯಾರೂ ನಡೆಯುವಂತಿಲ್ಲ. (ಸೋದರರನ್ನು ತಬ್ಬಿ ಕೊಂಡು ಅಳುವರು) ದೊಡ್ಡಾಂಬೆಯನ್ನು ಕಳೆದುಕೊಂಡ ಮನಸ್ಸು ದುಃಖದಿಂದ ನೊಂದಿತ್ತು. ಮತ್ತೆ ಯುದ್ಧಕ್ಕೆ ಹೋದ ನೀವೇನಾದಿರೋ ಎಂದು ಭಯವು ಒಂದು ಕಡೆ ಮುತ್ತಿತ್ತು. ಸಧ್ಯ, ನಿಮ್ಮನ್ನು ನೋಡಿ, ದೊಡ್ಡಾಂಬೆಯನ್ನು ನೋಡಿದಷ್ಟೇ ಸಂತೋಷವಾಯಿತು. ಹೇಗಾದರೂ ನೀವು ಮಕ್ಕಳ ಸಮಾನರಲ್ಲವೆ ?

ನಾರಾಯಣಶಾಸ್ತ್ರಿ—(ಪ್ರವೇಶಿಸಿ) ಆ ತಾಯಿ ದೊಡ್ಡಾಂಬೆ ಯಾರೂ ಅಲ್ಲ ವೀರಣ್ಣಗೌಡರೆ. ಆಕೆ ಕುಲದೇವತೆಯಾದ ಕೆಂಪಾಂಬೆಯ ಅಪರಾವತಾರ

ಆ ದೇವತೆ ಸದಾ ನಿಮ್ಮ ಜತೆಯಲ್ಲಿಯೇ ಇರುತ್ತಾಳೆ. ಆಕೆಯ ನಾಮಾಂಕಿತದಲ್ಲಿಯೇ ಕೆಂಪೇಗೌಡ, ಕೆಂಪಭೂಪಾಲರೆಂಬ ಹೆಸರುಗಳಿಂದ ನಿಮ್ಮ ಮುಂದಿನ ಪೀಳಿಗೆ ರಾಜ್ಯವಾಳಿ ಇತಿಹಾಸ ಪ್ರಸಿದ್ಧವಾಗುವುದು. ನಿಮ್ಮ ಅತ್ತಿಗೆಯವರ ಸ್ಥಿತಿ ಚಿಂತಾಜನಕವಾಗಿದೆ. ಮೊದಲು ಅವರನ್ನು ಸಂತೈಸಿ. (ಹೊರಡುವರು)

—•—

ದೃಶ್ಯ-೧೭

ಸ್ಥಳ : ಆವತಿ ರಣಭೈರೇಗೌಡರ ಆಸ್ಥಾನ

(ರಣಭೈರೇಗೌಡರು ಸಿಂಹಾಸನಾರೂಢರಾಗಿದ್ದಾರೆ. ಪಕ್ಕದಲ್ಲಿ ಕರಣಿಕರಾದ ಶ್ರೀ ನಾರಾಯಣಶಾಸ್ತ್ರಿಗಳು ಮಂಡಿಸಿದ್ದಾರೆ)

ವಂದಿ ಮಾಗದರು

ವಿಜಯೀ ಭವ । ವಿಜಯೀ ಭವ ।
ಆವತಿನಾಡ ಪ್ರಭುವಿಗೆ ಜಯ ।
ಗೌಡ ಕುಲ ಭೂಷಣರಿಗೆ ಜಯ ।
ಮಧುಗಿರಿ ಮಿಡಿಗೇಸಿ ವಿಜೇತ ಪ್ರಭುಗಳಿಗೆ ಜಯ ।
ಶ್ರೀ ಶ್ರೀ ಶ್ರೀ ರಣಭೈರೇಗೌಡ ಪ್ರಭುಗಳಗೆ ಜಯ ।

ರಣಭೈರೇಗೌಡ—ಕರಣಿಕರೇ ! ದೈವಾನುಗ್ರಹದಿಂದ ನಮಗೆ ಲಭಿಸಿದ ಭೂನಿಧಿಯಲ್ಲಿ ಕಾಲು ಭಾಗವನ್ನು ಸುತ್ತ ಮುತ್ತಲ ರೈತಾಪಿ ಬಂಧುಗಳ ಕ್ಷೇಮಾಭಿವೃದ್ಧಿಗಾಗಿ ವಿನಿಯೋಗಿಸಿ, ಕೆರೆ–ಕಟ್ಟೆಗಳ ದುರಸ್ಥಿತಿಗೆ ಈಗಾಗಲೇ ಏರ್ಪಾಟಾಗಿದೆ. ಆ ಕೆಲಸಗಳು ಮುಂದುವರಿಯಲಿ. ಪ್ರಜೆಗಳ ಕ್ಷೇಮವೇ ನಾಡಿಗೆ ರಕ್ಷೆ.

(ಆ ಸಮಯದಲ್ಲಿ ಮಧುಗಿರಿಯ ಪಾಳೆಗಾರರನ್ನು, ವೀರಣ್ಣ, ಭದ್ರೇಗೌಡರು ಬಂಧಿಸಿ ಆಸ್ಥಾನಕ್ಕೆ ಕರೆತರುತ್ತಾರೆ)

ರಣಭೈರೇಗೌಡ—ತಮ್ಮ ಭದ್ರೇಗೌಡ ತಮ್ಮ ವೀರಣ್ಣಗೌಡ, ಕಡುಗಲಿಗಳಾದ ನೀವು ಮಧುಗಿರಿ, ಮಿಡಿಗೇಸಿಗಳನ್ನು ಗೆದ್ದು, ನಮ್ಮ ವಂಶಕ್ಕೆ ಕೀರ್ತಿಯನ್ನು ತಂದಿರುವಿರಿ. ಆದರೆ ಸೆರೆಯಾದ ಶತ್ರುನಾಯಕನನ್ನು ಗೌರವದಿಂದ ಕಾಣುವುದು ರಾಜಧರ್ಮವಲ್ಲವೆ ? ಮೊದಲು ಆತನ ಸಂಕೋಲೆಗಳನ್ನು ಬಿಚ್ಚಿ, ಮರ್ಯಾದೆಯಿಂದ ವರ್ತಿಸಿ ಸೋದರರೆ !

(ಮಧುಗಿರಿಯ ನಾಯಕನ ಸಂಕೋಲೆಗಳನ್ನು ಬಿಚ್ಚುವರು. ನಾಯಕನು ತಲೆತಗ್ಗಿಸಿ ನಿಲ್ಲುವನು)

ರಣಭೈರೇಗೌಡ—ನಾಯಕರೇ, ನಮ್ಮನ್ನು ಪರದೇಶಿಗಳೆಂದೂ, ನಿರಾಶ್ರಿತರೆಂದೂ ಜರಿದಿರುವಿರಿ. ನಿಮ್ಮ ಮೋಸದ ರಹಸ್ಯ ಇಡೀ ಕನ್ನಡ ಜನತೆಗೆ ಗೊತ್ತಾಗಿದೆ. ನೀವಿನ್ನು ಜನರ ಮುಂದೆ ಹೇಗೆ ತಲೆಯೆತ್ತಿ ನಿಲ್ಲಬಲ್ಲಿರಿ? ಈಗ ನಮ್ಮ ಖೈದಿಯಾಗಿರುವ ನೀವು ಯಾವ ಶಿಕ್ಷೆಯನ್ನು ಅಪೇಕ್ಷಿಸುವಿರಿ ?

ವೀರಣ್ಣಗೌಡ—ಅಣ್ಣಾಜಿ, ಹೊಯ್ಸಳ ಸಾಮ್ರಾಟರಾದ ಶ್ರೀ ವೀರಬಲ್ಲಾಳರ ಕಡೆಯಿಂದ ರಾಯಭಾರಿಯೊಬ್ಬರು ನಿಮ್ಮನ್ನು ನೋಡಲು ಬಂದಿದ್ದಾರೆ.

(ರಣಭೈರೇಗೌಡರು ಧಿಗ್ಗನೆ ಎದ್ದು)

ರಣಭೈರೇಗೌಡ—ಏನು ? ನಮ್ಮ ಹೊಯ್ಸಳ ಸಾಮ್ರಾಟರ ಕಡೆಯಿಂದ ರಾಯಭಾರಿಗಳು ಬಂದಿರುವರೆ ? ಸಕಲ ರಾಜಮರ್ಯಾದೆಗಳಿಂದ ಅವರನ್ನು ಕರೆದು ತನ್ನಿ.

ವೀರಣ್ಣಗೌಡ—ಅಪ್ಪಣೆ, ಅಣ್ಣಾಜಿ !

(ಹೋಗುವನು)

(ರಾಯಭಾರಿಗಳ ಪ್ರವೇಶ)

ರಣಭೈರೇಗೌಡ—ಬನ್ನಿ, ದಯಮಾಡಿ ರಾಯಭಾರಿಗಳೇ ! ನಮ್ಮವರು ನಿಮ್ಮನ್ನು ಆದರದಿಂದ ಕಂಡರೆ ? ಮಹಾಪುರುಷರಾದ ಶ್ರೀ ಹೊಯ್ಸಳೇಶ್ವರ ಸಾಮ್ರಾಟರು ಕ್ಷೇಮವೆ ? ಅವರು ನಿಮ್ಮನ್ನು ನಮ್ಮಲ್ಲಿಗೆ ಕಳುಹಿಸಿದ ವಿಚಾರ ತುಂಬಾ ಸಂತೋಷದ ವಿಷಯ.

ರಾಯಭಾರಿ—ಆವತಿನಾಡ ಪ್ರಭುಗಳೇ, ನಿಮ್ಮ ಸ್ನೇಹ-ಸೌಹಾರ್ದತೆ, ನಿಮ್ಮ ಧರ್ಮಪರತೆಗಳನ್ನು ಕಂಡು ಆನಂದವಾಯಿತು. ನಮ್ಮ ಸಾಮ್ರಾಟರ ಮುತ್ತಜ್ಜರಾದ ವೀರಸೋಮೇಶ್ವರರ ಕಾಲದಲ್ಲಿ, ನಿಮ್ಮ ವಂಶದವರು ಪಾಂಡ್ಯರ ಮೇಲೆ ನಡೆದ ಯುದ್ಧದಲ್ಲಿ ಅಪ್ರತಿಮ ಶೌರ್ಯ-ಸಾಹಸಗಳನ್ನು ತೋರಿದರಂತೆ. ಅದು ಇಂದಿಗೂ ಎಲ್ಲರ ಬಾಯಲ್ಲೂ ಕೇಳಿ ಬರುವ ಮಾತಾಗಿದೆ. ತುಳುನಾಡಿನ ಈ ಶಲ್ವನಾಯಕ, ನೀವಿಲ್ಲಿಗೆ ಬಂದ ಮೇಲೆ, ನಿಮಗೆ ಕೊಟ್ಟ ತೊಂದರೆ, ಕಿರುಕುಳಗಳ ಬಗ್ಗೆ ವಿವರವಾದ ವರದಿಗಳು ನಮ್ಮ ಸಾಮ್ರಾಟರಿಗೆ ಬಂದಿವೆ.

ರಣಭೈರೇಗೌಡ—ಅಖಿಲ ಕರ್ನಾಟಕದ ಏಕೈಕ ಸಾಮ್ರಾಟರಾದ ಶ್ರೀ ವೀರ ಬಲ್ಲಾಳರನ್ನು ನೋಡುವ ಸಂಯೋಗ ನಮ್ಮಗಿನ್ನೂ ಒದಗಿ ಬರಲಿಲ್ಲ. ರಾಯಭಾರಿಗಳೇ ! ನಾನು ನನ್ನ ಸಹೋದರರು ಅವರ ಆಜ್ಞೆಯನ್ನು ಪಾಲಿಸಲು ಸದಾ ಸಿದ್ಧರಿದ್ದೇವೆ.

ರಾಯಭಾರಿ—ಸಾಮ್ರಾಟರ ಮೇಲೆ ನೀವಿಟ್ಟಿರುವ ಭಕ್ತಿ-ಗೌರವಗಳು ಶ್ಲಾಘನೀಯ. ನಮ್ಮ ಸಾಮ್ರಾಟರು ನಿಮ್ಮ ಬಗ್ಗೆ ಅತಿ ಹೆಚ್ಚಿನ ಮೆಚ್ಚಿಗೆಯನ್ನೂ ವ್ಯಕ್ತ ಪಡಿಸಿರುತ್ತಾರೆ. ಅಲ್ಲದೆ ಅವರು ನಿಮಗೊಂದು ಸಂದೇಶವನ್ನೂ ಕಳುಹಿಸಿದ್ದಾರೆ.

ರಣಭೈರೇಗೌಡ—ಸಾಮ್ರಾಟರ ದಿವ್ಯ ಸಂದೇಶವನ್ನು ನಾವು ವಿನಮ್ರತೆಯಿಂದ ಸ್ವೀಕರಿಸುತ್ತೇವೆ. ಅದನ್ನು ದಯವಿಟ್ಟು ತಿಳಿಸಿ.

ರಾಯಭಾರಿ—ದೆಹಲಿ ಸುಲ್ತಾನರ ದಾಳಿಗೆ ಸಿಕ್ಕ ಸಮಗ್ರ ಆರ್ಯಾವರ್ತ ನುಚ್ಚು ನೂರಾಯಿತು, ಮಹಾ ಸಾಮ್ರಾಜ್ಯಗಳೆನಿಸಿದ ದೇವಗಿರಿ, ವಾರಂಗಲ್, ಮಧುರೆ, ದೋರ ಸಮುದ್ರಗಳು ಪತನಗೊಂಡವು. ಸಾಮ್ರಾಟರು ಸ್ವಶಕ್ತಿಯಿಂದ ಕರ್ನಾಟಕವನ್ನು ರಕ್ಷಿಸಿದರು. ಎಂಭತ್ತು ವರ್ಷಗಳ ವಯೋವೃದ್ಧರಾದ ಅವರು ಕನ್ನಡ ಸಾಮ್ರಾಜ್ಯ ರಕ್ಷಣಾ ಹೊಣೆಯನ್ನು ವೀರರಾದ ಹರಿಹರ, ಬುಕ್ಕರಿಗೆ ವಹಿಸಿದ್ದಾರೆ. ಆದ್ದರಿಂದ ಅವರಿಂದ ನಿರ್ಮಾಣಗೊಂಡಿರುವ ವಿಜಯನಗರ ಸಾಮ್ರಾಜ್ಯಕ್ಕೆ ನೀವು ಮಹಾ ಮಾಂಡಲಿಕರಾಗಿದ್ದು ನೀವು ಅವರಿಗೆ ಸೇವೆ ಸಲ್ಲಿಸಬೇಕು.

ರಣಭೈರೇಗೌಡ—ರಾಯಭಾರಿಗಳೇ ಭಾರತೀಯರಲ್ಲಿ ರಾಷ್ಟ್ರಾಭಿಮಾನ, ಐಕ್ಯತೆಗಳಿಲ್ಲದೆ, ನಮ್ಮ ನಮ್ಮಲ್ಲಿ ಕಚ್ಚಾಟವಾಗಿ ರಾಷ್ಟ್ರವು ಪರಾಧೀನವಾಯಿತು. ನಮ್ಮ ಸಾಮ್ರಾಟರ ಸಂದೇಶ ನಮಗೆ ದಿವ್ಯ ಸಂದೇಶ. ನಮ್ಮ ಗೌಡ ಕುಲದ ಶರೀರದಲ್ಲಿ ಕೊನೆಯ ತೊಟ್ಟು ರಕ್ತವಿರುವವರೆಗೂ ಕನ್ನಡ ನಾಡನ್ನು ಪರಕೀಯರಿಂದ ರಕ್ಷಿಸುತ್ತೇವೆ, ವಿಜಯನಗರ ಸಾಮ್ರಾಜ್ಯಕ್ಕೆ ಪ್ರಾಮಾಣಿಕ ಸೇವೆಯನ್ನು ಸಲ್ಲಿಸುತ್ತೇವೆಂದು ಕುಲದೇವತೆ ಕೆಂಪಾಂಬ, ಕುಲದೇವರಾದ ಶ್ರೀ ಭೈರವೇಶ್ವರರ ಮೇಲೆ ಆಣೆ ಇಟ್ಟು ಸಂಕಲ್ಪ ಮಾಡುತ್ತೇವೆ.

ರಾಯಭಾರಿ—ಗಂಗರಸರ ರಾಜರಕ್ತ ನಿಮ್ಮಲ್ಲಿ ಹರಿಯುತ್ತಿರುವುದರಿಂದಲೇ ನಿಮ್ಮಲ್ಲಿ ಈ ವೀರಾವೇಶದ ನುಡಿಗಳು ಉಕ್ಕಿ ಹೊರ ಹೊಮ್ಮುತ್ತಿರುವುದು. ಸಾಮ್ರಾಟರು ಕಳುಹಿಸಿರುವ ಈ ರಾಜ ಲಾಂಛನಗಳನ್ನು ಉತ್ತರ, ಪೂರ್ವ ಕನ್ನಡ ನಾಡಿನ ಗಡಿಗಳನ್ನು ಅಧೀನ ಪಡಿಸಿಕೊಂಡು, ಮಹಾ ಮಾಂಡಲಿಕರಾಗಿ ಆಳ್ವಿಕೆಯನ್ನು ಮುಂದುವರಿಸಿ.

(ರಾಯಭಾರಿ, ಒಂದು ತಟ್ಟೆಯಲ್ಲಿ ಖಡ್ಗ, ಪೇಟ, ಸೊಂಟ ಪಟ್ಟಿಗಳನ್ನು ರಾಯಸದೊಂದಿಗೆ ರಣಭೈರೇಗೌಡರಿಗೆ ಕೊಡುವನು, ಗೌಡರು ಅವುಗಳನ್ನು ಸ್ವೀಕರಿಸಿ)

ರಣಭೈರೇಗೌಡ—ಸಾಮ್ರಾಟರ ಕೃಪಾನುಗ್ರಹಕ್ಕೆ ಇಷ್ಟು ಬೇಗ ಪಾತ್ರರಾದ ನಾವು ನಿಜವಾಗಿಯೂ ಧನ್ಯರು. ಇದು ನಮ್ಮ ಭಾಗ್ಯ.

ರಾಯಭಾರಿ—ನಾನಿನ್ನು ಹೊರಡುತ್ತೇನೆ. ಸಾಮ್ರಾಟರ ಸಂದೇಶಗಳನ್ನು ಇನ್ನೂ ಅನೇಕ ಮಾಂಡಲೀಕರಿಗೆ ತಲುಪಿಸಬೇಕಾಗಿದೆ.

ರಣಭೈರೇಗೌಡ—ತಮ್ಮಂದಿರೇ, ರಾಯಭಾರಿಗಳನ್ನು ಬೀಳ್ಕೊಡಲು ಸಿದ್ಧತೆಗಳನ್ನು ಮಾಡಿ.

(ಭದ್ರೇಗೌಡರು, ವೀರಣ್ಣಗೌಡರು ರಾಯಭಾರಿಗಳ ಸಮೇತ ಹೊರಡುವರು)

ರಣಭೈರೇಗೌಡ—(ಮಾರನಾಯಕನ ಕಡೆ ತಿರುಗಿ) ಈಗ ಹೇಳಿ ನಾಯಕರೇ ನಿಮ್ಮ ನಿರ್ಧಾರವನ್ನು.

ಮಾರನಾಯಕ—ರಣಭೈರೇಗೌಡರೆ, ನೀವು ವೀರಾಗ್ರಣಿಗಳು ಮಾತ್ರವಲ್ಲದೆ ಧರ್ಮಮೂರ್ತಿಗಳೂ ಆಗಿರುವಿರಿ. ಇಲ್ಲಿಯುವರೆಗೆ ನಿಮ್ಮ ಹೆಸರು ಮತ್ತು ಗುಣಗಳನ್ನು ಕೇಳಿದ್ದೆ. ಇಂದು ನಿಮ್ಮನ್ನು ಪ್ರತ್ಯಕ್ಷ ನೋಡಿದೆ. ಹೊಯ್ಸಳ ಸಾಮ್ರಾಟರ ಪ್ರೀತಿ ಪಾತ್ರರೆಂದು ಗೊತ್ತಿರಲಿಲ್ಲ. ನನ್ನ ಪ್ರಭುವಾದ ಹಿರೇಗೌಡರಿಗೆ ಮೋಸ ಮಾಡಿದ್ದಕ್ಕೆ ಫಲವಾಗಿ ನನ್ನವರನ್ನು, ಸರ್ವಸ್ವವನ್ನೂ ಕಳೆದುಕೊಂಡೆ. ನನಗೆ ಜೀವನದಲ್ಲಿ-ಯಾವ ಆಸೆಯೂ ಇಲ್ಲ. ಒಂದು ಜತೆ ಕಾಷಾಯ ವಸ್ತ್ರಗಳನ್ನು ಕೊಟ್ಟರೆ, ಅವನ್ನು ಧರಿಸಿ, ತೀರ್ಥಯಾತ್ರೆ-ಕೈಗೊಂಡು ಪಾಪ ಪರಿಹಾರ ಮಾಡಿಕೊಳ್ಳುತ್ತೇನೆ.

(ತೆರೆ ಬೀಳುವುದು)

———————

ದೃಶ್ಯ–೧೮

ಬೀದಿ ದೃಶ್ಯ

(ರಣಭೈರೇಗೌಡರು–ನಾರಾಯಣಶಾಸ್ತ್ರಿಗಳು ಗೌಡರ ಆಲೋಚನಾ ಮಂದಿರದ ಕಡೆ ಹೋಗುತ್ತಿರುತ್ತಾರೆ)

ರಣಭೈರೇಗೌಡ—ಶಾಸ್ತ್ರಿಗಳೇ, ನಿಮ್ಮಲ್ಲಿ ಒಂದು ಮಹತ್ವ ವಿಚಾರವನ್ನು ಕುರಿತು ಮಾತನಾಡಬೇಕಾಗಿದೆ.

ನಾರಾಯಣಶಾಸ್ತ್ರಿ—ಆಗಬಹುದು ಪ್ರಭುಗಳೇ !

ರಣಭೈರೇಗೌಡ—ಹೊಯ್ಸಳೇಶ್ವರರಿಂದ ಬಂದ ಸಂದೇಶದ ನಂತರ ಒಂದು ನಿರ್ಧಾರಕ್ಕೆ ಬಂದಿದ್ದೇನೆ.

ನಾರಾಯಣಶಾಸ್ತ್ರಿ—ತಮ್ಮ ನಿರ್ಧಾರವೇನೆಂಬುದನ್ನು ತಿಳಿಯಬಹುದೆ ?

ರಣಭೈರೇಗೌಡ—ಸಾಮ್ರಾಟರ ಆದೇಶದಂತೆ ನಮ್ಮ ಪ್ರದೇಶಗಳು ಸುಭದ್ರವಾಗಿರಲು, ನಮ್ಮ ಅಧೀನದ ದುರ್ಗಗಳನ್ನು ಬಲಪಡಿಸಿ, ನಮ್ಮ ಪ್ರಾಂತ್ಯಗಳನ್ನು ನನ್ನ ತಮ್ಮಂದಿರಿಗೆ ಹಂಚಿ, ಅವುಗಳನ್ನು ಅವರು ದಕ್ಷತೆ, ಪ್ರಾಮಾಣಿಕತೆಗಳಿಂದ ಪಾಲಿಸುವ ಏರ್ಪಾಟನ್ನು ಮಾಡುವುದು ಒಳ್ಳೆಯದೆಂದು ನಿರ್ಧರಿಸಿದ್ದೇನೆ.

ನಾರಾಯಣಶಾಸ್ತ್ರಿ—ಘನ ಉದ್ದೇಶದಿಂದ ಕೂಡಿರುವ ನಿಮ್ಮ ಈ ಅಭಿಪ್ರಾಯವನ್ನು ನಿಮ್ಮ ತಮ್ಮಂದಿರು ಒಪ್ಪುವರೇ ಎಂಬುದು ನಮ್ಮ ಮುಂದಿರುವ ಪ್ರಶ್ನೆ ಪ್ರಭು !

ರಣಭೈರೇಗೌಡ—ನನ್ನ ತಮ್ಮಂದಿರು ಏನು ಎಂಬುದು ನನಗೆ ಚೆನ್ನಾಗಿ ಗೊತ್ತು ಶಾಸ್ತ್ರಿಗಳೇ. ಅಣ್ಣನ ಮಾತನ್ನು ಎಂದಿಗೂ ನಿರಾಕರಿಸುವುರಲ್ಲ ಅವರು. ಅವರು ಸಹೃದಯರು, ಭ್ರಾತೃ ಭಕ್ತಿಯುಳ್ಳವರು. ಈ ವಿಚಾರವನ್ನು ಮುಂದಿನ ಸಭೆಯಲ್ಲಿ ಇಡಿ, ಒಟ್ಟಿಗೆ ಸಮಾಲೋಚನೆ ಮಾಡೋಣ.

ನಾರಾಯಣಶಾಸ್ತ್ರಿ—ತಮ್ಮ ಚಿತ್ತದಂತೆಯೇ ನಡೆಯುತ್ತೇನೆ.

ರಣಭೈರೇಗೌಡ—ಶಾಸ್ತ್ರಿಗಳೇ, ಮಧುಗಿರಿ, ಮಿಡಿಗೇಸಿಯ ಯುದ್ಧಗಳಲ್ಲಿ ಹೋರಾಡಿ ಮಡಿದ ವೀರರ ಕುಟುಂಬಗಳಿಗೆ ಕೆಲವು ಗ್ರಾಮಗಳನ್ನು ಜಹಗೀರುಗಳಾಗಿ ಕೊಡುವ ಏರ್ಪಾಟನ್ನೂ ಮಾಡಿ !

ನಾರಾಯಣಶಾಸ್ತ್ರಿ—ಅವುಗಳನ್ನು ತಾಮ್ರ ಪತ್ರಗಳಲ್ಲಿ ಬರೆಯಿಸಿ ಕೊಡೋಣ ಪ್ರಭುಗಳೇ !

ರಣಭೈರೇಗೌಡ—ನಿಮ್ಮ ಸಲಹೆ ತುಂಬಾ ಸೂಕ್ತವಾಗಿದೆ. ಹಾಗೆಯೆ ಇನ್ನೊಂದು ಯೋಚನೆ, ನಮ್ಮ ಆವತಿ ನಾಡನ್ನು ಯಲಹಂಕ ಮತ್ತು ಇನ್ನೂ ದಕ್ಷಿಣಕ್ಕೆ ವಿಸ್ತರಿಸಬೇಕೆಂದಿದ್ದೇನೆ.

ನಾರಾಯಣಶಾಸ್ತ್ರಿ—ತಾವು ಹೇಳಿದ ಪ್ರದೇಶ ವಿಸ್ತಾರವಾದ, ಫಲವತ್ತಾದ ಬಯಲು ಪ್ರದೇಶವಾಗಿದ್ದು ರಾಜ್ಯ ವಿಸ್ತರಣೆಗೆ ತುಂಬಾ ಉತ್ತಮ ವಾಗಿದೆ ಪ್ರಭುಗಳೆ.

ರಣಭೈರೇಗೌಡ—ಆ ಪ್ರದೇಶಗಳ ಕಡೆ ಹೋಗಿ ಬರಲು ಒಂದು ಶುಭ ಮುಹೂರ್ತವನ್ನು ನಿರೀಕ್ಷಿಸೋಣ. ನಾಳೆ ಕಾರ್ಯಗಳ ಏರ್ಪಾಟನ್ನು ಮರೆಯದಿರಿ.

(ನಿರ್ಗಮಿಸುವರು)

ದೃಶ್ಯ-೧೯

(ರಣಭೈರೇಗೌಡರ ಆಸ್ಥಾನದಲ್ಲಿ ಸಭೆ ಸೇರಿದೆ)

(ರಣಭೈರೇಗೌಡರು, ಅವರ ತಮ್ಮಂದಿರೂ, ನಾರಾಯಣಶಾಸ್ತ್ರಿಗಳು ತಮ್ಮ ಸ್ಥಾನಗಳಲ್ಲಿ ಉಪಸ್ಥಿತರಾಗಿರುತ್ತಾರೆ.)

ರಣಭೈರೇಗೌಡ—ಕರಣಿಕರೇ, ನಮ್ಮ ಇಂದಿನ ಸಭೆಯ ಮುಖ್ಯ ಉದ್ದೇಶವನ್ನೂ, ನಡೆಯಬೇಕಾದ ಕಾರ್ಯಕ್ರಮಗಳ ವಿಚಾರವನ್ನು ಸಭಿಕರ ಮುಂದೆ ವಿವರಿಸಿ.

ನಾರಾಯಣಶಾಸ್ತ್ರಿ—(ಎದ್ದು ನಿಂತು ಸಭಿಕರಿಗೆ ನಮಿಸಿ, ರಣಭೈರೇಗೌಡರ ಶಾಸನವನ್ನು ಓದುವರು.) ಇತ್ತೀಚೆಗೆ ನಡೆದ ಮಧುಗಿರಿ, ಮಿಡಿಗೇಸಿ ಯುದ್ಧಗಳಲ್ಲಿ ವೀರಾವೇಶದಿಂದ ಹೋರಾಡಿ ಮಡಿದ ವೀರದಳಪತಿಗಳಾಗಿದ್ದ ಬಚ್ಚೇಗೌಡ, ಭೈರೇಗೌಡ, ವೆಂಕಟೇಗೌಡ, ರಂಗೇಗೌಡ, ಸುಬ್ಬರಾಯಗೌಡ ಹಾಗೂ ವೆಂಕಟೇಗೌಡರು—ಈ ಜನರ ಕುಟುಂಬಗಳಿಗೆ ತಲಾ ಒಂದು ಗ್ರಾಮದಂತೆ ಜಹಗೀರು ಇನಾಮಿಯನ್ನು ಕೊಡಲಾಗಿದೆ.

ರಣಭೈರೇಗೌಡ—(ಮಧ್ಯೆ) ಪ್ರಿಯ ಸೋದರರೇ ಈ ನನ್ನ ಆಜ್ಞಾಪನೆ ತಮಗೆ ಸಮ್ಮತವೆ ?

ವೀರಣ್ಣಗೌಡ—ಅಣ್ಣಾ, ಧರ್ಮಸ್ವರೂಪಿಗಳಾದ ತಾವು ಮಾಡುವ ಪ್ರತಿಯೊಂದು ಕಾರ್ಯವೂ ನಮಗೆ ಹರ್ಷದಾಯಕ. ಮಡಿದ ವೀರರ ಆತ್ಮಕ್ಕೆ ಇದು ತೃಪ್ತಿಕರವಾದ ಕಾರ್ಯ.

ರಣಭೈರೇಗೌಡ—ಕರಣಿಕರೇ, ನನ್ನ ಎರಡನೇ ನಿರ್ಧಾರವನ್ನು ಸಭೆಯ ಮುಂದೆ ಇಡಿ.

ನಾರಾಯಣಶಾಸ್ತ್ರಿ—ಆವತಿನಾಡ ಧುರ್ವಪ್ರಭುಗಳಾದ ಶ್ರೀ ರಣಭೈರೇಗೌಡರು, ಹೊಯ್ಸಳೇಶ್ವರರ ಸಂದೇಶವನ್ನು ಪರಿಗಣಿಸಿ, ತಮ್ಮ ಸ್ವಾಧೀನದಲ್ಲಿರುವ ಪ್ರದೇಶಗಳನ್ನು, ಸುಭದ್ರ ಆಡಳಿತ ಹಾಗೂ

ಕಾರ್ಯ ಹಂಚಿಕೆಯ ದೃಷ್ಟಿಯಿಂದ ತಮ್ಮ ತಮ್ಮಂದಿರಲ್ಲಿ ಈ ರೀತಿ ಹಂಚಿರುತ್ತಾರೆ—

ಶ್ರೀ ರಣಭೈರೇಗೌಡರು—ಯಲಹಂಕ ನಾಡನ್ನು ಪಾಲಿಸುವುದು
ಗಿಡ್ಡೇಗೌಡರಿಗೆ—ಮುಳಬಾಗಿಲು.
ಭದ್ರೇಗೌಡರಿಗೆ—ಮಿಡಿಗೇಸಿ
ವೀರಣ್ಣಗೌಡರಿಗೆ—ಮಧುಗಿರಿ
ಮುತ್ತೇಗೌಡರಿಗೆ—ಹೊಸಕೋಟೆ
ಸಿದ್ದೇಗೌಡರಿಗೆ—ಕೋಲಾರ
ತಮ್ಮೇಗೌಡರಿಗೆ—ಕುಣಿಗಲ್‌ಗಳನ್ನು ಹಂಚಲಾಗಿದೆ,

ಈ ಪ್ರಾಂತ್ಯಗಳ ಅಧಿಕಾರಗಳನ್ನು ಸಹೋದರರು ಈ ಕೂಡಲೆ ವಹಿಸಿಕೊಂಡು, ಅಲ್ಲಿನ ನಾಡಪ್ರಭುಗಳಾಗಿ, ದಾಯಾದಿ ಮಾತ್ಸರ್ಯಗಳಿಲ್ಲದೆ ಪ್ರೇಮ, ಸೌಹಾರ್ದತೆಗಳಿಂದ ನಡೆದುಕೊಂಡು, ಗೌಡರ ಕುಲಕ್ಕೆ ಕೀರ್ತಿ ತರಬೇಕೆಂದು ಕೋರಿ ಅವರಿಗೆ ಆಶೀರ್ವಾದ ನೀಡಿರುತ್ತಾರೆ. ಇದು ಸಭೆಯಲ್ಲಿ ಸೇರಿರುವ ಸಕಲರಿಗೂ ಸಮ್ಮತವೆಂದು ಅವರು ಭಾವಸುತ್ತಾರೆ.

(ಸಭೆಯೆಲ್ಲಾ ಆಗಬಹುದು ಸ್ವಾಗತಾರ್ಹ ಎನ್ನುತ್ತಿರಲು, ತಮ್ಮಂದಿರೆಲ್ಲಾ ಎದ್ದು ಸಭಿಕರಿಗೆ ವಂದಿಸಿ, ಅಣ್ಣ ರಣಭೈರೇಗೌಡರ ಪಾದಗಳಿಗೆ ಪ್ರಣಾಮ ಸಲ್ಲಿಸುತ್ತಾರೆ)

ಪುರೋಹಿತರು—ಜೈ ಕೆಂಪಾಂಬ, ಜೈ ಭೈರವೇಶ್ವರ, ಜಯಹೇ ಕರ್ನಾಟಕ ಮಾತೆ (ಎಂದು ಜಯ ಘೋಷಣೆ ಮಾಡುತ್ತಾರೆ.)

॥ ಇತಿ ಶುಭಮಸ್ತು ॥

॥ ಸಮಾಪ್ತಿ ॥

ಮೊದಲನೆ ಅಂಕಪರದೆ ಒಳಗೆ ಹಾಡುವ ಹಾಡು

ಪ್ರಾರ್ಥನೆ

ಪ ॥ ನಮೋ ನಮೋ ನಟರಾಜಾ –3
ನಮೋ ನಮೋ ನಟರಾಜಾ ಓಂ
ನಮೋ ನಮೋ ನಟರಾಜಾ
ನಮೋ ನಿವಾರಣ ತರುಣ ಶರಣ ಜನ
ಭರಣ – ೭
ನಮೋ ದೇವಿಗಣ ವಿನುತ ದನುಜ ಮದ
ಹರಣ – ೭
ನಮೋ ಪ್ರಮಥ ಪರಿಪಾಲನಾ
ನಮೋ ನಿರುತ ನಿರಂಜನ
ನಮೋ ಭಕ್ತ ಜನ ಪಾಲನಾ – ೭
ನಮೋ ದೀನಾದನಾ – ೭
॥ ನಮೋ ॥

ಮೊದಲನೆ ಅಂಕಪರದೆ ಒಳಗೆ ೩ನೇ ಹಾಡು

ನಮ್ಮಯ ನಾಡು । ಸೊಗಸಿನ ಬೀಡು ॥ ಇದುವೆ ಕನ್ನಡ ನಾಡು ॥
ರನ್ನ ಪಂಪ । ಪಂಡಿತರು ॥ ಮೆರೆದು ನಲಿದ ನಾಡು ॥
ಶಿಲ್ಪಿ ಜಕಣಚಾರ್ಯರೆಲ್ಲ । ಕಡೆದ ಕಲೆಯು ಗೂಡು ॥ ನಲ್ಮೆಯ ನಾಡು ॥
ಹಕ್ಕ ಬುಕ್ಕರಾಳಿ । ಮೆರೆದ । ಹಂಪೆಯ ಬೀಡು ॥
ವಿಜಯಧ್ವಜ ಹಾರಿಸಿದ । ವಿಜಯನಗರ ನಾಡು ॥
ವಿದ್ಯಾರಣ್ಯ ವೀರಗುರುವು । ಕಟ್ಟಿ ನಲಿದ ನಾಡು ॥
ನಮ್ಮ ಮೇಧಾವಿಗಳ ತೌರೂರೆನಿಸಿದ ಬೆಂಗಳೂರ ಪಡೆದ ನಲ್ಮೆಯ ನಾಡು ॥
ಕರ್ನಾಟಕ ಕೀರ್ತಿ ಕಳಶ । ಶಾಂತಿಯ ಊರು ಬೆಂಗಳೂರು ॥
ಬೆಂಗಳೂರು ಭಾಗ್ಯಲಕ್ಷ್ಮಿ ಬೆಳಕು ಚೆಲ್ಲಿದವರ ನಾಡು ॥

ಮೂರನೆಯ ದೃಶ್ಯಗಲ್ಲಿ ದೊಡ್ಡಾಂಬೆ ಹಾಡುವ ಹಾಡು

ನಮಿಪೆ ನಿನಗೆ ಹರನ ರಾಣಿ । ಪರಮ ಕಲ್ಯಾಣಿ ದಾಕ್ಷಾಯಣಿ ॥ ನಮಿ ॥
ಸುರನ ರಕ್ಷಕಿ ಉರಗವೇಣಿ । ಭರದಿ ನೀಡು ವರವ ಕರುಣಾಪಾಣಿ ॥ ನಮಿ ॥
ಅದಿಶಕ್ತಿ ಅಮರ ವಿನುತೆ । ಮೋದ ದಾಯಕಿ ।
ಸಾಧು ಶೀಲೆ ಸಂಪದ ದಾಯಕಿ ॥ ಸರ್ವ ವಿನುತೆ ।
ಶಾಂಭವೀ ಶುಭ ವೀದು ನಮಿಪೆ ನಿನಗೆ ಹರನ ರಾಣಿ ।
ಪರಮ ಕಲ್ಯಾಣಿ । ದಾಕ್ಷಾಯಿಣೀ ।

(ದೃಶ್ಯ ೯. ದೊಡ್ಡಾಂಬೆ ನದಿಯ ದಡದಲ್ಲಿ ನಿಂತು ಪ್ರವಾಹ ತುಂಬಿ ಹರಿಯುತ್ತಿದ್ದ ಪಾಲಾರ್ ನದಿ ಅಂಚಿನಲ್ಲಿ ನೀರಿನಲ್ಲಿ ಇಳಿದು, ಕೈಬೊಗಸೆಯಲ್ಲಿ ತನ್ನ ಓಲೆಯನ್ನು ಹಿಡಿದು)

ದೇವೀ ಕ್ಷೀರ ಮಾತೆ, ಎನ್ನ ಮೊರೆಯ ನಾಲಿಸು ।
ಎನ್ನೀ ಪ್ರಾಣ, ನಿನಗೆ ಅರ್ಪಣೆ, ಕರುಣೆಯಿಂದ ಕಾಪಾಡು । ॥ ದೇ ॥
ದ್ವಾಪರದಲ್ಲಿ ವಸು ದೇವನಿಗೆ ಒಲಿದಂತೆ, ದಾರಿ ನೀಡು ।
ನನ್ನವರ ರಕ್ಷಿಸಿ, ಮುಂದಿನ ದಡವ, ಮುಟ್ಟಿಸು ಮಾತೆ ॥ ॥ ದೇ ॥
ಎಂದು ಪ್ರಾರ್ಥಿಸುತ್ತ ಪಾಲಾರ್ ನದಿಯಲ್ಲಿ ಓಲೆಯನ್ನು ಬಿಡುವಳು.

ರೋಡು ಸೀನರಿ

ಚೆನ್ನಿ : ಚೊಕ್ಕ ಚಿನ್ನ ನನ್ನ ಚೆನ್ನ ।
ಮುತ್ತು ರನ್ನ ನನ್ನ ಚೆನ್ನ ।
ಬಂಗಾರ ಗಟ್ಟಿಯಂಥಾ ನನ್ನ ಚೆನ್ನ ।
ಒಳ್ಳೆ ಬಂಗಾರ ಗಟ್ಟಿಯಂತೆ ನನ್ನ ಚೆನ್ನ ॥

ಚೆನ್ನ : ಬೆಳ್ಳಿ ಬಂಗಾರದಲ್ಲಿ । ಒಳ್ಳೆ ಒಳ್ಳೆ ಹರಳಿನಲ್ಲಿ ।
ಕೊಳ್ಳಿಗೆ ಮಾಡಿಸ್ತೀನಿ ಸರವ ಚೆನ್ನಿ ।
ನಿನ್ನ ಕೊಳ್ಳಿಗೆ ಸರವ ಚೆನ್ನಿ ॥

ಚೆನ್ನಿ : ಬೆಳ್ಳಿ ಬಂಗಾರಕ್ಕೆಲ್ಲಾ ಆಸೆ ಪಡುವ ಹೆಣ್ಣು ಇವಳಲ್ಲ ।
ಬಯಸಿ ಬದುಕಿದೆ ನಿನಗಾಗಿ ಚೆನ್ನ ।

ಚೆನ್ನ : ಕಾಯ್ದು ಕಾಣವ್ವ ನಿನ್ನಾಣೆ ।
ನಮ್ಮ ಕೆಂಪಾಂಬೆ ಭಯದಿಂದ ಕಂಡೇನೇ ॥

ಇಬ್ಬರು: ನನ್ನ ನಿನ್ನ ಜೀವನ ಜೋಡಿ । ಬಂಗಾರದಂಥ ಬಾಳ್ವೆ ಮಾಡಿ ।
ಚೆನ್ನ ಸಂಸಾರ ಸವಿಯು ನೋಡಿ ।
ಮಿಗೆ ಸಂತೋಷದಿಂ ಕೂಡಿ ಬಾಳುವ ಬಾ ॥
ಮಿಗೆ ಸಂತೋಷದಿಂ ಕೂಡಿ ಬಾಳುವ ಬಾ ॥

(ಕಡೆಯಲ್ಲಿ ಎಲ್ಲರೂ ಹಾಡುವರು)

ಜಯ ಜಯ ಸುಗುಣಾಕರ, ಕರುಣಾಕರ ॥ ದೇವ ॥
ನಟರ ಸೂತ್ರಧಾರಿ, ನಟಸಾರ್ವಭೌಮ ।
ನಿನ್ನ ಲೀಲೆಯಲ್ಲಿ ಸರ್ವರ ನಲಿಸಿ, ನಲಿವೆ ।
ನಾಟ್ಯ ನಘನ ತೇಜ, ಕರುಣಾಕರ ॥ ॥ ದೇವ ॥
ರಂಗಭೂಮಿ ಕರ್ತ, ರಂಗನಾಡ ನಿನಗೆ ವಂದಿಪೆವೋ ।
ಶಾಂತಿ ಸುಖವ ನೀಡಿ, ವಿಶ್ವ ಶಾಂತಿ ಕಾಯೋ । ಕರುಣಾಕರ ದೇವ ।
ಜಯ ಜಯ ಸುಗುಣಾಕರ ॥ ದೇವ ॥
ಕರ್ನಾಟಕ ಸರ್ವಮಂಗಳ । ಕರುಣಾಕರ ದೇವ ॥

———